ಹಿತ್ತಲಗಿಡ

ಚಾತುರ್ಮಾಸಿಕ

ಪೈರು ೪, ಕೊಯಿಲು ೩, ೧೯೯೮

(Vol. 3 No.4, October - December, 1998 - New)

ದೇಶೀಯ ಜ್ಞಾನ ಮತ್ತು ಸಂಸ್ಥೆಗಳು, ರೈತ ಮೂಲದ ಅನುಶೋಧನೆ, ಸ್ಥಳೀಯ ಸಂಪನ್ಮೂಲ, ಜೀವ ವಿವಿಧತೆ ಮತ್ತು ರೈತಶಕ್ತಿ ಇವುಗಳ ಮೂಲಕ "ಸುಸ್ಥಿರ ಕೃಷಿ" ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ.

ಬಿಡಿ ಪತ್ರಿಕೆ : ರೂ. 20/-



ಮಕ್ಕಳು ಹೊತ್ತು ತಂದ ಮಾಯಾ ಲೋಕ

ಜನರಿಗೆ ಪ್ರತಿಫಲ ನೀಡುವಂತಹ ತಂತ್ರಜ್ಞಾನ, ಸಂಸ್ಥೆ ಮತ್ತು ಮೌಲ್ಯಗಳನ್ನು ಹುಟ್ಟುಹಾಕುವ ಪ್ರಯತ್ನ

ಹಿತ್ತಲಗಿಡ

ಪೈರು ೪, ಕೊಯಿಲು ೩, ೧೯೯೮
(Vol. 3, No.4, October-December 1998 - New)

'ಹಿತ್ತಲಗಿಡ' ರೈತ, ವಿಜ್ಞಾನಿ, ವಿದ್ಯಾರ್ಥಿ, ಸ್ವಾಯಂ ಸೇವಾ ಸಂಸ್ಥೆ ಮತ್ತು ವ್ಯಕ್ತಿಗಳ ಸಾಮೂಹಿಕ ಪ್ರಯತ್ನ

ಕಲೆ : ಮಲ್ಲೇಶ್ ಮತ್ತು ನರಸಿಂಹಯ್ಯ

ದೇಶೀಯ ಜ್ಞಾನ ಮತ್ತು ಸಂಸ್ಥೆಗಳು, ರೈತ ಮೂಲದ ಅನುಶೋಧನೆ, ಸ್ಥಳೀಯ ಸಂಪನ್ಮೂಲ, ಜೀವ ವಿವಿಧತೆ ಮತ್ತು ರೈತಶಕ್ತಿ ಇವುಗಳ ಮೂಲಕ "ಸುಸ್ಥಿರ ಕೃಷಿ" ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ.

ಜೈವಿಕ ತಂತ್ರಜ್ಞಾನದ ಬಗ್ಗೆ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಮತ್ತು ವಿಜ್ಞಾನಿಗಳ ಘೋಷಣೆ

ಏರುತ್ತಿರುವ ಜನಸಂಖ್ಯೆಗೆ ಆಹಾರ ಒದಗಿಸಲು ಕೃಷಿ ವಲಯದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಬಳಕೆ ಅತ್ಯಗತ್ಯವಾಗಿರುತ್ತದೆ. ಆದರೆ ಈ ತಂತ್ರಜ್ಞಾನ ಯಾರ ಕೈಯಲ್ಲಿದೆ, ಅವರು ಯಾವ ಉದ್ದೇಶಕ್ಕಾಗಿ ಬಳಸುತ್ತಿರುವರು ಮತ್ತು ನಮ್ಮ ಪರಿಸರ ಹಾಗೂ ಸಂಸ್ಕೃತಿಯ ಮೇಲೆ ಈ ತಂತ್ರಜ್ಞಾನದ ಪರಿಣಾಮಗಳೇನು ಎಂಬ ಪ್ರಶ್ನೆಗಳು ಇಲ್ಲಿ ಮುಖ್ಯವಾಗಿರುತ್ತವೆ. ಇಂದು ಜಾಗತೀಕರಣದ ಹಿನ್ನೆಲೆಯಲ್ಲಿ ನಮ್ಮ ದೇಶವನ್ನು ಪ್ರವೇಶಿಸುತ್ತಿರುವ BT ತಂತ್ರಜ್ಞಾನ, ಟರ್ಮಿನೇಟರ್ ತಂತ್ರಜ್ಞಾನ ಒಟ್ಟಾರೆ 'ಜೈವಿಕ ತಂತ್ರಜ್ಞಾನ' or (Biotechnology) ದ ಬಗ್ಗೆ ನಮ್ಮ ರೈತರು, ಪರಿಸರವಾದಿಗಳು, ಪ್ರಜ್ಞಾವಂತ ನಾಗರೀಕರು, ಕೆಲವೊಮ್ಮೆ ವಿಜ್ಞಾನಿಗಳೂ ಈಗಾಗಲೇ ಅನುಮಾನ, ಆತಂಕ ವ್ಯಕ್ತಪಡಿಸುತ್ತಿದ್ದಾರೆ. ಈ ರೀತಿಯ ತಂತ್ರಜ್ಞಾನ ಇಂದು ನಮ್ಮ ರೈತರ, ಕೃಷಿ ವಿಜ್ಞಾನಿಗಳ ಅಷ್ಟೇಕೆ ನಮ್ಮ ಸರ್ಕಾರದ ಗಮನಕ್ಕೆ ಬಾರದೇ, ಅವರ ಪ್ರತಿಕ್ರಿಯೆ ತಿಳಿಯದೇ ಬಳಕೆಯಾಗುತ್ತಿರುವುದನ್ನು ನಾವು ವಿರೋಧಿಸುತ್ತೇವೆ.

ಈ ಹಿನ್ನೆಲೆಯಲ್ಲಿ, ಇನ್ನು ಮುಂದೆ, ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ಸಂಬಂಧಿಸಿರುವ ಯಾವುದೇ ತಂತ್ರಜ್ಞಾನವನ್ನು ನಮ್ಮ ದೇಶದಲ್ಲಿ ಪ್ರಯೋಗಿಸುವ ಅಥವಾ ಬಳಸುವ ಮೊದಲು ನಮ್ಮ ರೈತರ, ವಿಜ್ಞಾನಿಗಳ ಮತ್ತು ಶ್ರೀಸಾಮಾನ್ಯರ ಗಮನಕ್ಕೆ ತಂದು, ಅವರ ಸಮ್ಮತಿ ಪಡೆದ ನಂತರವೇ ಬಳಸಬೇಕು ಹಾಗೂ ಈಗಾಗಲೇ ಪ್ರಯೋಗಕ್ಕೆ ಅಥವಾ ಬಳಕೆಗೆ ಬಿಟ್ಟಿರುವ ಈ ರೀತಿಯ ತಂತ್ರಜ್ಞಾನಗಳನ್ನು ಯುಕ್ತಾಯುಕ್ತ ಪರಿಗಣಿಸಿ ನಿಷೇಧಿಸಬೇಕೆಂದು ಈ ಮೂಲಕ ಒತ್ತಾಯಿಸುತ್ತೇವೆ. ಹಾಗೇ ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಪೇಟೆಂಟ್ (IPR) ಕಾಯಿದೆಗಳನ್ನು ತರಬಾರದೆಂದು ಘೋಷಿಸುತ್ತೇವೆ.

ತಾ : 1.12.1998

ಸ್ಥಳ : *ಗಾಂಧಿ ಕೃಷಿ ವಿಜ್ಞಾನ ಕೇಂದ್ರ ಕೃಷಿ ವಿ.ವಿ. ಬೆಂಗಳೂರು.*

ಸಂಪಾದಕೀಯ

★ ***ಬಂಜೆ ಬೀಜದಂತಹ*** 'ಕಂತ್ರಿಜ್ಞಾನ' ನಮ್ಮೆಲ್ಲರನ್ನೂ ಆವರಿಸಿಕೊಳ್ಳುತ್ತಿದೆ. ಬೀಜವೆಂಬುದು ಜೀವಿಯೊಂದರ ವಂಶಾ ,ಬಿವೃದ್ಧಿಯ, ಒಟ್ಟಾರೆ ಸೃಷ್ಟಿಯ ಸಂಕೇತ. ಅಂದಮೇಲೆ 'ಮೊಳಕೆಯೊಡೆಯದ ಬೀಜ' ಅಥವ ಭ್ರೂಣ ಹತ್ಯೆಯಾಗಿರುವ ಬೀಜ ಅಥವಾ ಈ 'ಬಂಜೆ ಬೀಜ' ದಂತಹ ಅವಿಷ್ಕಾರಗಳತ್ತ ಕೈಹಾಕಿರುವುದು 21 ನೇ ಶತಮಾನದ ವೈಜ್ಞಾನಿಕ ವಿಪರ್ಯಾಸಕ್ಕೊಂದು ದೊಡ್ಡ ಉಧಾಹರಣೆಯಾಗಲಿದೆ. ವಿಜ್ಞಾನ ವೆಂಬುದು ಮನುಕುಲದ ಸೇವೆ ಮಾಡುವ, ತಮ್ಮ ಜೀವನವನ್ನು ಸಾರ್ಥಕಗೊಳಿಸುವ ಅತ್ಯುಚ್ಚ ಮೂರ್ತ ಸಾಧನವೆಂದು ತಮ್ಮ ಬದುಕಿನ ಮೂಲಕ ಸಾರಿ ಹೇಳಿರುವ ಮೇಡಂಕ್ಯೂರಿ, ಲೂಯಿ ಪ್ಯಾಶ್ಚರ್‌ರ ನಾಡಿನಲ್ಲೇ ತಾಂತ್ರಿಕ ಅವಿಷ್ಕಾರಗಳನ್ನೆಲ್ಲಾ ಲಾಭನಷ್ಟಗಳ ಮೂಲಕ ಮಾತ್ರ ಅಳೆಯುವ ಈ ಕ್ಷುಲ್ಲಕ ಪ್ರವೃತ್ತಿ ತಲೆ ಏಳುವಂತಾಗಿರುವುದು ದಿಗ್ಭ್ರಮೆಗೊಳಿಸುತ್ತಲಿದೆ.

ಏರುತ್ತಿರುವ ಜನಸಂಖ್ಯೆಗೆ, ಹಸಿದ ಹೊಟ್ಟೆಗೆ ಅನ್ನನೀಡಲು ಕೃಷಿ ವಿಜ್ಞಾನ, ತಂತ್ರಜ್ಞಾನಗಳಲ್ಲಿ ಪ್ರಗತಿ ಅನಿವಾರ್ಯ ವೇನೊ ಹೌದು. ಮೊದಲಿಗೆ ಸುಧಾರಿಸಿದ ತಳಿಗಳು, ನಂತರ ಹೈಬ್ರಿಡ್ ತಳಿಗಳು ಈ ಕಾರ್ಯನಿರ್ವಹಿಸಲು ಸಹಕಾರಿ ಯಾಗಿರುವುದರಲ್ಲಿ ಅನುಮಾನ ವಿರದು. ಈಗ ಕೃಷಿವಲಯದಲ್ಲಿ ಜೈವಿಕ ತಂತ್ರಜ್ಞಾನ ಈ ನಿಟ್ಟಿನಲ್ಲೇ ತಲೆಎತ್ತುತ್ತಿದೆ. ಪೀಡೆಯ ವಿರುದ್ಧ ಸೂರ್ಯಕವಚವನ್ನು ಧರಿಸಿಯೇ ಜನ್ಮತಾಳುವ 'ಬಿಟಿ ಹತ್ತಿ' ತಳಿಯಂತಹ ತಳಿಯೊಂದರ ಸೃಷ್ಟಿ ಕೃಷಿ ತಂತ್ರಜ್ಞಾನದ ಪ್ರಗತಿಯಲ್ಲಿ ದೊಡ್ಡದೊಂದು ಮೈಲಿಗಲ್ಲೆಂಬುದು ನಿರ್ವಿವಾದದ ವಿಚಾರವಾಗಿರುತ್ತದೆ. ಆದರೆ ಇಲ್ಲಿ ಹೇಳಿ ಕೇಳಿ ಪ್ರಕೃತಿಯ ನಿಯಮದೊಡನೆ ಚೆಲ್ಲಾಟ ವಾಡುವಂತಹದ್ದು. ಈ ಚೆಲ್ಲಾಟ ಒಂದುವೇಳೆ ಹೆಚ್ಚು ಕಡಿಮೆ ಆದಲ್ಲಿ ಆದರಿಂದಾಗುವ ಪರಿಣಾಮಗಳ ಬಗೆಗಿನ ಅರಿವು, ಕಲ್ಪನೆಗಳು ಯಾರಿಗೂ ಇಲ್ಲದಾಗಿದೆ. ಹಾಗಾಗಿ ಈ ಜೈವಿಕತಂತ್ರಜ್ಞಾನದ ಬಳಕೆಯ ಮೊದಲು ಇದರ ಒಳಿತು ಕೆಡುಕುಗಳ ಬಗ್ಗೆ ಸಮಗ್ರ ಅಧ್ಯಯನ ಮತ್ತು ಮುಕ್ತ ಚರ್ಚೆ ಅತ್ಯಗತ್ಯವಾಗಿರುತ್ತದೆ.

ಅಷ್ಟೇ ಮುಖ್ಯವಾಗಿ, ಕೇವಲ ಲಾಭನಷ್ಟಗಳ ಮಾನದಂಡ ಹೊಂದಿರುವ ಬಹುರಾಷ್ಟ್ರೀಯ ಕಂಪನಿಗಳು ಈ ರೀತಿಯ ತಂತ್ರಜ್ಞಾನದ ಮೇಲೆ ಸಂಪೂರ್ಣ ಸ್ವಾಮ್ಯ ಪಡೆದಿದ್ದು, ಭಾರತದಂತಹ ರಾಷ್ಟ್ರಗಳಲ್ಲಿ ಅವುಗಳ ಪ್ರಯೋಗಕ್ಕೆ ಮುಂದಾಗುತ್ತಿವೆ ಎಂಬ ವಿಚಾರದ ಬಗ್ಗೆಯೂ ನಾವು ಚಿಂತಿಸ ಬೇಕಾಗಿದೆ. ನಮ್ಮ ವಿಜ್ಞಾನಿಗಳಿಗೆ ಕನಿಷ್ಟ ಸಾಮಾಜಿಕ ಜವಾಬ್ದಾರಿಯಾದರೂ ಇರುತ್ತದೆ. ರಾಷ್ಟ್ರ, ಸಮಾಜ ಮತ್ತು ಸರ್ಕಾರದ ಪ್ರತ್ಯಕ್ಷ ಅಪ್ರತ್ಯಕ್ಷ ಹತೋಟಿ ಅವರ ಮೇಲಿರುತ್ತದೆ.. ಹೀಗಿರುವಾಗ, ಜೈವಿಕ ತಂತ್ರಜ್ಞಾನದಂತಹ ಅತ್ಯಂತ ನಾಜೂಕಿನ ಅಸ್ತ್ರ ಈ ಬಹುರಾಷ್ಟ್ರೀಯ ಕಂಪೆನಿಗಳ ಕೈವಶವಾಗಿ ಬಳಕೆಯಾಗುವ ಬಗ್ಗೆಯೂ ಅಷ್ಟೇ ಗಂಭೀರ ಚರ್ಚೆ ಅತ್ಯಗತ್ಯವಾಗಿರುತ್ತದೆ. ಪರಿಸ್ಥಿತಿ ಹೀಗಿರುವಾಗ, ಇಂತಹ ತಂತ್ರಜ್ಞಾನದ ಬಗ್ಗೆ ಸಂಪೂರ್ಣ ಅರಿವು, ಮಾಹಿತಿಗಳು ನಮ್ಮ ವಿಜ್ಞಾನಿಗಳಿಗೆ, ರೈತರಿಗೆ, ಜನಸಾಮಾನ್ಯರಿಗೆ ಅಷ್ಟೇಕೆ ಸರ್ಕಾರಕ್ಕೂ ದೊರೆಯದೇ ಇವುಗಳು ಇಂದು ನಮ್ಮ ನೆಲದಲ್ಲಿ ಪ್ರಯೋಗಕ್ಕೆ ಒಳಪಡುವಂತಾಗಿರುವುದು ನಮ್ಮ ಜನತಂತ್ರ ಮೌಲ್ಯಕ್ಕೇ ಮಾಡಿರುವ ದೊಡ್ಡ ಅವಹೇಳನೆಯಾಗಿರುತ್ತದೆ. ಈ ಎಲ್ಲಾ ಗಂಭೀರ ವಿಚಾರಗಳ ಬಗ್ಗೆ ತತ್‌ಕ್ಷಣದ ಓಟಿನ ರಾಜಕೀಯದ ಮೇಲೆ ನಿಂತಿರುವ ನಮ್ಮ ರಾಜಕಾರಣಿಗಳಾಗಲೀ, ಜೈವಿಕ ತಂತ್ರಜ್ಞಾನದಂತಹ ತಾಂತ್ರಿಕ ಪ್ರಗತಿಯನ್ನು ತಮ್ಮ ವೃತ್ತಿಯ 'ಮೌಲ್ಯ' ಮತ್ತು ಘನತೆ ಹೆಚ್ಚಿಸಿಕೊಳ್ಳುವ ಸೀಮಿತ ದೃಷ್ಟಿಕೋನದಿಂದ ಮಾತ್ರ ನೋಡುವಂತಹ ನಮ್ಮ ವಿಜ್ಞಾನಿಗಳಾಗಲೀ ಅಷ್ಟೇನು ತಲೆ ಕೆಡಿಸಿಕೊಳ್ಳದಿರುವುದು ಆಶ್ಚರ್ಯದ ವಿಚಾರವಲ್ಲ. ಬದಲಿಗೆ **"ವಾಣಿಜ್ಯವೇ ನಮ್ಮ ಬದುಕಿನ ರೀತಿಯಾಗಿದೆ, ಲಾಭಾಂಶವೇ ನಮ್ಮನ್ನಾಳುವ ಮೌಲ್ಯವಾಗಿದೆ, ಬಹು ರಾಷ್ಟ್ರೀಯ ಕಂಪೆನಿಗಳೇ ನಮ್ಮ ಮಾರ್ಗ ದರ್ಶಕರು"** ಎಂಬ ತತ್ವಗಳಿಗೆ ತಲೆಬಾಗು ವಂತಹ ಪರಿಸ್ಥಿತಿ ನಿರ್ಮಾಣ ವಾಗುತ್ತಿರುವುದರ ಬಗ್ಗೆ ಪ್ರಜ್ಞಾವಂತರೆಲ್ಲರೂ ತೀವ್ರವಾಗಿ ತಲೆಕೆಡಿಸಿಕೊಳ್ಳಬೇಕಾಗಿದೆ ಮತ್ತು ಈ ನಿಟ್ಟಿನಲ್ಲಿ ನಮ್ಮ ಪ್ರೊಫೆಸರ್ ನಂಜುಂಡ ಸ್ವಾಮಿಯಂತಹವರೊಡನೆ ಕೈಜೋಡಿ ಸುವುದೂ ಅಷ್ಟೇ ಅಗತ್ಯವಾಗಿದೆ.

★ ಭಾರತದ ಆಧ್ಯಾತ್ಮಿಕತೆಯ ಕೇಂದ್ರವಾದ ವಾರಣಾಶಿಯಲ್ಲಿ ತೃತೀಯ ಪಾರಂಪರಿತ ವಿಜ್ಞಾನ ಕಾಂಗ್ರೆಸ್ - ***'ಲೋಕವಿಧ್ಯಾ ಮಹಾಧಿವೇಶನ'*** ಇದೇ ಅಕ್ಟೋಬರ್ - ನವೆಂಬರ್ ನಲ್ಲಿ ಜರುಗಿತು. ವಸ್ತು, ವಿಚಾರ, ಚಿಂತನೆಯ ದೃಷ್ಟಿಯಿಂದ ಮೊದಲನೇ ಅಧಿವೇಶನಕ್ಕಿಂತ ಅಷ್ಟೇನು ಮುಂದುವರೆದಂತೆ ಕಾಣದಿದ್ದರೂ, ಧ್ವನಿಯಲ್ಲಿ ಧೈರ್ಯ, ಭರವಸೆಯಿದ್ದಂತೆ ಕಂಡುಬಂದಿತು. ಹಾಗೇ ನಮ್ಮ ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನ ವ್ಯವಸ್ಥೆಯನ್ನು ಸ್ವಲ್ಪ ಅಲುಗಾಡಿಸುವಷ್ಟು ದೃಢತೆಯಿದ್ದಂತಿತ್ತು. ನೇಕಾರರ ಸಂಘಟನೆಯಿಂದ, ಮಹೇಂದ್ರ ಸಿಂಗ್ ತಿಕಾಯತ್‌ನ 'ಭಾರತೀಯ ಕಿಸಾನ್ ಯೂನಿಯನ್'ವರೆಗೆ ವಿವಿಧ ಜನಪರ ಸಂಘಟನೆಗಳು, ಸಮಾಜವಾದಿ ರೈತ ಧುರೀಣರಾದ ಒರಿಸ್ಸಾದ ಕಿಶನ್ ಪಟ್ನಾಯಕ್, ಮಹಾರಾಷ್ಟ್ರದ ವಿಜಯ ಜಾವಂದಿಯಾ, ಪರಿಸರ ಹೋರಾಟಗಾರ್ತಿ ಮೇಧಾ ಪಾಟ್ಕರ್ ವರೆಗೆ ಹತ್ತಾರು ಜನನಾಯಕರ ಸಕ್ರಿಯ ಭಾಗವಹಿಸುವಿಕೆಯಿಂದ ಈ ಕಾಂಗ್ರೆಸ್‌ನ ಪ್ರಗತಿಪರ ನಿಲುವುಗಳು ಗಟ್ಟಿಯಾಗು ವಂತಾಯಿತು. ಈ ತೃತೀಯ ಕಾಂಗ್ರೆಸ್ ಪಟ್ಟಾ ಗಾಂಧಿವಾದಿಗಳೂ ಮತ್ತು ಸೌಮ್ಯ ಭೌದ್ಧ ಸನ್ಯಾಸಿಗಳ ಸಂಪೂರ್ಣ ಹಿಡಿತದಲ್ಲಿದ್ದರಿಂದ ಈ ನಮ್ಮ ಪಾರಂಪರಿಕ ಜ್ಞಾನ ಮತ್ತು ದೇಶಿಯ ತಂತ್ರಜ್ಞಾನಗಳ ಚಳುವಳಿ ಎಲ್ಲಿ ಪಟ್ಟಭದ್ರ ಹಿತಾಸಕ್ತರು ಮತೀಯ ಶಕ್ತಿಗಳ ಕೈವಶವಾಗುತ್ತದೆಯೊ ಎಂಬ ಹಲವರ ದಿಗಿಲಿಗೆ ಪೂರ್ಣವಿರಾಮ ಹಾಕುವಂತೆ ಮಾಡಿತು. ಆದರೆ ಈ ಚಳುವಳಿ ಇನ್ನಷ್ಟು ಗಟ್ಟಿಯಾಗಲು ತಳಮಟ್ಟದ ಜನರೊಡನೆ ಸೇರಿ ಹೋರಾಟ ನಡೆಸುತ್ತಿರುವ ಪ್ರಗತಿಪರ ವ್ಯಕ್ತಿ ಮತ್ತು ಸಂಘಟನೆಗಳ ಕೈವಶವಾಗುವುದು ಮತ್ತು ಸಂಸ್ಕೃತಿ, ಪರಿಸರ, ಸಮಾನತೆಗಳನ್ನು ಗುರಿಯಾಗಿಟ್ಟಕೊಂಡ ಪರ್ಯಾಯ ಅಭಿವೃದ್ಧಿಯ ಮಾದರಿಯೊಂದನ್ನು ಈ ದೇಶಕ್ಕೆ ನೀಡುವ ಮೂಲ ಗುರಿಯನ್ನು ಹೊಂದುವಂತಾಗುವುದು ಅತ್ಯಗತ್ಯವಾಗಿದೆ.

★ ಪರಿಸರದ ಬಗ್ಗೆ ಎರಡು ಉತ್ತಮ ಕೃತಿಗಳು ಹೊರಬಂದಿವೆ. ನಿವೃತ್ತ ಆಡಳಿತ ಸೇನಾ ಅಧಿಕಾರಿ ಎಂ ಮಹೇಶನ್ ರ ***'ಪರಿಸರ ಪ್ರಜ್ಞೆ ಕಥೆ - ವ್ಯಥೆ'*** ಮತ್ತು ಪರಿಸರ ವಿಜ್ಞಾನ ಪರಿಷತ್ತು ಮತ್ತು ಜವಹರಲಾಲ್ ನೆಹರೂ ಸಂಶೋಧನೆ ಸಂಸ್ಥೆಗಳು ಜಂಟಿಯಾಗಿ ಹೊರತಂದಿರುವ ***'ಪರಿಸರ ಮುಂದೇನು'*** ಈ ಎರಡು

ಪುಸ್ತಕಗಳು ಪರಿಸರ ಸಂರಕ್ಷಣೆ ವಿಚಾರದಲ್ಲಿ ತೊಡಗಿರುವವರೆಲ್ಲರಿಗೂ ಉತ್ತಮ ಮಾಹಿತಿ ದೊರಕಿಸುವುದಾದರೂ ಒಟ್ಟಾರೆ ಇಂದು ನಡೆಯುತ್ತಿರುವ ಪರಿಸರ ಚಳುವಳಿಗಳಿಗೆ ಒಂದು ಸ್ಪಷ್ಟ ವೈಚಾರಿಕ ನೆಲಗಟ್ಟು ದೊರಕಿಸುತ್ತದೆಯೆ ಎಂಬ ಪ್ರಶ್ನೆಗೆ ಸಮರ್ಪಕ ಉತ್ತರ ದೊರಕಿಸಲಾರವು.

ನಗರ ಸಂಸ್ಕೃತಿಯ ಹಿನ್ನೆಲೆಯ ವಿಚಾರಕರಿಂದ ನಗರೀಕರಣ ಅಥವಾ ಕೈಗಾರೀಕರಣಗಳಿಗೆ ಪೂರಕವಾದಂತಹ ವಿಚಾರಧಾರೆಗಳು ಏಳು ಬಹುದಾಗಿದ್ದು, ಅದರಲ್ಲಿ 'ಉಳ್ಳವರ' ಹಿತಾಸಕ್ತಿಗಳು ಪ್ರಾಮುಖ್ಯವಾಗಿರುತ್ತದೆಯೇ ಹೊರತು ಗ್ರಾಮಸ್ತರ, ರೈತರ, ಬುಡಕಟ್ಟು ಆದಿವಾಸಿಗಳ ಒಟ್ಟಾರೆ ಕಡುಬಡವರ ಬಗೆಗಿನ ಕಾಳಜಿಗಳು ಅಷ್ಟಕಷ್ಟೆ. ಉಧಾಹರಣೆಗೆ, ಈ ಎರಡೂ ಪುಸ್ತಕಗಳಲ್ಲಿ ಜೀವ ವಿವಿಧತೆಯ ಬಗ್ಗೆ, ಅದರ ರಕ್ಷಣೆಯ ವಿಚಾರದ ಬಗ್ಗೆ, ಪೇಟೆಂಟಿನ ಹಾವಳಿಯ ಬಗ್ಗೆ ವಿವರವಾದ ಚರ್ಚೆ ಇದೆ. ಆದರೆ ಈ ಜೀವ ವಿವಿಧತೆಗೂ ಜನಸಾಮಾನ್ಯರ 'ಜೀವನಭದ್ರತೆ' (Livelihood security) ವಿಚಾರಗಳಿಗೂ ಹಾಗೇ ಜೀವಿ ವಿವಿಧತೆ ಮತ್ತು ಈ ದೇಶದ ಜೀವನಾಡಿಯಾಗಿರುವ ಸಾಂಸ್ಕೃತಿಕ ವೈವಿಧ್ಯಕ್ಕೂ ಇರುವ ಸಂಬಂಧಗಳ ಬಗ್ಗೆಯಾಗಲೀ ಪ್ರಸ್ತಾಪವಿಲ್ಲ. ಹಾಗೇ, ಈ ದೇಶದಲ್ಲಿ ಜೀವ ವಿವಿಧತೆ ನಾಶವಾದದ್ದೇ ಆದಲ್ಲಿ ಅದರಿಂದ ಎಲ್ಲಾ ಕಡುಬಡವರನ್ನೊಳಗೊಂಡಿರುವ ನಮ್ಮ ಈ 'ನಾಟಿ ಸಂಸ್ಕೃತಿಗಳ' ಜೀವ ನಾಡಿಯೇ ತುಂಡಾಗುವಂತಹ ಅಪಾಯದ ಬಗ್ಗೆ ಚರ್ಚೆಯನ್ನು ಕೊಂಡೊಯ್ಯಲಾರದಂತಹ ವೈಚಾರಿಕ ವಿಕಲತೆ ಇಲ್ಲಿ ಎದ್ದು ಕಾಣುತ್ತಿರುತ್ತದೆ. ಇದು ಸಾಲದಕ್ಕೆ ನಮ್ಮ ಸಮಾಜವಾದಿ ಸಾಹಿತಿಗಳಾದ ಯು.ಆರ್. ಅನಂತ ಮೂರ್ತಿಯಂತಹವರು ಈ ಪರಿಸರ ನಾಶದ ವಿಚಾರವನ್ನು ಗಾಂಧೀಜಿಯ 'ಅಸ್ವಾದ' ತತ್ವಕ್ಕೆ ಅಂಟಿಸಿ, ಸರಳೀಕರಿಸುವ ತರಾತುರಿಯಲ್ಲಿ, ಮತ್ತಷ್ಟು ಗೊಂದಲ ವೆಬ್ಬಿಸುವಂತೆ ಮಾಡಿರುವರು.

ಮಹೇಶ್‌ರವರ ಪುಸ್ತಕಕ್ಕೆ ಮುನ್ನುಡಿ ಬರೆಯುತ್ತ ಅನಂತಮೂರ್ತಿಯವರು "ಮಾನವ ತನ್ನ ನಾಲಿಗೆಯ ರುಚಿಯಿಂದ ಕಾಫಿ, ಹೊಗೆಸೊಪ್ಪು, ಚಹಾಕ್ಕೆ ಸೋತು ಎಷ್ಟೊಂದು ಕಾಡುಗಳನ್ನು ನಾಶಮಾಡಿರುವನು" ಎಂಬ ತೀರ್ಮಾನಕ್ಕೆ ಬಂದಿರುವರು. ಬೋಳು ತಲೆಯಲ್ಲಿ ಅಲ್ಲಲ್ಲಿ ಕೂದಲುಗಳಿರುವಂತೆ ನಮ್ಮ ಪಶ್ಚಿಮ ಘಟ್ಟ ಪ್ರದೇಶದಲ್ಲಿ ಅಲ್ಪ ಸ್ವಲ್ಪ ಮರ, ಕಾಡು, ಹಸಿರುಗಳು ಉಳಿದಿದ್ದೇ ಆದಲ್ಲಿ ಅದು ಕಾಫಿ, ಚಹ, ಏಲಕ್ಕಿ, ಕರಿಮೆಣಸು ಸಸ್ಯಗಳಿಗೆ ನೆರಳು, ಆಸರೆ ನೀಡಲು ಬೆಳಸಿ ಉಳಿಸಿರುವ ಪ್ಲಾಂಟೇಶ್‌ನ್ ತೋಟಗಳಲ್ಲಿ. ಹಾಗಾಗಿ, ಈ ಪ್ಲಾಂಟೇಶನ್ ಅರಣ್ಯವನ್ನೂ ಒಂದು ವಿಧದ ಅರಣ್ಯ ಸಂರಕ್ಷಣೆ ಎಂದು ಅರಣ್ಯ ಶಾಸ್ತ್ರಜ್ಞರು ಈಗಾಗಲೇ ಮನಗಂಡಿರುವ ವಿಚಾರ ಹಲವರಿಗೆ ತಿಳಿದಿರುವಂತಹದ್ದು. ಇಲ್ಲಿ ಕಾಫಿ, ಚಹಾಗಳ ಸಮರ್ಥನೆ ಮಾಡುತ್ತಿಲ್ಲ. ಆದರೆ ಅನಂತಮೂರ್ತಿಯಂತಹವರ ಪರಿಸರದ ಬಗೆಗಿನ ವಿಚಾರಧಾರೆಯ ನೆಲಗಟ್ಟು ಹೇಗೆ ವಾಸ್ತವಿಕತೆಗೆ ದೂರವಾಗಿದೆ ಎಂಬುದನ್ನು ಅರಿಯುವುದಾಗಿದೆ.

ಹಾಗೇ, ಅನಂತಮೂರ್ತಿಯವರು, ನಾಲಿಗೆ ಬೆಳಸಿಕೊಂಡಿರುವ, ರುಚಿಯಲ್ಲಿನ ವೈವಿಧ್ಯವನ್ನು ಪರಿಸರ ನಾಶದ ಹಿನ್ನೆಲೆಯಲ್ಲಿ ಪ್ರಶ್ನಿಸಿ, ಇದಕ್ಕೆ ಗಾಂಧೀವಾದ, ಸಾಧು, ಸಂತರ ಮತ್ತು ಆಧ್ಯಾತ್ಮಕತೆಯ ನೆರವನ್ನು ಉಪಯೋಗಿಸಿಕೊಂಡಿರುವರು. ಆದರೆ ಈ ಜಿಹ್ವ ವಿವಿಧತೆಯೇ ನಮ್ಮ ಆಹಾರದ ವಿವಿಧತೆ - ಉತ್ತರದ ಗೋಧಿ ಚಪಾತಿ, ಬಯಲು ಸೀಮೆಯ ಜೋಳದ ರೊಟ್ಟಿ, ದಕ್ಷಿಣದ ರಾಗಿ ಮುದ್ದೆ, ಮಲೆನಾಡಿನ ಅನ್ನದ ಊಟ, ಕರಾವಳಿಯ ಕುಚಲಕ್ಕಿ ಅನ್ನ, ಕೊಂಕಣದ ಪುನರ್ ಪುಳಿ, ಹವ್ಯಕರ ಅಪ್ಪೆಹುಳಿ ಇತ್ಯಾದಿಗಳು ಇಲ್ಲಿಯವರೆಗೆ ಉಳಿಯುವಂತೆ ಮಾಡಿದೆ. ಈ ಆಹಾರದ ವೈವಿಧ್ಯವೇ ನಮ್ಮ ನೂರಾರು ನಾಟೀ ತಳಿಗಳು - ಬೈರನೆಲ್ಲು, ಹೆಗ್ಗ, ಶೇವಕಾರ್, ಉಮ್ಮದ್ಲು, ರತ್ನಚೂಡಿ, ವಾಳ್ಯ, ಕರಿಕಡ್ಡಿರಾಗಿ, ಹಾಲುರಾಗಿ, ತೈದಲುಗಳು ಹಾಗೇ ದೇವನಹಳ್ಳಿಯ ಚಕ್ಕೋತ, ನಂಜನಗೂಡಿನ ರಸಬಾಳೆ, ಬೆಳುವಲನಾಡಿನ ಗಜನಿಂಬೆಯಂತಹ ನಾಟೀ ಹಣ್ಣುಗಳೂ, ಒಟ್ಟಾರೆ ನಮ್ಮ ಈ ಅಮೂಲ್ಯ ಜೀವವಿಧತೆಯನ್ನೆ ಉಳಿಸುವಂತೆ ಮಾಡಿರುವುದು ಮಾತ್ರವಲ್ಲ ಇದರ ಮೇಲೆ ನಿಂತಿರುವ ನಮ್ಮೆಲ್ಲ ನಾಟೀ ಜನಾಂಗಗಳಿಗೆ ಜೀವನ ಭದ್ರತೆಯನ್ನು ಇದುವರೆಗೆ ಕಾಪಾಡಿಕೊಳ್ಳಲು ಸಹಕಾರಿಯಾಗಿದೆ ಎಂದು ಜ್ಞಾಪಿಸಬೇಕಾಗಿದೆ. **ಅಂದಮೇಲೆ, ನಮ್ಮ ಈ ಪರಿಸರ ಚಳುವಳಿಗಳಿಗೆ ಅತ್ಯಗತ್ಯವಾಗಿರುವ ವೈಚಾರಿಕ ನೆಲಗಟ್ಟಿನ ರೂಪರೇಷೆಗಳೇನು ?**

★ ಜೀವವಿವಿಧತೆಯನ್ನು ಸಂರಕ್ಷಿಸುವ ವಿಚಾರದ ರೀತಿಯಲ್ಲೇ ಪರಿಸರ ಸಂರಕ್ಷಣೆಯ ವಿಚಾರವನ್ನು ಬಡತನದೊಡನೆ ತಳುಕು ಹಾಕಿ ನೋಡುವುದನ್ನು ಪ್ರಾರಂಭಿಸಿದ್ದೇ ಆದಲ್ಲಿ ಅದು ಈ ದೇಶಕ್ಕೆ ಹೇಳಿಮಾಡಿಸಿದಂತಿರುವ ದೇಶೀಯ ವೈಚಾರಿಕ ನೆಲೆಗಟ್ಟೊಂದನ್ನು ನಮ್ಮ ಪರಿಸರ ಚಳುವಳಿಗೆ ನೀಡಲಿದೆ. ಇದಕ್ಕೆ ಮೊದಲು ಆಗಬೇಕಾಗಿರುವುದೆಂದರೆ "ಕೊಳೆಗೇರಿಗಳಿಂದ ನಗರದ ನೈರ್ಮಲ್ಯ ನಾಶವಾಗುತ್ತಿದೆ, ಕಡುಬಡವರು ಕಾಡುಕಡಿದು ಅರಣ್ಯ ನಾಶ ಮಾಡುತ್ತಿರುವರು, ಬಡರೈತರಿಂದ ಭೂಮಿ ಬರಡಾಗುತ್ತಿದೆ" ಎಂಬೆಲ್ಲಾ ಪ್ರತಿಗಾಮಿ ಧೋರಣೆಗಳಿಂದ ದೂರಸರಿದು **"ಪರಿಸರ ನಾಶದ ನೇರ ಪರಿಣಾಮ ಮೊದಲು ತಟ್ಟುವುದು ನಮ್ಮ ಕಡುಬಡವರಿಗೆ"** ಎಂಬ ಕಟುಸತ್ಯವನ್ನರಿಯಬೇಕಾಗಿದೆ. ಹಾಗೇ, ಈ ಪರಿಸರ, ಜೀವವಿವಿಧತೆ ಮತ್ತು ನೈಸರ್ಗಿಕ ಸಂಪನ್ಮೂಲಗಳೆಲ್ಲವುಗಳ ಅಭಿವೃದ್ಧಿಯ ಜೊತೆಗೆ ಇವುಗಳ ಉಪಯೋಗ ಮತ್ತು ಒಡೆತನದ ವಿಚಾರಗಳನ್ನು ಬಡತನ ಮತ್ತು ಅಸಮಾನತೆಗಳನ್ನು ನಿರ್ಮೂಲನೆ ಮಾಡುವತ್ತ ತಿರುಗಿಸಿ, ಆ ಮೂಲಕ ಸುಸ್ಥಿರ ಅಭಿವೃದ್ಧಿಯ ಮಾದರಿಯೊಂದನ್ನು ರೂಪಿಸಿಕೊಳ್ಳುವಂತಹ ಪ್ರಗತಿಪರ ಧೋರಣೆಯೊಂದನ್ನು ಆಯ್ದು ಗಟ್ಟಿಗೊಳಿಸುವುದು ಇಂದು ಪರಿಸರ ಚಳುವಳಿಯಲ್ಲಿ ತೊಡಗಿಸಿಕೊಂಡಿರುವವರಿಗೆಲ್ಲಾ ಅತ್ಯಗತ್ಯವಾಗಿರುತ್ತದೆ. ಹೀಗೆ, ಪರಿಸರದ ವಿಚಾರದಲ್ಲಿ ಕೇಂದ್ರವು ಅಷ್ಟೇ ಸ್ಪಷ್ಟವೂ ಆಗಿರುವ ಈ **'ಸಮಾನತೆಯು'** ವಿಚಾರವನ್ನು ಅದು ಬರಿದೇ ಈ ಒಂದು ತಲೆಮಾರಿನ ಜನಾಂಗಕ್ಕೆ ಮಾತ್ರ ಸೀಮಿತಗೊಳ್ಳದೇ ಮುಂಬರುವ ಜನಾಂಗಗಳೆಲ್ಲವುದಕ್ಕೂ ವ್ಯಾಪಿಸಿರುವ ರೀತಿಯನ್ನು ಅರಿಯುವುದು ಅತ್ಯಂತ ಸೂಕ್ತವಾಗಿದೆ.

ಈ ಸಮಾನತೆಯ ವ್ಯಾಪ್ತಿಯನ್ನು ಇನ್ನೂ ಒಂದು ಹಂತ ಮೇಲೆ ತಂದು ಮಾತಾಡಲಾರದ ಮೂಕ ಪಶು, ಪಕ್ಷಿ, ಪ್ರಾಣಿ, ಕ್ರಿಮಿ, ಕೀಟಾದಿಗಳಿಗೂ, ಅಷ್ಟೇಕೆ ಮರ, ಗಿಡಗಳವರೆಗೂ ಕೊಂಡೊಯ್ದಿದ್ದೇ ಆದಲ್ಲಿ, ಅದಕ್ಕಿಂತ ಮಿಗಿಲಾದ ಆಧ್ಯಾತ್ಮಕತೆ ಮತ್ತೊಂದಿರಲಾರದು.

ಸಂಪಾದಕೀಯ

ಸಮಾಜವಾದಿ ಸಾಹಿತಿ - ಚಿಂತಕರಾದ ನಮ್ಮ ಪ್ರೀತಿಯ ಅನಂತಮೂರ್ತಿಯವರು ಪರಿಸರವಾದದ ಸೈದ್ಧಾಂತಿಕ ನೆಲೆಗಟ್ಟನ್ನು ಈ ನಿಟ್ಟಿನಲ್ಲಿ ಅರಿತು ಗಟ್ಟಿಮಾಡಲು ಪ್ರಯತ್ನಿಸಿದ್ದೇ ಆದಲ್ಲಿ ನಮ್ಮ ಪರಿಸರ ಚಳುವಳಿಗೆ ಹೊಸ ಅರ್ಥಬರಲಿದೆ.

★ ದೇಶೀಯ 'ಸಂಸ್ಥೆಗಳು' ಶೀರ್ಷಿಕೆಯಲ್ಲಿ ಕೆಲವು ವಿಶಿಷ್ಟ ಕೃಷಿ ಆಚರಣೆಗಳು, ಮಕ್ಕಳು ಸಂಗ್ರಹಿಸಿದ ಜನಪದ ಕಥೆಗಳು ಹಾಗೇ ಸಾಮೂಹಿಕವಾಗಿ ಜಾನುವಾರುಗಳಿಗೆ ಬಳಸುತ್ತಿದ್ದ 'ಮದ್ದಿನ ಮಡಿಕೆ' ಬಗೆಗಿನ ಲೇಕನಗಳನ್ನು ಕೊಡಲಾಗಿದೆ. ಭಾರತದಂತಹ ಕೃಷಿಪ್ರಧಾನ ರಾಷ್ಟ್ರದಲ್ಲಿ ಕೃಷಿ ಎಂಬುದು ಬರಿ ಒಂದು ಕಸುಬಲ್ಲ. ಇದು ರೈತರಿಗೊಂದು ಬದುಕಿನ ರೀತಿ ಮಿಗಿಲಾಗಿ ಅವರ "ಸಂಸ್ಕೃತಿಯೇ" ಆಗಿದೆ. ಇಲ್ಲಿ ಕೃಷಿ ಎಂಬುದು ಹೇಳಿ ಕೇಳಿ ಪ್ರಾಣಿ, ಪಶು, ಪಕ್ಷಿ, ಮರ, ಗಿಡ, ಸಸ್ಯ, ಒಟ್ಟಾರೆ, ಪ್ರಕೃತಿಯೊಡನೆ ತದಾತ್ಮತೆ ಸಾಧಿಸಿ ನಡೆಸುವ ಕಸುಬೇ ಹೊರತು ಶುದ್ಧ ಯಾಂತ್ರಿಕ ಕಸುಬಲ್ಲ. ಇಲ್ಲಿನ ವ್ಯವಹಾರ ಸಂವಾದಗಳು ಬರಿ ಮನುಷ್ಯಜಗತ್ತಿಗೆ ಸೀಮಿತವಾಗಿರದೆ, ಪ್ರಾಣಿ, ಸಸ್ಯ ಒಟ್ಟಾರೆ ಜೀವಿ ಜಗತ್ತನ್ನೇ ದಾಟಿ ದೇವರು, ರಾಕ್ಷಸರುಗಳ ಅಭೌತಿಕ ಜಗತ್ತಿಗೇ ಕಾಲಿಟ್ಟಿರುತ್ತದೆ. ನಮ್ಮ ಜನಪದ ಸಾಹಿತ್ಯ, ಕಲೆಗಳೇನೋ ದೇಶೀಯ / ಪಾರಂಪರಿಕ ಕೃಷಿಯ ಈ ಆಯಾಮವನ್ನು ಅರಿತು ಅರಗಿಸಿಕೊಳ್ಳಲು ಪ್ರಯತ್ನಿಸಿದವು. ಆದರೆ ಅದು ಸಾಹಿತ್ಯ, ಕಲೆಗಳಿಗೆ ಸೀಮಿತವಾಗಿತ್ತೇ ಹೊರತು ಸುಸ್ಥಿರ ಬದುಕಿನ ಎಳೆಯನ್ನು ಅರಿಯುವ ನಿಟ್ಟಿನಲ್ಲಾಗಿರಲಿಲ್ಲ.

ಮಿಗಿಲಾಗಿ, ಕೃಷಿಯೆಂಬುದು ನಮ್ಮ ರೈತರಿಗೆ ಒಗ್ಗೂಡಿ ಸಾಮೂಹಿಕವಾಗಿ ನಡೆಸುವ ಜೀವನ ಕ್ರಿಯೆಯೇ ಹೊರತು ಒಂಟಿಯಾಗಿ ಮಾಡುವ ಕಾರ್ಯವಲ್ಲ. ಭಾರತದಂತಹ ಪ್ರಾಚೀನ ದೇಶದ ಕೃಷಿಯ ಅವಿಭಾಜ್ಯ ಅಂಗಗಳಾದ ಈ **"ಸಂಸ್ಕೃತಿ, ಪ್ರಕೃತಿ ಮತ್ತು ಸಾಮೂಹಿಕತೆ"** ಗಳನ್ನು ಈ ರೀತಿಯ ದೇಶೀಯ ಸಂಸ್ಥೆಗಳೇ ಹಿಡಿದಿಟ್ಟು ಗಟ್ಟಿಮಾಡಲು ಸಹಕಾರಿಯಾಗಿವೆ ಎಂಬುದು ಇಲ್ಲಿ ಮುಖ್ಯ. ಈ ಆಯಾಮಗಳನ್ನು ಮೂಲೆಗುಂಪಾಗುವಂತೆ ಮಾಡಿರುವುದು ಆಧುನಿಕ ತಂತ್ರಜ್ಞಾನ ನಮ್ಮ ಕೃಷಿ ಪದ್ಧತಿಗೆ ನೀಡಿರುವ ದೊಡ್ಡ ಪೆಟ್ಟಾಗಿರುತ್ತದೆ ಮತ್ತು ಆಧುನಿಕ ಕೃಷಿಯ ಅಸ್ಥಿರತೆಗೂ ಇದೇ ಮೂಲಕಾರಣವಾಗಿರುತ್ತದೆ. ಇದನ್ನು ಸರಿಪಡಿಸುವುದು ಈಗ ಅತ್ಯಗತ್ಯವಾಗಿದ್ದು ಈ ನಿಟ್ಟಿನಲ್ಲಿ ಬೆಂಗಳೂರು ಮೂಲದ **ಗ್ರೀನ್ ಪ್ರತಿಷ್ಠಾನದ** ಕಾರ್ಯ - ಅದೂ ಎಳೆಯರನ್ನು ಜನಪದ ಲೋಕಕ್ಕೆ ಎಳೆತರುವಂತೆ ಮಾಡಿದ್ದು ಅತ್ಯಂತ ಶ್ಲಾಘನೀಯ.

★ ಅಂತಿಮವಾಗಿ, ನಮ್ಮ ಸಾವಯವ ಕೃಷಿಋಷಿ ಕುರುವಳ್ಳಿ ಪುರುಷೋತ್ತಮ ರಾಯರು ಇನ್ನಿಲ್ಲವಾಗಿರುವ ದುಃಖದ ವಿಚಾರ. ಪುರುಷೋತ್ತಮರಾಯರು ಕರ್ನಾಟಕದಲ್ಲಿ ಸಾವಯವ ಕೃಷಿ ಚಳುವಳಿ ಗಟ್ಟಿಯಾಗಲು ನೀಡಿದ ಕೊಡುಗೆ ಅಪಾರ. ಇವರು ಸ್ವತಃ ಆಚರಿಸಿದ ಕೃಷಿ ಪದ್ಧತಿ ಬರಿದೇ ಸಾವಯವ ಕೃಷಿಯಾಗಿರದೆ ಅದನ್ನೂ ಮೀರಿನಿಂತು ಈ ಹಿಂದೆ ಚರ್ಚಿಸಿದ ನಮ್ಮ ಪಾರಂಪರಿಕ ಕೃಷಿಯ ಎಲ್ಲಾ ಆಯಾಮಗಳನ್ನೂ ಗಟ್ಟಿಮಾಡುವ ಪ್ರಯತ್ನವಾಗಿರುತ್ತದೆ ಎನ್ನಬಹುದು. ರಾಸಾಯನಿಕ ಕೃಷಿಗೆ ವಾಲುತ್ತಿದ್ದ ಆ ದಿನಗಳಲ್ಲೂ ಸಾವಯವ ಕೃಷಿಯಲ್ಲಿ ಮಲೆನಾಡಿನ ಹಲವಾರು ರೈತರು ತೊಡಗುವಂತಾಗಲು ಪುರುಷೊತ್ತಮ ರಾಯರೇ ಮೂಲ ಪ್ರೇರಣೆ ಯಾಗಿದ್ದರು. "ಗುಂಟೆಗೊಂದು ಕ್ವಿಂಟಾಲ್ ಅಡಿಕೆ ಬೆಳೆಯುವೆ, ಪ್ರತಿ ತಿಂಗಳೂ ಬೆಳೆ ತೆಗೆಯುವೆ" ಎಂದು ರಾಯರು ಹೆಮ್ಮೆಯಿಂದ ಹೇಳತೊಡಗಿದಾಗ ಅದು ಉತ್ಪ್ರೇಕ್ಷೆಯ ಮಾತೆಂದು ಹೊರಗಿನವರಿಗೆ ಅನ್ನಿಸಿದರೂ ಮಲೆನಾಡಿನ ರೈತರಿಗೆ ಮಾತ್ರ ಅದು ರಾಯರು ಆ ಕೃಷಿ ಪ್ರಯೋಗದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವಲ್ಲಿ ನೀಡಿದ ಅಪಾರ ಭರವಸೆಯಾಗಿತ್ತು. ಇವೆಲ್ಲಕ್ಕಿಂತ ಮಿಗಿಲಾಗಿ ಶ್ರೀ ಪುರುಷೋತ್ತಮ ರಾಯರಲ್ಲಿದ್ದ ಮಾನವೀಯ ಗುಣಗಳಿಗೆ ಸರಿಸಾಟಿ ಇರಲಿಲ್ಲ. ಅವರ ಕುರುವಳ್ಳಿ ಕೃಷಿನಿವಾಸಕ್ಕೆ ಹೋದವರಿಗೆಲ್ಲಾ ದೊರೆಯುತಿದ್ದ ಸತ್ಕಾರ, ರಾಯರು ತೋರುತ್ತಿದ್ದ ಪ್ರೀತಿ ವಿಶ್ವಾಸಗಳು ಮರೆಯಲಾರದಂತಹವು. ಪುರುಷೋತ್ತಮ ರಾಯರ ರಾಜಕೀಯ ಹಿನ್ನೆಲೆಯನ್ನು ಒಪ್ಪದವರೂ ಅವರ ಈ ಮಾನವೀಯ ಗುಣಗಳಿಗೆ, ಸಾವಯವ ಕೃಷಿಯ ಮೇಲಿನ ಅವರ ನಿಷ್ಠೆಗೆ ಮಾರು ಹೋಗುವಂತಾಗಿದ್ದರು. ಇಷ್ಟಾದರೂ ಪುರುಷೋತ್ತಮ ರಾಯರು ಅತ್ಯಂತ ವ್ಯಾವಹಾರಿಕ ರೈತರು. ಫಲದಿಂದ, ವೆನಿಲ್ಲಾದಂತಹ ವಾಣಿಜ್ಯ ಬೆಳೆಗಳನ್ನು ತಮ್ಮ ಸಾವಯವ ಪ್ರಯೋಗಕ್ಕೆ ಒಳಪಡಿಸಿ ರಫ್ತುಮಾಡಿ ತಮ್ಮ 'ಪರಿವಾರದ' ಹಲವರ ಜೇಬುಗಟ್ಟಿಗೊಳ್ಳುವಂತೆ ಮಾಡಿದ್ದರು. ಮಕ್ಕಳಿಲ್ಲದ ರಾಯರಿಗೆ ನಿಜ ಅರ್ಥದಲ್ಲಿ ಸಾವಯವ ಕೃಷಿಯೇ ದತ್ತು ಮಗುವಾಗಿತ್ತು. ಇದನ್ನು ಬೆಳೆಸಲು ಹಲವು ಯೋಜನೆಗಳನ್ನು ಹಾಕಿಕೊಂಡು ತಮ್ಮ ಅಂತಿಮದಿನಗಳಲ್ಲೂ ಕನಸು ಕಾಣುತ್ತಿದ್ದರು. "ಇವು ಈಡೇರದವರೆಗೆ ಸಾವು ನನ್ನನ್ನು ತಟ್ಟುವುದಾದರೂ ಹೇಗೆ ಸಾಧ್ಯ" ಎಂದು ಎದೆತಟ್ಟುತ್ತಿದ್ದರು. ಆದರೆ ವಿಧಿಯಾಟ ಇದನ್ನು ಹುಸಿಗೊಳಿಸಿತು. ಈಗ ಅವರ ಈ ಕನಸುಗಳನ್ನು ನನಸುಮಾಡುವ ಸಾಧ್ಯತೆ ಅವರು ನಂಬಿದ ಮಿತ್ರರ ಮತ್ತು ಅವರೇ ಸಾಕಿ ಬೆಳೆಸಿದ ತರುಣರ ಮೇಲೆ ನಿಂತಿದೆ. ಆದರೆ ರಾಯರ ಪ್ರಯೋಗ ಭೂಮಿಯಾದ 'ಕೃಷಿನಿವಾಸ'ಕ್ಕೆ ಭೇಟಿ ನೀಡುವವರಿಗೆಲ್ಲಾ ಅದೇ ಪ್ರೀತಿ, ವಿಶ್ವಾಸ, ಭರವಸೆಗಳು ಸದಾದೊರೆಯುವಂತೆ ಮಾಡುವ ಗುರುತರ ಜವಾಬ್ದಾರಿ ಮಾತ್ರ ರಾಯರ. ಬಾಳಿನುದ್ದಕ್ಕೂ ಅವರಿಗೆ ಶಕ್ತಿ ನೀಡುತ್ತ ಅವರ ಅಧಮ್ಯ ಚೈತನ್ಯದ ಮೂಲ ಸೆಲೆಯಾಗಿದ್ದ ಅವರ ಪತ್ನಿ ಶ್ರೀಮತಿ ಶಾಂತಾರವರ ಮೇಲಿದೆ. ಇದನ್ನು ನಿಭಾಯಿಸುವ ಶಕ್ತಿ ಅವರಿಗೆ ದೊರೆಯಲೆಂದು ಎಂದು ಹಿತ್ತಲಗಿಡ ಹಾರೈಸುತ್ತದೆ. ಹಾಗೇ ರಾಯರು ಸದಾ ಜಪಿಸುತ್ತಿದ್ದ :

1. ನಿಮ್ಮ ಜಮೀನಿನಲ್ಲಿ ಎಲ್ಲಾ ಗಿಡಗಳನ್ನು ನಿಮ್ಮ ಕೈಯಿಂದ ಮುಟ್ಟಿದ್ದೀರಾ ?

2. ನಿಮ್ಮ ಕಾಲಿನಿಂದ ನಿಮ್ಮ ಜಮೀನಿನ ಎಲ್ಲಾ ಭಾಗವನ್ನು ಮೆಟ್ಟಿದ್ದೀರಾ ? ಮತ್ತು

3. ನೀವು ಎಂದಾದರೂ ಬೆಳೆ ಹಾಳೆಯ ಮೇಲೆ ಗಿಡಕ್ಕೆ ಏನು ಮಾಡಿಲ್ಲ ಎಂದು ಬರೆದಿಟ್ಟಿದ್ದೀರಾ ?

ಈ ಮೂರು ಪ್ರಶ್ನೆಗಳನ್ನು ನಾವು ಅರಗಿಸಿಕೊಳ್ಳಲು ಪ್ರಯತ್ನಿಸೋಣ ಎಂದು ಹಿತ್ತಲಗಿಡ ಆಶಿಸುತ್ತದೆ.

ಡಾ. ಟಿ. ಎನ್. ಪ್ರಕಾಶ್ ಕಮ್ಮರಡಿ

ಕಾಯಿ ಕೊರಕ ನಿಯಂತ್ರಣ

ತೊಗರಿಬೇಳೆಯಲ್ಲಿ ಕಾಯಿ ಕೊರಕದ ನಿಯಂತ್ರಣಕ್ಕೆ ಅನೇಕ ದೇಶೀಯ ಪದ್ಧತಿಗಳಿವೆ.

❖ ಬೇಸಿಗೆಯಲ್ಲಿ ಆಳವಾಗಿ ಉಳುಮೆ ಮಾಡುವುದರಿಂದ ಕೋಶಾವಸ್ಥೆಯಲ್ಲಿರುವ ಹುಳುಗಳು ಹಕ್ಕಿಗಳಿಗೆ ಆಹಾರವಾಗುತ್ತವೆ. ಹಾಗೇ ಬಿಸಿಲಿನಿಂದಲೂ ಸಾಯುತ್ತವೆ.

❖ ಜೋಳದೊಂದಿಗೆ ಬೇಳೆ ಬೆಳೆಯುವುದರಿಂದ ಹಕ್ಕಿಗಳು ಆಕರ್ಷಿತವಾಗಿ ಹುಳುಗಳನ್ನು ತಿನ್ನುತ್ತದೆ.

❖ ತೊಗರಿಬೇಳೆಯೊಂದಿಗೆ ಚೆಂಡು ಹೂ ಬೆಳೆಯುವುದರಿಂದ ಕಾಂಡ ಕೊರಕ ಚೆಂಡು ಹೂವಿನ ಕಡೆ ಆಕರ್ಷಿತವಾಗಿ ಅಲ್ಲೇ ಮೊಟ್ಟೆ ಇಟ್ಟು ಅದನ್ನೇ ತಿನ್ನುವುದಂತೆ.

❖ 3-4 ಲೀಟರ್ ದನದ ಮೂತ್ರವನ್ನು ಅಷ್ಟೇ ಪ್ರಮಾಣದ ಸೆಗಣಿಯೊಂದಿಗೆ ಬೆರೆಸಿ 4 ದಿನ ಕೊಳೆಯಲು ಬಿಡಬೇಕು. ನಂತರ ಇದನ್ನು ಸೋಸಿ ಬಂದ ನೀರಿಗೆ ಕಾಲು ಕೆ.ಜಿ. ಸುಣ್ಣ ಬೆರೆಸಿ. ಈ ದ್ರಾವಣವನ್ನು 50-80ಲೀಟರ್ ನೀರಿನಲ್ಲಿ ಬೆರೆಸಿ 1 ಎಕರೆಗೆ ಸಿಂಪಡಿಸುವುದರಿಂದ ಕಾಂಡ ಕೊರಕದ ನಿಯಂತ್ರಣ ಸಾಧ್ಯವಂತೆ. ಮಾತ್ರವಲ್ಲದೆ ಬೆಳೆಯ ಬೆಳವಣಿಗೆಯೂ ಚುರುಕುಗೊಳ್ಳುತ್ತದೆ.

❖ ಸುಮಾರು 4 ಕೆ.ಜಿ.ಯಷ್ಟು ಹಸಿ ಮೆಣಸನ್ನು ಜಜ್ಜಿ 5-8 ಲೀಟರ್ ನೀರಿನಲ್ಲಿ ನೆನೆಸಿಡಿ. ಹಾಗೆ ಅರ್ಧದಿಂದ ಮುಕ್ಕಾಲು ಕೆ.ಜಿ. ಬೆಳ್ಳುಳ್ಳಿಯನ್ನು ಜಜ್ಜಿ ಕಾಲು ಲೀಟರ್ ಸೀಮೆ ಎಣ್ಣೆಯಲ್ಲಿ 1 ರಾತ್ರಿ ನೆನೆಸಿಡಿ. ನಂತರ ಎರಡನ್ನೂ ಒಟ್ಟು ಮಾಡಿ ಸೋಸಿ 50 ರಿಂದ 80 ಲೀಟರ್ ನೀರಿನಲ್ಲಿ ಬೆರೆಸಿ 1 ಎಕರೆಗೆ ಸಿಂಪಡಿಸಿ.

❖ 100 ಲೀಟರ್ ನೀರಿಗೆ 5 ಕೆ.ಜಿ. ಬೆಲ್ಲ ಸೇರಿಸಿ ಬೆಳೆಗೆ ಸಿಂಪಡಿಸುವುದರಿಂದ ಇರುವೆ ಮತ್ತಿತರ ಕೀಟಗಳು ಆಕರ್ಷಿತವಾಗಿ ಕಾಂಡ ಕೊರಕದ ಮೊಟ್ಟೆ ಮತ್ತು ಸಣ್ಣ ಮರಿಗಳನ್ನು ತಿನ್ನುವುದು.

❖ ಬೇವಿನ ಬೀಜದ ದ್ರಾವಣ ಸಿಂಪಡಿಸುವುದರಿಂದ ಕಾಂಡ ಕೊರಕ ತೊಗರಿ ಬೆಳೆಯ ಮೇಲೆ ಮೊಟ್ಟೆ ಇಡುವುದನ್ನು ತಪ್ಪಿಸಬಹುದಂತೆ.

ಮೂಲ : ಹನಿ ಬೀ 9(1) :1998

ಕಡಲೆ ಬೆಳೆ ರಕ್ಷಣೆ

ಕಡಲೆ (Bengalgram) ಜೊತೆಗೆ ಜೋಳ ಬೆಳೆಯುವುದರಿಂದ ಗಿಡಸೊರಗುವ ರೋಗ (Fusarium wilt) ವನ್ನು ತಡೆಯಬಹುದೆಂಬುದು ಉತ್ತರ ಪ್ರದೇಶದ ಅನೇಕ ರೈತರ ಅನುಭವ.

ಕಡಲೆಗೆ ಬರುವ ಕಾಯಿಕೊರಕದ ಬಾಧೆ ತಡೆಯಲು ಕಡಲೆಯ ಜೊತೆಗೆ ಕೊತ್ತಂಬರಿ ಮತ್ತು Linseed ಬೆಳೆಯುವುದು, ಹಾಗೆಯೇ ಟೊಮೊಟೊ ಮತ್ತು ಮೆಣಸಿಗೆ ಬರುವ ಹಳದಿ ರೋಗ (Mosaic) ತಡೆಯಲು ಅವುಗಳ ಜೊತೆಗೆ ಚೆಂಡು ಹೂವಿನ ಗಿಡಗಳನ್ನು ಬೆಳೆಸುವುದು ಕೂಡಾ ಉತ್ತರಪ್ರದೇಶದ ರೈತರ ಅನುಭವ.

ಕಡಲೆಕಾಯಿಗೆ ಬರುವ ಬೆಂಕಿರೋಗ ನಿಯಂತ್ರಣಕ್ಕೆ ಗುಜರಾತಿನ ಕಾಲಾಭಾಯಿ ಎನ್ನುವವರು ಇಂಗು ಬಳಸುತ್ತಾರಂತೆ. ಕಾಲು ಕೆ.ಜಿ. ಇಂಗನ್ನು 2 ಲೀಟರ್ ನೀರಿನಲ್ಲಿ ಕದಡಿ ದ್ರಾವಣ ತಯಾರಿಸುತ್ತಾರಂತೆ, ಈ ದ್ರಾವಣದಲ್ಲಿ ಸುಮಾರು 20 ಕೆ.ಜಿ. ಬಿತ್ತನೆ ಬೀಜವನ್ನು 12 ಗಂಟೆಗಳ ಕಾಲ ನೆನೆಸಿ ಬಿತ್ತನೆಗೆ ಬಳಸುವುದರಿಂದ, ಕಡಲೆಕಾಯಿ ಗಿಡಕ್ಕೆ ಬರುವ (blight) ರೋಗವನ್ನು ತಡೆಗಟ್ಟಬಹುದಂತೆ.

ಮೂಲ : ಹನೀ ಬೀ. 9(1) : 1998
ಅನುವಾದ : ಶ್ರೀನಿವಾಸ ಬಾಲನಕೊಪ್ಪ

ಆಹಾರ ಬೆಳೆಗಳ ಸಂರಕ್ಷಣೆ

ಸಂಗ್ರಹ : ಜಿ. ಕೃಷ್ಣಪ್ರಸಾದ್, ತಳಿ

❖ ರಾಗಿ ಹೊಲದಲ್ಲಿ ಮಿಶ್ರ ಬೆಳೆಯಾಗಿ ಬೆಳೆಯುವ ಸಾಸಿವೆ ಮಿತ್ರ ಕೀಟಗಳನ್ನು ಆಕರ್ಷಿಸಿ, ಜೈವಿಕ ಕೀಟ ನಿಯಂತ್ರಣಕ್ಕೆ ನೆರವಾಗುತ್ತದೆ. ಗಿಡ ಹೇನು (Aphid) ತಿನ್ನುವ ಗುಲಗಂಜಿ ಹುಳುಗಳು (Lady bird beetle) ಸಾಸಿವೆ ಹೂ ಇದ್ದ ಹೊಲಕ್ಕೆ ಮಾತ್ರ ಬರುತ್ತವೆ. ರಾಗಿ ಬೆಳೆ ಕೈ ಕೊಟ್ಟರೆ, ಸಹಾಯಕ ಬೆಳೆಯಾಗಿ ರೈತರಿಗೆ ನಷ್ಟ ತುಂಬಿಕೊಡಬಲ್ಲಂತ ಬೆಳೆ ಇದು.

❖ ರಾಗಿ, ಭತ್ತದ ಹೊಲಗಳಿಗೆ ಕೀಟ ಭಾದೆ ಬಂದಾಗ ಹೊಲದ ಕಡೆ ಗಾಳಿ ಬೀಸುವ ದಿಕ್ಕನ್ನು ಗುರುತಿಸಿಕೊಂಡು, ಹೊಲದ ಅಂಚಿನಲ್ಲಿ ಬೆಂಕಿ ಒಟ್ಟು ಮಾಡಿ, ಬೆಂಕಿಯಲ್ಲಿ ದನ, ನಾಯಿ ಅಥವಾ ಮನುಷ್ಯರ ಮೂಳೆ ಗಳನ್ನು ಹಾಕಿ, ಬರುವ ಹೊಗೆಯನ್ನು ಹೊಲದ ಮೇಲೆ ಹಾಯಿಸಿದರೆ ಬಂದಿರುವ ಕೀಟ ಬಾಧೆ ನಿವಾರಣೆಯಾಗುತ್ತದೆ.

❖ ಭತ್ತ ತೆನೆ ಬರುವ ಕಾಲದಲ್ಲಿ ಕೀಟದ ಹಾವಳಿ ವಿಪರೀತ, ಇದರ ನಿವಾರಣೆಗೆ ಎಕ್ಕ, ಬಂದ್ರೆ, ಬೇವು ಮತ್ತು ಕಳ್ಳಿ ಕೊನೆಗಳನ್ನು ಕತ್ತರಿಸಿಕೊಂಡು ಪೊರಕೆಯ ರೀತಿ ಮಾಡಿ ಭತ್ತದ ಗದ್ದೆಯ ಮೇಲೆ ಎಳೆದಾಡಿದರೆ, ಗರಿಗಳಿಗೆ ಅಂಟಿಕೊಂಡ ಹುಳುಗಳು ನೀರಿಗೆ ಬಿದ್ದು ಸಾಯುತ್ತವೆ.

ಮಾಹಿತಿ : ಭೂತ ಲಿಂಗಪ್ಪ
ದ್ಯಾವರಹಳ್ಳಿ, ಚಿತ್ರದುರ್ಗ

❖ ಭತ್ತದ ಪೈರಿಗೆ ಗರಿಸುತ್ತುವ (leaf roller), ಹುಳುವಿನ ತೊಂದರೆ ಕಾಣಿಸಿದಾಗ ಮಜ್ಜಿಗೆಯನ್ನು ಗದ್ದೆಗೆ ನೀರು ಹೋಗುವ ಕಾಲುವೆಯಲ್ಲಿ ಬೆಳಗಿನ ವೇಳೆ ಸಣ್ಣಗೆ ಬಿಡಬೇಕು. ಎಕರೆಗೆ ಒಂದು ಚೆಂಬು ಮಜ್ಜಿಗೆ ಸಾಕು ಇದು ಪೈರಿಗೆ ಬೀಳುವ ಎಲ್ಲಾ ತರದ ಕೀಟಗಳನ್ನು ನಿವಾರಿಸುತ್ತದೆ ಎಂಬ ನಂಬಿಕೆ ಆಂಧ್ರಪ್ರದೇಶದ ರಂಗಾರೆಡ್ಡಿ ಜಿಲ್ಲೆಯ ರೈತರದು, ಭತ್ತದ ತೆನೆ ಬೆಳ್ಳಗಾಗಿ, ಜೊಳ್ಳು ಬಿದ್ದರೂ ಕೂಡ ಇದೇ ವಿಧಾನ ಅನುಸರಿಸಬಹುದು.

❖ ಮೆಣಸಿನ ಗಿಡದ ಎಲೆ, ಕಾಯಿಗಳು ಉದುರಲಾರಂಭಿಸಿದಾಗ ಕುಂಬಾರನ ಮನೆಯ ಬೂದಿಯನ್ನು ಹೊಲದ ಮೇಲೆ ಚೆಲ್ಲಿದರೆ, ಉದುರುವಿಕೆ ನಿಲ್ಲುತ್ತದೆ.

ಮಾಹಿತಿ : ಲಕ್ಷ್ಮೀಬಾಯಿ,
ಪೋತುರೆಡ್ಡಿ ಪಲ್ಲಿ, ಆಂಧ್ರಪ್ರದೇಶ

ಹುಣಸೇ ಕಾಂಪೋಸ್ಟ್‌ನಿಂದ ಸಸ್ಯ ಸಂರಕ್ಷಣೆ

ಹುಣಸೇ ಸಿಪ್ಪೆ ಮತ್ತು ನಾರುಗಳನ್ನು, ಕಾಂಪೋಸ್ಟ್ ಮಾಡಿ ಹೊಲ ಗದ್ದೆಗಳಿಗೆ ಹಾಕುವುದರಿಂದ ಹೆಚ್ಚು ರಸಸಾರವನ್ನು ಹೊಂದಿರುವ ಭೂಮಿಯನ್ನು ಕಡಿಮೆ ರಸಸಾರ ಹೊಂದುವಂತೆ ಮಾಡಿ ಸೂಕ್ಷ್ಮ ಜೀವಿಗಳ ಅನ್ಯೋನ್ಯತೆಯಲ್ಲಿ ಭಾಗವಹಿಸಿ ತನ್ನ ಹುಳಿಯ ಗುಣದಿಂದ ರೋಗ ಹಾಗೂ ಕೀಟನಿರೋಧಕ ಶಕ್ತಿಯಿಂದ, ಫಲವತ್ತಾದ ಭೂಮಿಯನ್ನಾಗಿ ಮಾಡಿ ಹೆಚ್ಚು ಇಳುವರಿ ನೀಡುವುದು.

ಬಿ.ಕೆ. ನಾಗರತ್ನ
ತೃತೀಯ ಕೃಷಿ ವಿದ್ಯಾರ್ಥಿನಿ
ಜಿ.ಕೆ.ವಿ.ಕೆ. ಬೆಂಗಳೂರು

ತಿಪ್ಪೆ ಗುಂಡಿ - ಕಾಂಪೋಸ್ಟ್

ಮೊದಲು ಸರಿಯಾದ ಸ್ಥಳವನ್ನು ನೋಡಿ 18 ಅಡಿ ಉದ್ದ 6 ಅಡಿ ಅಗಲ ಮತ್ತು 4 ಅಡಿ ಆಳದ ಗುಂಡಿ ತೋಡಿಕೊಳ್ಳಬೇಕು ಬಳಸಬಹುದಾದ ವಸ್ತುವಿನ ಆಧಾರದ ಮೇಲೆ ಗುಂಡಿಯ ಪ್ರಮಾಣ ಹೆಚ್ಚು ಕಡಿಮೆ ಮಾಡಿಕೊಳ್ಳಬಹುದು.

ಈ ಗುಂಡಿಯಲ್ಲಿ ನಮ್ಮಲ್ಲಿ ಸಾಕು ಪ್ರಾಣಿಗಳಾದ ಹಸು, ಎತ್ತು, ಎಮ್ಮೆ, ಹಂದಿ, ಮುಂತಾದ ಪ್ರಾಣಿಗಳಿಂದ ಸಿಗುವ ಗಂಜಲ ಸಗಣಿ, ಕೊಟ್ಟಿಗೆಯಲ್ಲಿನ ಪ್ರತಿ ನಿತ್ಯದ ಕಸ ಕಡ್ಡಿ ವಗೈರೆ ಎಲ್ಲವನ್ನು ಹಾಕಬೇಕು. ಇದರ ಮೇಲೆ ಬೆಳೆ ಕೊಯ್ಲಾದ ಮೇಲೆ ಉಳಿಯುವ ಕಸಕಡ್ಡಿ, ಕಟ್ಟಿಗೆ, ಸೂರ್ಯಪಾನ ಕಟ್ಟಿಗೆ, ತೊಗರಿ ಹೊಟ್ಟು, ಜೋಳದ ಹೊಟ್ಟು, ಇನ್ನಿತರ ಯಾವುದೇ ತರಹದ ಕಸ ಕಡ್ಡಿಯನ್ನು ಹಾಕಬಹುದು.

ಈ ಕಸದ ಮೇಲೆ ಜೋಗಚಿ ತೊಪ್ಪಲು ಬೇವಿನ ತೊಪ್ಪಲು, ಲಕ್ಕಿ ತೊಪ್ಪಲು ಇನ್ನಿತರ ಯಾವುದೇ ಹಸಿರು ಗಿಡಗಳ ತೊಪ್ಪಲು ಹಾಕಬಹುದು. ಈ ಗುಂಡಿಯಲ್ಲಿ ಪಾರ್ಥೇನಿಯಂ, ಗಜರಿ ಚಟಕಚಂದನ, ಇದು ಮಾತ್ರ ತಪ್ಪಿಯೂ ಹಾಕಬಾರದು.

ತಮ್ಮ ಅನುಕೂಲದ ಪ್ರಕಾರ ಸಾಧ್ಯವಾದರೆ ನೆಲಗಡಲೆ, ಹಿಂಡಿ, ಕೊಬ್ರಿ, ಕಶಟಿ, ಸೂರ್ಯಪಾನ, ಉಪ್ಪು, ಮೀನಿನ ಗೊಬ್ಬರ ಕೋಳಿ, ಪಾರಿವಾಳ, ಮಲವನ್ನು ಹಾಕಿದರೆ ಬಹಳ ಒಳ್ಳೆಯದು. ಇದರ ಮೇಲೆ ಗುಂಡಿ ಮತ್ತು ಸಗಣಿ ಕಸ ಕಡ್ಡಿಯ ಪ್ರಮಾಣವನ್ನು ನೋಡಿ ನೀರು ತಪ್ಪದೆ ಹಾಕಬೇಕು. ನೀರು ಹಾಕುವುದರಿಂದ ನಾವು ಹಾಕಿದ ಎಲ್ಲಾ ವಸ್ತುಗಳು ಕೊಳೆತು ಹೋಗುತ್ತದೆ. ಇದರ ಮೇಲೆ 3-4 ಇಂಚು ದಪ್ಪ ಹಾಳು ಮಣ್ಣು, ಹಳ್ಳದ ಮಂಡು ಇನ್ನಿತರ ಯಾವುದೇ ಮಣ್ಣನ್ನು ಹಾಕಬೇಕು. ಇದೇ ಪ್ರಕಾರ ಹಂತ ಹಂತವಾಗಿ ತುಂಬಿ ಗುಂಡಿ ಬರ್ತಿ ಮಾಡಬೇಕು. ಈ ರೀತಿ ಮಾಡಿದ ಗೊಬ್ಬರವನ್ನು ಹಾಕಿದ ಬೆಳೆ ಯಾವುದೇ ರೋಗ ರುಜಿನಗಳಿಗೆ ತುತ್ತಾಗಲಾರದು.

ಶಿವಶರಣಪ್ಪ ಸಿದ್ದಪ್ಪ ಬಿಚಪ್ಪ
ಸಟಪವನಹಳ್ಳಿ, ಸೇಡಂ

ಸಾವಯವ ಕೃಷಿಗೆ ಎರಡು ಉದಾಹರಣೆ

ಚಿಕ್ಕಮಗಳೂರು ಸಮೀಪದ ಕಳಸಾಪುರಕ್ಕೆ ಬನ್ನಿ, ಅಲ್ಲಿನ ರೈತರು, ಕೃಷಿ ವಿಜ್ಞಾನಿಗಳು ಹೇಳುವಂತೆ ಡೈ ಥೇನೋ, ಕ್ಯಾಪ್ಟನೋ ಹಾಕಿ ಬೀಜೋಪಚಾರ ಮಾಡುತ್ತಿಲ್ಲ. ಬದಲಿಗೆ ಹತ್ತಿ ಬೀಜವನ್ನು ಸೆಗಣಿಯ ನೀರಿನಲ್ಲಿ ಒಂದು ದಿನ ನೆನೆಹಾಕುತ್ತಾರೆ. ಮಾರನೆ ದಿನ ಬಿತ್ತನೆ ಮಾಡುತ್ತಾರೆ. ಅವರ ಅನುಭವದಂತೆ ಈ ಕ್ರಮದಿಂದ ಬೀಜಗಳು ಬೇಗ ಮೊಳಕೆಯೊಡೆದು ಸಸಿಗಳು ಚೆನ್ನಾಗಿ ಬೆಳೆಯುತ್ತವಂತೆ.

ಈಗ್ಗೆ ಸುಮಾರು 5-6 ವರ್ಷಗಳ ಹಿಂದೆ ಇದೇ ಹಳ್ಳಿಗೆ ನೀವು ಭೇಟಿ ಕೊಟ್ಟಿದ್ದರೆ ನೀವು ಅಲ್ಲೊಂದು ದೃಶ್ಯ ನೋಡಬಹುದಿತ್ತು. ಮನೆಮಂದಿಯೆಲ್ಲಾ ಬೇವಿನ ಟೊಂಗೆಗಳನ್ನು ಕೈಯಲ್ಲಿ ಹಿಡಿದು ಎಲೆಕೋಸಿನ ಗಿಡಗಳ ಮೇಲೆ ಅಲ್ಲಾಡಿಸುತ್ತಾ ಇರುತ್ತಿದ್ದರು. ವಾರಕ್ಕೊಮ್ಮೆ ಹೀಗೆ ಮಾಡುವುದರಿಂದ ಕೋಸಿಗೆ ಬರುವ ಚಿಟ್ಟೆ ಹುಳು(ವಜ್ರದ ಬೆನ್ನಿನ ಪತಂಗ)ವಿನ ಕಾಟ ಬಹಳ ಕಡಿಮೆ ಇತ್ತಂತೆ. ಕಡಿಮೆ ಖರ್ಚಿನ ಆಸೆಯಿಂದಲೋ, ಆಳುಗಳು ಸಿಗದಿದ್ದುದರಿಂದಲೋ, ರಾಸಾಯನಿಕ ಕೀಟನಾಶಕಗಳ ಉಪಯೋಗ ಪ್ರಾರಂಭಿಸಿದ ರಂತೆ. ಈಗ ಈ ಕೀಟ ಯಾವ ಔಷಧಕ್ಕೂ ಬಗ್ಗುತ್ತಿಲ್ಲ. ಅವರೀಗ ಹಿಂದಿನ ನಿಯಂತ್ರಣ ಕ್ರಮಕ್ಕೆ ಹೋಗುವ ಯೋಚನೆಯಲ್ಲಿದ್ದಾರೆ.

ಸಂಗ್ರಹ : ಶ್ರೀನಿವಾಸ್ ಬಾಲನಕೊಪ್ಪ.

ವಿದೇಶಿ ಸಾವಯವ ಹೂ ಬೇಸಾಯ

ಜಗತ್ತಿನ ಅತ್ಯಂತ ದೊಡ್ಡ ಹೂ ಮಾರುಕಟ್ಟೆ ಇರುವುದು ನೆದರಲ್ಯಾಂಡ್‌ನ ಅಲ್‌ಸಮೀರ್ ಎಂಬಲ್ಲಿ. ಅಲ್ಲಿ ಈಗ ರಾಸಾಯನಿಕ ಗೊಬ್ಬರ ಅಥವಾ ಕೀಟನಾಶಕ ಹಾಕದೇ ಬೆಳೆಯುವ ಹೂಗಳ ಬೇಡಿಕೆ ದಿನೇ ದಿನೇ ಹೆಚ್ಚುತ್ತಿದೆಯಂತೆ. ಅಲ್ಲಿನ ರೈತರು, ಸಂಶೋಧಕರು ಕಂಡುಕೊಂಡ ಕೆಲವು ಸಾವಯವ ಉತ್ತರಗಳು ಈ ಕೆಳಗಿವೆ.

- ಹಸಿರು ಮನೆಯಲ್ಲಿ (Green house) ಹೂ ಬೆಳೆಸುವವರಿಗೆ ಅತ್ಯಂತ ಕಾಟ ಕೊಡುವುದೆಂದರೆ ಕೆಂಪು ಜೇಡ (Red spider mite). ಹೂ ಗಿಡಗಳ ಮಧ್ಯೆ ಅಲ್ಲಲ್ಲಿ ಈರುಳ್ಳಿ ಬೆಳೆಸುವುದರಿಂದ ಇದನ್ನು ಹತೋಟಿಯಲ್ಲಿಡಬಹುದು.
- ಹೇನು (Thrips) ನಿಯಂತ್ರಿಸಲು ಚದರ ಅಡಿಗೆ ಒಂದರಂತೆ ಬೆಳ್ಳುಳ್ಳಿ ಗಿಡವನ್ನು ಬೆಳೆಸಬೇಕು. ಎಣ್ಣೆ ಹಚ್ಚಿದ ಕಡುಗುಲಾಬಿ ಬಣ್ಣದ ಹಾಳೆಗಳನ್ನು ಕಡ್ಡಿಗೆ ಚುಚ್ಚಿ ಗಿಡಗಳ ಮಧ್ಯೆ ಅಲ್ಲಲ್ಲಿ ಸಿಕ್ಕಿಸಿ ಇಡುವುದರಿಂದಲೂ ಇವುಗಳನ್ನು ತಡೆಯಬಹುದು. ಹುಳುಗಳು ಈ ಕಾಗದಕ್ಕೆ ಅಂಟಿಕೊಳ್ಳುತ್ತವೆ. ಹಿಡಿದು ನಾಶ ಮಾಡಬಹುದು.

ಸಂಗ್ರಹ : ತೇಜಸ್ವಿನಿ

ವಿಶೇಷ ಸೂಚನೆ

ಹಿತ್ತಲ ಗಿಡದಲ್ಲಿ ದಾಖಲಿಸಿರುವ ವಿವಿಧ ಮಾಹಿತಿಗಳನ್ನು ವಾಣಿಜ್ಯ ದೃಷ್ಟಿಯಿಂದ ಬಳಸಬಯಸುವವರು ಮೊದಲು ಅದನ್ನು ಹಿತ್ತಲಗಿಡದ ಗಮನಕ್ಕೆ ತರಬೇಕಾಗಿ ಈ ಮೂಲಕ ಸೂಚಿಸಲಾಗಿದೆ.

ರೈತರು ಮೊದಲು ಮಾಹಿತಿಗಳನ್ನು ನೀಡಿರುವ ಅಥವಾ ಸೃಷ್ಟಿಸಿರುವ ವ್ಯಕ್ತಿ ಗಳು, ಪ್ರದೇಶದೊಡನೆ ಸಂಪರ್ಕ ಏರ್ಪಡಿಸಿ, ಸಂಪೂರ್ಣ ವಿವರಗಳನ್ನು ಪಡೆಯುವುದು ಸೂಕ್ತ. ನಂತರ ತಮ್ಮ ಅನುಭವವನ್ನು ಹಿತ್ತಲಗಿಡದೊಡನೆ ಹಂಚಿಕೊಳ್ಳಬೇಕಾಗಿ ಕೋರಲಾಗಿದೆ.

ಈ ಬಗ್ಗೆ ಆಗುವ ಯಾವುದೇ ನಷ್ಟ, ಅನಾಹುತಗಳಿಗೆ ಹಿತ್ತಲಗಿಡ ಜವಾಬ್ದಾರಿಯಲ್ಲ.

ಸಂ.

ಹಸುಗಳಲ್ಲಿ ಅಜೀರ್ಣ ಮತ್ತು ಜ್ವರಕ್ಕೆ

(ಸರಿಯಾಗಿ ಹುಲ್ಲು ಹಿಂಡಿ ತಿನ್ನದಿರುವುದು ಮೌನಾವಸ್ಥೆ ಲಕ್ಷಣಗಳು) 2 ಔಂಸು ಗೇರು ಹಣ್ಣಿನ ಶರಾಬಿನಲ್ಲಿ 1 ಚಮಚ ಓಮ ಮತ್ತು 1 ಚಮಚ ಶುಂಠಿ ಹುಡಿ ಹಾಕಿ ಕುಡಿಸಬೇಕು ಯಾ 2 ಔಂಸು ದಶಮೂಲಾರಿಷ್ಟಕ್ಕೆ 2 ಚಮಚ ಓಮ 1 ಚಮಚ ಶುಂಠಿ ಪುಡಿ ಜಜ್ಜಿ ಹಾಕಿ ಕುಡಿಸಬೇಕು. ದಿನಕ್ಕೆ 3 ಬಾರಿಯಂತೆ 3 ದಿನ ಕೊಟ್ಟರೆ ಸರಿಹೋದಿತು.

ಶೀತಜ್ವರಕ್ಕೆ

(ಕೈಕಾಲುಗಳಲ್ಲಿ ನಿಶ್ಯಕ್ತಿ ಇರುತ್ತದೆ. ಬೀಳುವುದು ಉಂಟು)

ದಡ್ಡಾಲ ಮರದ *(Careya arborea)* ತೊಗಟೆ, ಎದ್ರೋಳಿ ಬಳ್ಳಿಯ ಎಲೆಗಳು, ಸೀಗೆ ಎಲೆ, ನಾಣಿಲಮರದ ತೊಗಟೆ, ನೆಲಕಂಚಿ ಒಂದೊಂದು ಹಿಡಿ ಜೋಡಿಸಿ 12 ಕುಡ್ತೆ ನೀರಿನಲ್ಲಿ ಕಷಾಯ ಕುದಿಸಿ 6 ಕುಡ್ತೆಗೆ ಇಳಿಸಿ ತಣಿಸಿ ದಿನಕ್ಕೆರಡು ಬಾರಿ ಪ್ರಕಾರ 3 ದಿನ ಕುಡಿಸಬೇಕು. ಕಷಾಯ ಕುಡಿಸಿದ ಮೇಲೆ 1 ಗಂಟೆಯ ಕಾಲ ಬೇರೇನೂ ಕೊಡಬಾರದು. ಈ ಮದ್ದು ಹಲವು ತರದ ಜ್ವರಗಳಿಗಾದೀತು.

ಬಾಯಲ್ಲಿ ಕಪ್ಪೆ ನೆಗೆದರೆ

(ಜ್ವರ ಇದ್ದೀತು. ಆಹಾರ ತಿನ್ನುವುದಿಲ್ಲ. ಬಾಯಿ ತೆರೆದೇ ಇರುವುದು ಗಂಟಲಿನಲ್ಲಿ ಬಾತ ಹಾಗೆ ಬೆಳವಣಿಗೆ ಕಾಣುತ್ತದೆ. ಕೇದಗೆ ಹೂವಿನ ವಾಸನೆ ಇದ್ದೀತು. ಇದು ಕಠಿಣ ಸ್ಥಿತಿ. 3 ಗಂಟೆಯೊಳಗೆ ಚಿಕಿತ್ಸೆ ಆಗದೆ ಹೋದರೆ ಅಪಾಯ) ಇದಕ್ಕೆ ಒಂದು ಹಿಡಿ ಉಪ್ಪು ಹುಡಿಮಾಡಿ ಬಾಯೊಳಗೆ ಹಾಕಿ ಮುಂಡಿದಡಿ ಯಿಂದ ತಳ್ಳಿ ಎಳೆದು 4-6 ಸಲ ಮಾಡಿ ಬಾವು ಒಡೆಯುವಂತೆ ಮಾಡಬೇಕು. ಆಗಲೂ ಒಡೆಯದೆ ಹೋದರೆ ಒಂದೂವರೆ ಅಡಿ ಉದ್ದದ ಚೂರಿಮುಳ್ಳಿನ ಕಣೆ ತಂದು ಅದರ ತುದಿಯಲ್ಲಿ ಮಾತ್ರ 1 ಕೊಕ್ಕೆ ಮುಳ್ಳು ಉಳಿಸಿ ಬಾಕಿ ಎಲ್ಲಾ ಮುಳ್ಳುಗಳನ್ನೂ ತೆಗೆದು ಹಾಕಿ ಮುಳ್ಳಿರುವ ತುದಿಯಲ್ಲಿ ಗಂಟಲೊಳಕ್ಕೆ ತಳ್ಳಿ ಮುಳ್ಳಿನಿಂದ ಗೀರಿ ಒಡೆಯಬೇಕು. ಅದರೊಳಗಿರುವ ಲಸಿಕೆ ಹೊರಬೀಳಬೇಕು. ಇಲ್ಲವಾದರೆ ಗಂಟಲು ಮುಚ್ಚಿ ಹೋಗಿ ಉಸಿರಾಟ ಸ್ಥಗಿತಗೊಂಡೀತು.

ನಾತಕಪ್ಪೆ

(ಮಲದ ಹಾಗೆ ದುರ್ವಾಸನೆ ಬೀರುವ ಈ ಗಂಟಲು ಬಾವು ಲೋಳೆಯ ಹಾಗಿರುತ್ತದೆ.) ಇದಕ್ಕೆ ಒಂದು ಹಿಡಿ ತುಂಬ ಪುಜುಂಗರಿ ಬಾಯೊಳಕ್ಕೆ ಹಾಕಿ ಕೈಯಿಂದ ಜಾಲಾಡಬೇಕು. ಆಗ ಇಳಿದು ಹೋಗುತ್ತದೆ.

ಮೂಲ : ನಿಸರ್ಗ ಲೋಕ
ಸಂಪುಟ-2 ಸಂಚಿಕೆ-9 ಡಿಸೆಂಬರ್-97

(ವಿ.ಸೂ. 1 ಲೀಟರ್ = 6 ಕುಡ್ತೆ)

ದನಗಳಿಗೆ ಸೊರಗಿ ಬಂದಾಗ

ಎಳೆಯ ಜೋಳದ ಸಿಪ್ಪೆಯನ್ನು ತಿನ್ನುವುದರಿಂದ ಸೊರಗು ಬರುತ್ತವೆ. ಆಗ ಸೋಪು ನೀರು (soapwater)ಅಥವಾ ಹೊಂಗೆ ಕುಡಿ *(Pongamia glabra)* ಅಥವಾ ಹುಣಸೇ ಹುಳಿ, ಬೆಲ್ಲದೊಂದಿಗೆ ತಯಾರಿಸಿದ ದ್ರಾವಣವನ್ನು ಕುಡಿಸು ವುದರಿಂದ ಸೊರಗು ನಿವಾರಣೆಯಾಗುವುದು. ಅಥವಾ ಮುಂಗಾರು ಮಲ್ಲಿಗೆ ಪುಟ್‌ಪರೆ ಯನ್ನು ನೀರಿನಲ್ಲಿ ಅರೆದು ಕುಡಿಸುವುದರಿಂದ ವಾಸಿಯಾಗುವುದು.

ದನಗಳಿಗೆ ಮೈಮೇಲೆ ಹುಳು ಬಿದ್ದಲ್ಲಿ

ಕಾಡು ಕವಡೆ ಗಿಡವನ್ನು ಪೂಜಿಸಿ, ಅದರ ಎಲೆಗಳನ್ನು ತಂದು ದನದ ಕೊಟ್ಟಿಗೆಯಲ್ಲಿ ಹಾಕುವುದರಿಂದ ಹುಳು ಬಿದ್ದು ಹೋಗುವುದು. ಅಥವಾ ತುಪ್ಪದ ಕೀರೆ ಸೊಪ್ಪು *(Luffa aegyptica)* ತಂದು ಅರೆದು ಹುಳಬಿದ್ದ ಸ್ಥಳಗಳಲ್ಲಿ ದಿನಕ್ಕೆ 2-3 ಬಾರಿ ಮೂರು ದಿನ ಚೆನ್ನಾಗಿ ಅರೆದು ಹಚ್ಚುವುದರಿಂದ ಹುಳಬಿದ್ದು ಹೋಗುವವು ಅಥವಾ ನೆಲ್ಲಿಯ ಸೊಪ್ಪು *(Emblica officinalis)* ನ್ನು ತಂದು ಬಿಳಿಬಟ್ಟೆಯಲ್ಲಿ ಕಟ್ಟಿ ಕೊರಳಿಗೆ ಕಟ್ಟುವುದರಿಂದ ಹುಳು ಬಿದ್ದು ಹೋಗುವುದು.

ಸರ್ಪ ವಿಷಕ್ಕೆ ಲಕ್ಕಿ ಸೊಪ್ಪು

ಒಂದೆರಡು ದಿನ ಹಿಂದೆ ತಂದ ಹಳೆಯ ನೀರಿನಲ್ಲಿ ಲಕ್ಕಿ ಸೊಪ್ಪು (*Vitex negundo.* L) ಅರೆದು ಒಂದು ಪಾವು ರಸವನ್ನು ಹಾವು ಕಡಿದ ಕೂಡಲೇ ಪಶುಗಳಿಗೆ ಕುಡಿಸಿದರೆ ವಿಷವು ಕಡಿಮೆಯಾಗುವುದು. ಆಮೇಲೆ ಹಿಂದೆ ಹೇಳಿದ ಸೊಪ್ಪನ್ನು ಕುಟ್ಟಿ ಸ್ವಲ್ಪ ತಿನ್ನಿಸುವುದು ಮತ್ತು ಕಚ್ಚಿದ ಭಾಗಕ್ಕೆ ತಿಕ್ಕುವುದು. ಈ ಸಮಯದಲ್ಲಿ ಒಣಹುಲ್ಲು ಮಾತ್ರ ಆಹಾರವಾಗಿ ಕೊಡಬೇಕು. ನಂತರ ಇಂಗಳಾರದ ಹಣ್ಣಿನ ಮೇಣ (pulp of *Borassus flabillifer* L) ವನ್ನು ನೀರಿನಲ್ಲಿ ತೇದು ಐದು ಹನಿ ಮೂಗಿನೊಳಗೆ ಬಿಡಬೇಕು. ಆಗ ವಿಷವು ವಾಂತಿಯಾಗಿ ಕ್ರಮೇಣ ಕಡಿಮೆಯಾಗುವುದು. ಅಥವಾ ಪುತ್ರಂಜೀವಿಕಾಯಿ (*Putranjiva roxburghii* Wall) ತಿರುಳನ್ನು ನೀರಿನಲ್ಲಿ ಅರೆದು ಹಾವು ಕಚ್ಚಿದ ಸ್ಥಳದಲ್ಲಿ ಹಚ್ಚುವುದು ಮತ್ತು ಇದನ್ನೇ ನೇತ್ರಗಳಿಗೆ ಅಂಜನ ಹಾಕಿದರೆ ಹಾವಿನ ವಿಷ ತಕ್ಷಣ ಇಳಿಯುವುದು ಅಥವಾ ಅಂಕೋಲೆ ಬೇರ *(Alangium salvifolium)* ನ್ನು ಮೂರು ದಿನ ಹರಳೆಣ್ಣೆಯಲ್ಲಿ ಹಾಕಿ ತೆಗೆದು ಇಡಬೇಕು. ಇದನ್ನು ನಿಂಬೆ ಹುಳಿಯಲ್ಲಿ ತೇದು ಸ್ವಲ್ಪ ಬಾಯಿಗೆ ಕೊಟ್ಟು ಸ್ವಲ್ಪ ಕಣ್ಣಿಗೆ ಬಿಡಬೇಕು. ಅಥವಾ ಬೆಳ್ಳುಳ್ಳಿ, ಮೆಣಸು, ಉಪ್ಪು, ಶುಂಠಿ, ಗೆಜ್ಜಗನ ಸೊಪ್ಪು (*Crotalaria retuse.* L), ಹೊಂಗೆ ಎಲೆಯನ್ನು ತಲಾ ಒಂದು ಸೇರಿನಂತೆ ತೆಗೆದುಕೊಂಡು ಒಣಗಿಸಿ ಚೂರ್ಣ ಮಾಡಿಡಬೇಕು. ಹಾವು ಕಡಿದಾಗ ಕೂಡಲೇ ಇದರಿಂದ ಎರಡು ತೊಲ ಚೂರ್ಣವನ್ನು ಅರ್ಧಪಾವು ಮಜ್ಜಿಗೆಯಲ್ಲಿ ಕಲಸಿ ಕುಡಿಸಬೇಕು.

ಸಂಗ್ರಹ : ಬಿ.ಕೆ. ನಾಗರತ್ನ
ಜಿ.ಕೆ.ವಿ.ಕೆ, ಬೆಂಗಳೂರು

ಹಸುಗಳಲ್ಲಿ (ಆಕಳು) ಹಾಲು ಬರಲು ಆಲದ ಮರದ ಬಿಳಲಿನ ಕುಡಿ ಒಂದು ಹಿಡಿ, ಒಂದು ಹಿಡಿ ಮುಳ್ಳಿರುವ ಮುಟ್ಟಿದರೆ ಮುನಿ ಸೊಪ್ಪು, ಕಾಲು ಕೆ.ಜಿ. ಅವರೇ ಕಾಳು (ಒಂದು ದಿನ ನೀರಿನಲ್ಲಿ ನೆನೆಸಿ ಆರು ಗಂಟೆ ನೆರಳಿನಲ್ಲಿ ಒಣಗಿದ) ಮತ್ತು ಕಾಲು ಕೆ.ಜಿ ಈಚಲ ಮರದ ಗಿಣ್ಣು (ಮರದ ಶಿರಭಾಗದಲ್ಲಿ ಗರಿಗಳನ್ನು ತೆಗೆದಾಗ ಸಿಗುವ ಬಿಳಿಭಾಗ) ಈ ನಾಲ್ಕನ್ನು ರುಬ್ಬಿ ದಿನಕ್ಕೆ ಒಂದು ಸಾರಿಯಂತೆ ಮೂರು ದಿನ ಸಾಯಂಕಾಲ ಕುಡಿಸಿದರೆ (ಪ್ರತಿಸಾರಿ ಈ ಮೇಲಿನ ಪ್ರಮಾಣವನ್ನು ಹೊಸದಾಗಿ ತಯಾರಿಸಿಕೊಳ್ಳಬೇಕು. ಒಂದೇ ಸಾರಿ ತಯಾರಿಸಬಾರದು) ಹಾಲು ಬರುತ್ತದೆ.

ಬಿ. ಬಸವರಾಜು, ಸಂತೇಶಿವರ

ನಾಟಿ ಚಿಕಿತ್ಸೆ ಕ್ರಮಗಳು

ಪೈಚಿಗೆ ಗುಣಮಾಡಲು

• ಸಹಜವಾಗಿ ಗಿಣ್ಣು, ಕುಂಬಳಕಾಯಿ ಇತ್ಯಾದಿಗಳು ಕೆಲವರ ದೇಹಕ್ಕೆ ಹೊಂದುವುದಿಲ್ಲ. ಹಾಗೇ ಕೆಲವು ಪದಾರ್ಥಗಳನ್ನು ತಿನ್ನುವುದರಿಂದ ಕೆಲವರಿಗೆ ಅಲರ್ಜಿಯಾಗುವುದು. ಆಗ ದೇಹ ನವೆ ನವೆಯಾಗುವುದು. ಕೆಲವರಿಗೆ ಮೈಮೇಲೆ ದದ್ದು ಅಥವಾ ಬಿಲ್ಲೆಯಾಗಬಹುದು. ಆಗ ನುಗ್ಗೆ ಸೊಪ್ಪನ್ನು ತಿಂದು, ಅದರ ರಸವನ್ನು ನವೆಯಾಗುವ ದೇಹದ ಭಾಗಗಳಿಗೆ ಹಚ್ಚಿಕೊಳ್ಳುವುದರಿಂದ ಪೈಚಿಗೆ ವಾಸಿಯಾಗುವುದು.

• ಅಡಿಕೆ ಪಟ್ಟೆ (ಸುಲುಪಟ್ಟೆ) ಸುಟ್ಟು ಬಂದ ಬೂದಿಯನ್ನು 1 ಲೋಟ ನೀರಿನಲ್ಲಿ ಹಾಕಿ ಸೋಸಿ ಅದನ್ನು ಸೇವಿಸುವುದರಿಂದ ಪೈಚಿಗೆ ವಾಸಿಯಾಗುವುದು.

• ಕರಿಮೆಣಸನ್ನು ಕುಟ್ಟಿ ತುಪ್ಪದಲ್ಲಿ ಸೇವಿಸಿ ನೀರು ಕುಡಿಯುವುದರಿಂದ ಪೈಚಿಗೆ ವಾಸಿಯಾಗುವುದು.

• ತಂಗಡಿ *(Cassia)* ಸೊಪ್ಪನ್ನು ಮೊಸರಿನಲ್ಲಿ ಅರೆದು ಹಚ್ಚುವುದರಿಂದ ಉರಿತ ಕ್ರಮೇಣ ಕಡಿಮೆಯಾಗುವುದು.

ಉಷ್ಣದಿಂದ ಮೈಕಾವು ಅಥವಾ ಮೈಚುರುಕು ಬಂದಾಗ

• ಈ ಸಂದರ್ಭದಲ್ಲಿ ಆದಷ್ಟು ಹೆಚ್ಚು ತಂಪಾದ ನೀರನ್ನು ಕುಡಿಯುವುದರಿಂದ ದೇಹಕ್ಕೆ ತಂಪಾಗುವುದು. ಅಲ್ಲದೆ ಬಕೆಟ್‌ನಲ್ಲಿ ನೀರು ಹಾಕಿಕೊಂಡು ಕಾಲುಗಳನ್ನು ಅದರಲ್ಲಿ ಇಟ್ಟು ಅರ್ಧಗಂಟೆ ಕುಳಿತುಕೊಳ್ಳುವುದರಿಂದ ಕಾಲುಗಳ ಉರಿತ ಮತ್ತು ದೇಹದ ಉಷ್ಣತೆ ತಗ್ಗುವುದು.

• ಲೋಳೆಸರ ಅಥವಾ ಮುಸಾಂಬ್ರ *(Aloe vera)* ದ ಎಲೆಯ ಮೇಲಿನ ಸಿಪ್ಪೆಯನ್ನು ತೆಗೆದು ಅದರ ತಿರುಳನ್ನು ಸಕ್ಕರೆಯೊಂದಿಗೆ ತಿಂದರೆ ಪದೇ ಪದೇ ಬಾಧಿಸುವ ಮೈಕಾವು ನಿಲ್ಲುವುದು.

• ಹರಳೆಣ್ಣೆಯನ್ನು ಸುಣ್ಣದೊಂದಿಗೆ ಮಿಶ್ರಮಾಡಿ ಅಂಗಾಲು, ಅಂಗೈ ಮತ್ತು ಹೊಕ್ಕಳಿಗೆ ಹಚ್ಚಿಕೊಳ್ಳುವುದರಿಂದ ಬೇಗ ದೇಹದ ಉಷ್ಣತೆ ತಗ್ಗುವುದು.

• ತಂಗಡಿ ಹೂವನ್ನು ತಂದು ನೀರಿನಲ್ಲಿ ಕುದಿಸಿ ಬರುವ ರಸವನ್ನು ಸಕ್ಕರೆಯಲ್ಲಿ ಸೇರಿಸಿಕೊಂಡು ಕುಡಿಯುವುದರಿಂದ ಉಷ್ಣ ನಿವಾರಣೆಯಾಗುವುದು.

ಇಸಬು ನಿವಾರಣೆಕ್ರಮ

• ಚರ್ಮ ಕಪ್ಪನೆಯ ಬಣ್ಣಕ್ಕೆ ತಿರುಗಿ ರಣ ರಣವಾಗಿ ಹೆಚ್ಚಿನ ತೇವಾಂಶದಿಂದ ಕೂಡಿದ್ದು ನೋವುಂಟು ಮಾಡುವುದು. ಆಗ ಈ ರೀತಿಯ ಚಿಕಿತ್ಸೆ ನೀಡಿದರೆ ವಾಸಿಯಾಗುವುದು.

• ಕೊಬ್ಬರಿಯ ಚಿಪ್ಪನ್ನು ಒಂದು ಹರಿವಾಣ ಅಥವಾ ಕಡಾಯಿ ಕೆಳಗಡೆ ಸುಡುವುದರಿಂದ ಒಂದು ರೀತಿಯ ಜಿಡ್ಡಿ ನಂತಹ ಅಂಶವು ಹಳದಿ ಮಿಶ್ರ ಕಪ್ಪು ಬಣ್ಣದಿಂದ ಕೂಡಿದ್ದು ಹರಿವಾಣದ ಮೇಲ್ಭಾಗದಲ್ಲಿ ಸಂಗ್ರಹವಾಗಿರುತ್ತದೆ. ಇದಕ್ಕೆ ಒಂದು ನಿಂಬೆ ಹಣ್ಣಿನ ರಸವನ್ನು ಸೇರಿಸಿ ಚೆನ್ನಾಗಿ ಮಿಶ್ರಮಾಡಿ ಹಚ್ಚುವುದರಿಂದ ಇಸಬು ನಿವಾರಣೆಯಾಗುವುದು.

• ಕತ್ತೆಲದ್ದಿಯನ್ನು ಸುಟ್ಟು ಸಂಗ್ರಹಿಸಿದ ಕಪ್ಪು ಮಸಿಗೆ ನಿಂಬೆ ರಸವನ್ನು ಮಿಶ್ರಮಾಡಿ ಹಚ್ಚುವುದರಿಂದ ಬೇಗ ವಾಸಿಯಾಗುವುದು.

ಒಣ ತುರಿ ನಿವಾರಣೆ

ಒಂದು ರೀತಿಯ ಚಿಕ್ಕ ಚಿಕ್ಕ ಗುಳ್ಳೆ ಎದ್ದು, ತುರಿಕೆ / ನವೆ ಉಂಟಾಗುವುದು. ಇದನ್ನು ನಿಯಂತ್ರಿಸಲು ಮತ್ತು ಸಂಪೂರ್ಣವಾಗಿ ವಿಮುಕ್ತಿ ಹೊಂದಲು ಕುಪ್ಪಿಸೊಪ್ಪು *(Acacia indica)*, ಮೇಕೆಯ ಮೂತ್ರದಲ್ಲಿ ಅರೆದು ಅದಕ್ಕೆ ಹುಣಸೆ ಹುಳಿ ಮತ್ತು ಮಣ್ಣುಪ್ಪು ಸೇರಿಸಿ ಮಿಶ್ರಣವನ್ನು ನವೆ ಇರುವ ಭಾಗಕ್ಕೆ ಹಚ್ಚುವುದರಿಂದ ನವೆಯು ಕಡಿಮೆಯಾಗಿ ಸಂಪೂರ್ಣವಾಗಿ ನಿವಾರಣೆಯಾಗುವುದು.

ಹುಳಕಡ್ಡಿ ನಿವಾರಣೆಗೆ

• ಕುರುಟಿಗ / ಹಾಲು ಕೊರಟಿಗೆನ *(Pergularia extensa)* ಹಾಲನ್ನು ಹುಳಕಡ್ಡಿ, ಹತ್ತಿರುವ ಭಾಗಕ್ಕೆ ಹಚ್ಚುವುದರಿಂದ ಕ್ರಮೇಣ ವಾಸಿಯಾಗುವುದು.

• ಕುರುಟಿಗನ ಎಲೆ *(Pergularia extensa)* ಯನ್ನು ತಂದು ಬಿಸಿಮಾಡಿ, ಎರಡು ಹಸಿಯ ಎಲೆಯನ್ನು ಅರೆದು ರಸ ತೆಗೆದು ಹಚ್ಚುವುದರಿಂದ ಹುಳಕಡ್ಡಿ ವಾಸಿಯಾಗುವುದು.

• ದವಸ ಧಾನ್ಯ ಮಾಡುವ ಮೊರಗಳಿಗೆ ಕೆಲವರು ಆಕಳ ಗಂಜಲವನ್ನು ಹಚ್ಚಿರುತ್ತಾರೆ. ಅದರ ಮೇಲೆ ತಂಬೂಲ ಮತ್ತು ಮೂರು ನಾಲ್ಕು ಹನಿ ನೀರು ಹಾಕಿ ರಂಗಳಿಸಿ (ತೇದು) ಅದನ್ನು ಹಚ್ಚುವುದರಿಂದ ನಿವಾರಣೆಯಾಗುವುದು.

ಬೇಧಿ ನಿವಾರಣೆಗೆ

• ನೇರಳೆ *(Syzigium jambolanum)* ಗಿಡದ ಚಕ್ಕೆ ಯನ್ನು ಕುರಿಹಾಲಿನಲ್ಲಿ ತೇದು ಅದರ ಗಂಧವನ್ನು ತಿನ್ನುವುದರಿಂದ ಬೇಧಿ ನಿವಾರಣೆಯಾಗುವುದು.

• ಅತ್ತಿ ಹಾಲಿನಲ್ಲಿ *(Ficus gliomerata)* ಬೆಲ್ಲ ಸೇರಿಸಿ ತಿನ್ನುವುದರಿಂದ ಬೇಧಿ ನಿಲ್ಲುವುದು.

• ಬೆಳ್ಳುಳ್ಳಿಯನ್ನು ಸುಟ್ಟು ತಿನ್ನುವುದರಿಂದ ಬೇಧಿ ನಿವಾರಣೆಯಾಗುವುದು.

ಜ್ವರ ನಿವಾರಣೆ

• ಜ್ವರ ಬಂದಾಗ ಮರಕೊಳೆ (ಬೇವಿನ ಮರದ ಬುಡದ ಚಕ್ಕೆ) ತಂದು ತೇದು ಜಜ್ಜಿ ರಸ ತೆಗೆದು ಸಕ್ಕರೆ ಹಾಕಿಕೊಂಡು ಸೇವಿಸುವುದರಿಂದ ಜ್ವರ ನಿವಾರಣೆಯಾಗುವುದು. ಅಲ್ಲದೆ ನಾಲಿಗೆಯು ಮೊದಲಿನಂತೆ ಪ್ರಚೋದನೆಗೊಳಪಟ್ಟು ರುಚಿಸುವುದು.

ಸಂಗ್ರಹ : ಬಿ.ಕೆ. ನಾಗರತ್ನ
ಜಿ.ಕೆ.ವಿ.ಕೆ, ಬೆಂಗಳೂರು

ಹಿತ್ತಲಗಿಡಕ್ಕೆ ಮಾಹಿತಿ

ಹಿತ್ತಲಗಿಡಕ್ಕೆ ಸೂಕ್ತ ಎನಿಸಿದ ವ್ಯಕ್ತಿಗಳು ವಿಚಾರ, ಪದ್ಧತಿ, ಗಾದೆ, ಲಾವಣಿ, ಕತೆಗಳನ್ನು ಬರೆದು ಕಳುಹಿಸಿರಿ. ಸೂಕ್ತ ಮಾಹಿತಿಗಳಿಗೆ ಪ್ರೋತ್ಸಾಹಕರ ಬಹುಮಾನವಿರುತ್ತದೆ. ಸಂ.

ಒಂದು ಮನವಿ

ಕಾಗದದ ಬಳಕೆಯನ್ನು ಮಿತಿಗೊಳಿಸಿ, ಕಾಗದವನ್ನು ಪುನರ್‌ಬಳಸಿ, ಕಾಗದದ ಪುನರುತ್ಪಾದನಾ ಪ್ರಕ್ರಿಯೆಯನ್ನು ಪ್ರೋತ್ಸಾಹಿಸಿ (ವಿ.ಸೂ. ಹಿತ್ತಲ ಗಿಡದ ಈ ಸಂಚಿಕೆಯನ್ನು ಕಬ್ಬಿನ ತ್ಯಾಜ್ಯ Bagasse, ಕಾಗದದಿಂದ ಮುದ್ರಿಸಲಾಗಿದೆ). - ಸಂ.

ನಾಟಿ ತಳಿ ವೈವಿಧ್ಯಕ್ಕೆ ಪುನರ್‌ಜೀವ - ಗ್ರೀನ್ ಫೌಂಡೇಷನ್ ಸಾಧನೆ

ಕೃಷ್ಣಪ್ರಸಾದ್, ತಳಿ

ಸಾಮೆ

ಅತ್ಯಂತ ಕಡಿಮೆ ಮಳೆ ಬೀಳುವ, ಸಾರವಿಲ್ಲದ ಮಣ್ಣಿನಲ್ಲಿ ಕೂಡ ಬೆಳೆಯುವ ಸಾಮೆ, ಇಂದು ಅಪರೂಪವಾಗುತ್ತಿರುವ ತೃಣ ಧಾನ್ಯ. ಹುಲ್ಲು ಮತ್ತು ಕಾಳಿನ ಇಳುವರಿ ಆಶಾದಾಯಕವಾಗಿರುವ ಸಾಮೆ (Little Millet) ಯನ್ನು ಬಿಸ್ಕತ್ ಕಂಪನಿಗಳು ಕೊಳ್ಳಲು ಆರಂಭಿಸಿರುವುದರಿಂದ ಮಾರುಕಟ್ಟೆಯ ಭಯವಿಲ್ಲ.

ಹೆಜ್ಜಾಮೆ

ಎತ್ತರವಾಗಿ ಬೆಳೆದು, ಉದ್ದ ತೆನೆಗಳಿಂದ ತೊನೆದಾಡುವ ಹೆಜ್ಜಾಮೆ ಸಾರವಿಲ್ಲದ ಬರಡು ಮಣ್ಣಿನಲ್ಲೂ ಹುಲುಸಾಗಿ ಬೆಳೆಯುತ್ತದೆ. ರಾಗಿಯಲ್ಲಿ ಮಿಶ್ರ ಬೆಳೆಯಾಗಿ ಕೂಡ ಇದನ್ನು ಬೆಳೆಸಬಹುದು. ಮಳೆಯ ವೈಪರೀತ್ಯವನ್ನು ತಡೆದುಕೊಳ್ಳುವ ಶಕ್ತಿಯುಳ್ಳ ಹೆಜ್ಜಾಮೇ, ಸಾಮೆ ತಳಿಗಳಲ್ಲೇ ಅತ್ಯಂತ ಹೆಚ್ಚು ಹುಲ್ಲು ಮತ್ತು ಕಾಳಿನ ಇಳುವರಿ ನೀಡುವಂತ ತಳಿ.

ಕೆಂಪು ಸಾಮೆ

ಕಪ್ಪು ಬಣ್ಣದ ಕಾಳಿನ ಕೆಂಪು ಸಾಮೆ ಅಪರೂಪವಾಗುತ್ತಿರುವ ಸಾಮೆ ತಳಿ, ಕಲ್ಲು ಮಿಶ್ರಿತ ಭೂಮಿಗೆ ಸೂಕ್ತವಾದದ್ದು, ಮಳೆ ಹೆಚ್ಚಾದರೆ ಕಾಳು ಕಟ್ಟುವ ಪ್ರಮಾಣ ಕಡಿಮೆ. ಇಳುವರಿ ಸಾಧಾರಣ.

ಮೂರು ತಿಂಗಳ ಸಾಮೆ

ಮೂರು ತಿಂಗಳ ಸಾಮೆ ಹೆಸರೇ ಹೇಳುವಂತೆ, ಮೂರು ತಿಂಗಳಿಗೆ ಕೊಯ್ಲಿಗೆ ಬರುವ ತಳಿ, ಹುಲ್ಲಿನ ಪ್ರಮಾಣ ತೀರಾ ಕಡಿಮೆ, ಕಾಳಿನ ಇಳುವರಿ ಕೂಡ ಕಮ್ಮಿ. ಕೀಟ ಮತ್ತು ರೋಗ ಬಾಧೆಯ ಭಯವಿಲ್ಲ.

ಸಜ್ಜೆ

ಸಜ್ಜೆ (Pearl Millet) ರೈತರು ಮರೆತಿರುವ ಮತ್ತೊಂದು ತೃಣಧಾನ್ಯ. ಅತ್ಯಂತ ರುಚಿಕರವಾದ, ಫಲವತ್ತಾದ ಮಣ್ಣಿನಲ್ಲಿ ಬೆಳೆಯುವ ಸಜ್ಜೆಗೆ ಮಾರುಕಟ್ಟೆ ಬೇಡಿಕೆ ಇದೆ. ಬೆಳೆಯುವವರಿಲ್ಲ. ಪಕ್ಷಿಗಳ ಕಾಟದಿಂದ ರೈತರು ಇದರ ಬಳಕೆ ಕೈ ಬಿಟ್ಟಿದ್ದಾರೆ. ಗ್ರೀನ್ ಸಂಸ್ಥೆ ಕಾಡಿನ ಹಳ್ಳಿಯೊಂದರಲ್ಲಿ ಪತ್ತೆ ಹಚ್ಚಿದ ತೆನೆಯ ಉದ್ದಕ್ಕೂ ಮುಳ್ಳುಗಳ ಮಾದರಿ ರಚನೆ ಹೊಂದಿರುವ ಮುಳ್ಳು ಸಜ್ಜೆ ರೈತರನ್ನು ಮತ್ತೆ ಸಜ್ಜೆ ಬೆಳೆ ತೆಗೆಯಲು ಪ್ರೇರೇಪಿಸುತ್ತಿದೆ. ಎರಡು ಮೀಟರ್‌ಗೂ ಮೀರಿ ಎತ್ತರ ಬೆಳೆವ ಈ ತಳಿಗೆ ಪಕ್ಷಿಗಳ ಕಾಟ ಇಲ್ಲವೇ ಇಲ್ಲ. ಮಳೆ ಸಾಧಾರಣವಾಗಿ ಬಿದ್ದರೆ, ಒಳ್ಳೆಯ ಇಳುವರಿ ನಿರೀಕ್ಷಿಸಬಹುದು. ದಂಟು ಗಟ್ಟಿ ಇರುವುದರಿಂದ ಮೇವಿಗೆ ಸೂಕ್ತವಲ್ಲ.

ಹುಲ್ಲು ಸಜ್ಜೆ

ಎರಡು ಮೀಟರ್ ಎತ್ತರಕ್ಕೆ ಬೆಳೆವ, ಸಣ್ಣ ಕಡ್ಡಿಯ ಹುಲ್ಲು ಸಜ್ಜೆ; ಕಾಳು ಮತ್ತು ಹುಲ್ಲಿನ ಇಳುವರಿ ಎರಡರಲ್ಲೂ ಎತ್ತಿದ ಕೈ. ದೀರ್ಘಾವಧಿ ತಳಿ. ಮಳೆ ಹೆಚ್ಚಾದರೆ ಹುಲ್ಲು ಜಾಸ್ತಿ, ಕಾಳು ಕಡಿಮೆ. ಮಳೆ ಕಡಿಮೆಯಾದರೆ ಕಾಳು ಹೆಚ್ಚು, ಹುಲ್ಲು ಕಡಿಮೆ. ನೀರಾವರಿಯಲ್ಲಿ ಇದನ್ನು ದನದ ಮೇವಿಗಾಗಿ ಕೂಡ ಬೆಳೆಯಬಹುದು.

ಕೊಂಬಿನ ಹಕ್ಕಿ ಸಜ್ಜೆ

ಕೊಬಿನಂತಹ ರಚನೆಯ ಕೊಂಬಿನ ಹಕ್ಕಿ ಸಜ್ಜೆಯ ಕಾಳು; ತೆಳ್ಳಗೆ ಉದ್ದವಾಗಿರುತ್ತದೆ. ಇಡೀ ಊರಿನ ರೈತರು ಹಾಕಿದರೆ, ಪಕ್ಷಿಗಳ ಕಾಟ ಕಮ್ಮಿಯಾಗುತ್ತದೆ. ಈಗಲೂ ಕನಕಪುರ ತಾಲ್ಲೂಕಿನಲ್ಲಿ ಈ ಸಜ್ಜೆ ತಳಿಯನ್ನು ರಾಗಿಯ ಸಾಲು ಬೆಳೆಯಾಗಿ ಕಾಣಬಹುದು.

ಆರಕ

ಹೆಚ್ಚುಕಮ್ಮಿ ರೈತರ ಹೊಲಗಳಿಂದ ಕಣ್ಮರೆ ಯಾಗಿರುವ, ಬರಗಾಲದ ಮಿತ್ರ ಎಂದು ಕರೆಸಿಕೊಳ್ಳುವ ಆರಕ (Kodo millet), ಪಾಳು ಬಿದ್ದ ಜಮೀನು, ಕಲ್ಲುಮಿಶ್ರಿತ ಕೆಂಪು ಮಣ್ಣಿನಲ್ಲಿ ಕೂಡ ಬೆಳೆಯುತ್ತದೆ. ಒಂದೆರೆಡು ಮಳೆ ಸಾಕು. ಅಕ್ಕಿ ಮಾಡುವ ರೇಜಿಗೆ ದೆಸೆಯಿಂದ ಈ ತಳಿ ನಾಶದ ಅಂಚಿನಲ್ಲಿದೆ. ಆರಕದಕ್ಕಿ ಅನ್ನ ಮತ್ತು ಮೊಸರು ಹಳ್ಳಿಗಾಡಿನ ರೈತರ ಬಾಯಲ್ಲಿ ನೀರೂರಿಸುವುದು ಸಾಮಾನ್ಯ ಸಂಗತಿ.

ಬರಗು

ಕುದುರೆ ಬಾಲದಂತೆ ಉದ್ದನಾಗಿ ಇರುವ ಬರಗು (Barnyard millet) ತಮಿಳಿನಲ್ಲಿ 'ಕುದರೆ ವಾಲಿ' ಎಂದೇ ಗುರುತಿಸಲ್ಪಡುತ್ತದೆ. ಕೆಂಪು ಮತ್ತು ಬಿಳಿ ಕಾಳಿನ ಎರಡು ಜಾತಿ ಇದೆ. ಸಾರವಿಲ್ಲದ ಅತ್ಯಂತ ಕಡಿಮೆ ಮಳೆ ಬೀಳುವ ಪ್ರದೇಶಕ್ಕೆ ಸೂಕ್ತ ತಳಿ. ಆದರೆ ಅಕ್ಕಿ ಮಾಡುವುದು ಕ್ಲಿಷ್ಟಕರ ಕೆಲಸ.

ನವಣೆ

ನವಣೆಯನ್ನು ರಾಗಿಯ ಸಾಲು ಬೆಳೆಯಾಗಿ ಅಥವಾ ಮಿಶ್ರ ಬೆಳೆಯಾಗಿ ಬೆಳೆಸಬಹುದು. ಕುಚ್ಚುನವಣೆ ದನದ ಕುಚ್ಚಿನ ರೀತಿ ದಪ್ಪನಿದ್ದರೆ; ಜಡೆ ನವಣೆ ಹೆಂಗಸರ ಜಡೆಯಂತೆ ಇಳಿ ಬೀಳುತ್ತದೆ. ಕೆಂಪು ನವಣೆಯ ಕಾಳು ಗಾಢ ಕೆಂಪು ಬಣ್ಣ ಹೊಂದಿದ್ದರೆ, ಕರಿ ನವಣೆಯ ಕಾಳು ಕಪ್ಪು ಬಣ್ಣದ್ದು. ಮಳೆ ಆಶ್ರಿತ ರೈತರು ಉಳಿಸಿ ಬೆಳೆಸಬೇಕಾಗಿರುವ ತೃಣ ಧಾನ್ಯವಿದು.

ಮಡಿಕೆ ಹೆಸರು

ಪೊದೆಯ ರೀತಿ ಹಬ್ಬಿ ಬೆಳೆಯುವ 'ಮಡಿಕೆ ಹೆಸರು' (Moth bean) ಮಾಯ ವಾಗುತ್ತಿರುವ ದ್ವಿದಳ ಧಾನ್ಯದ ತಳಿ. ಬೀಜ ಸಂಗ್ರಹ ತುಂಬಾ ಕಷ್ಟಕರನಾದ್ದರಿಂದ ರೈತರು ಇದನ್ನು ಬಿಟ್ಟುಕೊಟ್ಟಿದ್ದಾರೆ. ನೆಲದ ಸಾರ ಹೆಚ್ಚು ಮಾಡುವ ಇದನ್ನು ಹಸಿರೆಲೆ ಗೊಬ್ಬರವಾಗಿ ಕೂಡ ಬಳಸಬಹುದು.

ಮಳೆ ಆಶ್ರಿತ ಒಣಭೂಮಿ ಪ್ರದೇಶದ ಕೃಷಿ ವೈವಿಧ್ಯ, ಆಧುನಿಕ ಕೃಷಿಯ ಮರೆಯಲ್ಲಿ ಮರೆಯಾಗುತ್ತಿದೆ. ವೈವಿಧ್ಯವೇ ಉಸಿರಾದ ಮಿಶ್ರ ಬೆಳೆ, ಸಾಲು ಬೆಳೆ ಮೊದಲಾದ ಪರಂಪರಾಗತ ಕೃಷಿಯ ಪದ್ಧತಿಗಳು ಇವತ್ತು ಇಲ್ಲವಾಗಿ, ಬರಿಯ ರಾಗಿ, ಕಡಲೆ ಗಿಡವೇ ಮುಖ್ಯನಾದ ಏಕ ಬೆಳೆ ಸಂಸ್ಕೃತಿ ಮೇಲುಗೈ ಪಡೆಯುತ್ತಿದೆ. ಅಪರೂಪದ ನಾಟಿ ಬೀಜಗಳನ್ನು ಸಂಗ್ರಹಿಸಿ, ಬೆಳೆಸಿ ಅವುಗಳ ಗುಣ ವಿಶೇಷತೆಯನ್ನು ದಾಖಲಿಸುವ ಜೊತೆ ಜೊತೆಯಲ್ಲೇ, ನಾಡು ತಳಿಗಳನ್ನು ಹೈ ಬ್ರಿಡ್ ತಳಿಗಳೊಂದಿಗೆ ಹೋಲಿಸಿ ನೋಡುವ, ಲಾಭ ನಷ್ಟವನ್ನು ತೂಗಿ ನೋಡುವ ಕೆಲಸವನ್ನು ರೈತರ ಸಹಭಾಗಿತ್ವದಲ್ಲಿ ಗ್ರೀನ್ ಸಂಸ್ಥೆ ನಡೆಸುತ್ತಿದೆ. ಮಹಿಳಾ ರೈತರ ಸಹಭಾಗಿತ್ವ ಕಾರ್ಯಕ್ರಮಗಳಲ್ಲಿ ನಾಡು ತಳಿಗಳ ಗುಣಗಳನ್ನು ಗುರುತಿಸಲಾಗುತ್ತದೆ, ಇಳುವರಿ ಅಷ್ಟೇ ಮುಖ್ಯವಲ್ಲದೆ, ಹುಲ್ಲಿನ ಪ್ರಮಾಣ, ರೋಗ, ಕೀಟ ನಿರೋಧಕ ಶಕ್ತಿ, ಬರ ನಿರೋಧಕ ಗುಣ, ಆಹಾರದ ರುಚಿ, ಗೊಬ್ಬರದ ಬೇಡಿಕೆ, ಸಂಗ್ರಹಣಾ ಸಾಮರ್ಥ್ಯ ಮೊದಲಾದ ಅಂಶಗಳನ್ನು ಮಾನದಂಡವಾಗಿ ಬಳಸಲಾಗುತ್ತದೆ. ರೈತರು ಬೆಳೆಸಿ, ಉಳಿಸಿ ಬೀಜಗಳನ್ನು ರೈತ ರೈತರ ನಡುವೆ ಹಂಚಿಕೊಂಡು, ಬೀಜ ವೈವಿಧ್ಯವನ್ನು ಬಲಗೊಳಿಸಲು ಪ್ರೇರೇಪಿಸಲಾಗುತ್ತಿದೆ.

ಜೀವ ವೈವಿಧ್ಯ

ಕಲ್ಲಾರ್ ಗ್ರಾಸ್ ನಾಟಿ ಬತ್ತದ ತಳಿ

ಪಾಕಿಸ್ತಾನದ ಕಲ್ಲಾರ್ ಗ್ರಾಸ್ ಎಂಬ ಕಾಡು ಬತ್ತದ ಬೇರಿನಲ್ಲಿ ಮನೆಮಾಡಿಕೊಂಡಿರುವ ಕೆಲವು ಏಕಾಣು ಜೀವಿಗಳು ಸಾರಜನಕವನ್ನು ಹಿಡಿದಿಡುವ ಶಕ್ತಿ ಹೊಂದಿದೆಯೆಂದು ತಿಳಿದುಬಂದಿದೆ. ಇದೇ ಏಕಾಣು ಜೀವಿಗಳನ್ನು ತಂದು ಇತರ ಭತ್ತದ ತಳಿಗಳಲ್ಲಿ ಅದನ್ನು ಬೆಳೆಸಿ ನೋಡಿದಾಗ ಆ ತಳಿಗಳೂ ಸಾರಜನಕವನ್ನು ಗಾಳಿಯಿಂದ ಹಿಡಿದಿಡುವ ಸೂಚನೆಗಳು ಕಂಡು ಬಂದಿದೆ.

ಉಪ್ಪಿನ ಅಂಶವಿರುವ ಮಣ್ಣಿನಲ್ಲಿ ಈ ಕಲ್ಲಾರ್ ಕಾಡು ಬತ್ತ ತನ್ನಿಂದ ತಾನೇ ಬೆಳೆಯುತ್ತದೆ, ರೈತರು ಯಾವ ಪರಿಶ್ರಮವಿಲ್ಲದೆ, ಗೊಬ್ಬರ ಉಣ್ಣಿಸದೆ ಇದನ್ನು ಬೆಳೆಸುತ್ತಾರಂತೆ.

ಹಸಿರು ಕ್ರಾಂತಿಯ ಹೆಸರಿನಲ್ಲಿ, ಅಧಿಕ ಉತ್ಪಾದನೆ ಸಾಧಿಸುವ ಓಟದಲ್ಲಿ ಕಲ್ಲಾರ್ ಕಾಡು ಬತ್ತದಂತಹ ಅದೆಷ್ಟು ತಳಿಗಳು ಮೂಲೆಗುಂಪಾಗಿವೆಯೋ ಏನೊ? ಸ್ಥಳೀಯ ನಾಟೀ ತಳಿಗಳನ್ನು, ದೇಶೀಯ ತಂತ್ರಜ್ಞಾನ ವನ್ನೂ ಮರೆಯದೇ ಉಳಿಸಿಕೊಳ್ಳುವ ಅಗತ್ಯ; ಒಂದು ಪ್ರಾಂತ್ಯ ಅಥವಾ ದೇಶದಿಂದ ಬೇರೆ ಪ್ರದೇಶಕ್ಕೆ ಅದನ್ನು ಪಸರಿಸಬೇಕಾದ ಅಗತ್ಯ ಇವೆಲ್ಲ ಈ ಕಲ್ಲಾರ್ ಬತ್ತದ ಉದಾಹರಣೆ ಯಿಂದಾಗಿ ಬಲಗೊಳ್ಳುತ್ತವೆ.

ಅಧಿಕ ಇಳುವರಿಯ ನಾನಾ ಭತ್ತದ ತಳಿಗಳು ದೊರೆಯುತ್ತಿರುವಾಗ, ಈ ಕಲ್ಲಾರ್ ಕಾಡು ಬತ್ತ ವನ್ನು ರೈತರು ಉಳಿಸಿಕೊಂಡು ಬಂದದ್ದು ಅಚ್ಚರಿಯ ಜೊತೆಗೆ ಪ್ರಶಂಸನಾರ್ಹ ಕೂಡ. ಏಕದಳ ಸಸ್ಯಗಳಿಗೆ 'ಗಾಳಿಯಿಂದ ಸಾರಜನಕ ಹಿಡಿದಿಡುವ ಶಕ್ತಿ' ಸೇರಿಸುವುದು ಇನ್ನೂ ನನಸಾಗದ ವಿಜ್ಞಾನಿಗಳ ಒಂದು ಕನಸು.

ಮುಂದೆಂದಾದರೂ ಈ ತಳಿಯ ಗುಣಾಣುಗಳನ್ನು ಬಳಸಿ ಜೈವಿಕ ತಂತ್ರಜ್ಞಾನದ ಮುಖಾಂತರ ಹೊಸ ತಳಿ ಸೃಷ್ಟಿಯಾದರೆ, ಅದರ ಮೇಲಿನ ಪೇಟೆಂಟ್ ಹಕ್ಕಿನಲ್ಲಿ ಮೂಲ ತಳಿಯನ್ನು ಸಂರಕ್ಷಿಸಿ ಉಳಿಸಿಕೊಂಡು ಬಂದ ರೈತರ ಪಾಲಾದರೂ ಎಷ್ಟು ಎಂಬುದು ಯೋಚಿಸಬೇಕಾದ ವಿಚಾರ.

ಮೂಲ : ಪ್ರಜಾವಾಣಿ 1997.

ಬೀಜ ಮತ್ತು ಧಾನ್ಯಗಳ ಸಂಗ್ರಹಣೆ - ಹಲವು ಸಾಂಪ್ರದಾಯಕ ಪದ್ಧತಿಗಳು

ಕೃಷಿಯಲ್ಲಿ ಧಾನ್ಯಗಳ ಸಂಗ್ರಹಣೆ ಬಹು ಮುಖ್ಯವಾದ ಕೆಲಸ. ಇದನ್ನು ಮುಂದಿನ ಬೆಳೆಗೆ ಬೀಜವಾಗಿ ಉಪಯೋಗಿಸಬಹುದು ಅಥವಾ ದವಸಧಾನ್ಯವಾಗಿ ಉಪಯೋಗಿಸ ಬಹುದು. ಆದ್ದರಿಂದ ಇವುಗಳನ್ನು ಕೀಟಗಳಿಂದ ವಿಮುಕ್ತಗೊಳಿಸುವುದು ಮತ್ತು ರೋಗಗಳಿಂದ ದೂರವಿರಿಸುವುದು ಆಗತ್ಯದ ಕೆಲಸವಾಗಿದೆ. ಈ ರೀತಿಯ ಕೆಲವು ಸಾಂಪ್ರದಾಯಿಕ ಕ್ರಮಗಳು ಇನ್ನೂ ಕೆಲವು ಮನೆಗಳಲ್ಲಿ ಮುಂದುವರಿದು ಬಂದಿದೆ. ಇಂತಹ ಕೆಲವು ಸಂಗ್ರಹಣಾ ಪದ್ಧತಿಗಳು ಹೀಗಿವೆ.

ತೊಗರಿಯನ್ನು ಹುಳದಿಂದ ಮುಕ್ತಗೊಳಿಸಲು 15-20 ದಿನಗಳಿಗೊಮ್ಮೆ ಬಿಸಿಲಿಗೆ ಹಾಕಿ ಒಣಗಿಸುವುದರಿಂದ ಈ ಹುಳಗಳು ಸತ್ತು ಹೋಗುವವು.

ತೊಗರಿ, ಅವರೆ, ಹೆಸರು, ಉದ್ದು ಮುಂತಾದ ಕಾಳುಗಳಿಗೆ ಕೆಮ್ಮಣ್ಣು ನೀರಿನಲ್ಲಿ ಕಲಸಿ ಧಾನ್ಯದ ಮೇಲೆ ಚಿಮುಕಿಸಿ ಪೂರ್ಣ ಈ ಮಣ್ಣಿನ ದ್ರಾವಣದಲ್ಲಿ ತೇಯುವಂತೆ ಮಾಡಿ, ಬಿಸಿಲಲ್ಲಿ ಒಣಗಿಸಿ, ಚೀಲದಲ್ಲಿ ಹಾಕಿ ಕಟ್ಟಿ ಇಡುವುದರಿಂದ ಕೀಟ ಬಾಧೆ ತಪ್ಪಿಸಬಹುದು.

ಅರಿಶಿನ ಪುಡಿ ಮತ್ತು ಹರಳೆಣ್ಣೆ (Castor oil) ಯಲ್ಲಿ ತೋಯಿಸಿ (1 ಕೆ.ಜಿ. ಧಾನ್ಯಕ್ಕೆ 50 ಗ್ರಾಂ, ಹರಳೆಣ್ಣೆ 25 ಗ್ರಾಂ ಅರಿಶಿನಪುಡಿ) ಸ್ವಲ್ಪ ಒಣಗಿದ ನಂತರ ಶೇಖರಿಸುವುದರಿಂದ ಹುಳದ ಬಾಧೆ ಇರುವುದಿಲ್ಲ.

ಧಾನ್ಯ ಶೇಖರಿಸುವಾಗ ಒಣಮೆಣಸಿನ ಕಾಯಿಯನ್ನು ತುಂಡು ತುಂಡಾಗಿ ಕತ್ತರಿಸಿ, ಅದರೊಂದಿಗೆ ಉಪ್ಪು ಸೇರಿಸಿ (ಪ್ರಮಾಣ 1 ಕೆ.ಜಿ. ಧಾನ್ಯಕ್ಕೆ 100 ಗ್ರಾಂ ಒಣಮೆಣಸು +100 ಗ್ರಾಂ ಉಪ್ಪು) ಚೀಲದಲ್ಲಿ ಬಿಗಿಯಾಗಿ ಕಟ್ಟಿ ಇಡುವುದರಿಂದ ಕ್ರಿಮಿ ಕೀಟಗಳ ಹಾವಳಿ ತಪ್ಪಿಸಬಹುದು.

ಚಪ್ಪರದ ಅವರೆ, ಹೀರೆಕಾಯಿ, ಸೋರೆಕಾಯಿಯನ್ನು ಹಾಗೇ ಸಿಪ್ಪೆ ತೆಗೆಯದೆ ಒಣಗಿದ ಕಾಯಿಗಳನ್ನು ಶೇಖರಿಸುವುದರಿಂದ ಕಾಳು ಕೊರಕ ಹುಳುವಿನ ಬಾಧೆ ತಪ್ಪಿಸಬಹುದು. ಎಳ್ಳನ್ನು ಹರಳಿನೊಂದಿಗೆ ಬೆರೆಸಿ ಸಂಗ್ರಹಿಸುವುದರಿಂದ ಕೀಟ ಹಾವಳಿ ತಪ್ಪಿಸಬಹುದು.

ತೆಂಗಿನ ಕಾಯಿಗಳನ್ನು ಗಾಳಿಯಾಡುವ ಪ್ರದೇಶದಲ್ಲಿ 5 ರಿಂದ 6 ಅಡಿ ಎತ್ತರದಲ್ಲಿ ಮೇಲೆ ಬಿದಿರು ಕಟ್ಟಿಗೆ / ಅಡಿಕೆ ದಬ್ಬೆಯಿಂದ ಅಟ್ಟ ಹಾಕಿ ಗಾಳಿ ಸರಾಗವಾಗಿ ಕೆಳಗೆ ಮತ್ತು ಮೇಲೆ ಓಡಾಡಲು ಅವಕಾಶ ಮಾಡಿ ಕಾಯಿ ಸಂಗ್ರಹಿಸುವುದರಿಂದ ತೆಂಗಿನ ಕಾಯಿ ಕೆಡುವುದಿಲ್ಲ, ಉತ್ತಮ ಕೊಬ್ಬರಿ ದೊರೆಯುತ್ತದೆ.

ಜೋಳಕ್ಕೆ ಉಪ್ಪು, ಬೇವಿನ ಸೊಪ್ಪು ಮತ್ತು ಬೆಳ್ಳುಳ್ಳಿಯನ್ನು ಹಾಕಿ ಸಂಗ್ರಹಿಸುವುದರಿಂದ ಹುಳುವಿನ ಬಾಧೆ ಕಡಿಮೆಯಾಗುವುದು ಮತ್ತು ಹುಳಗಳನ್ನು ದೂರವಿಡಬಹುದು.


ದ್ವಿದಳ ಧಾನ್ಯಗಳಿಗೆ ಬೆಳ್ಳುಳ್ಳಿ, ಅರಿಶಿನ ಪುಡಿ, ಮರಳು ಹಾಕಿ ಧಾನ್ಯ ಸಂಗ್ರಹಿಸುವುದರಿಂದ ಕೀಟ ಬಾಧೆ ತಪ್ಪಿಸಬಹುದು.

ಭತ್ತಕ್ಕೆ ಸವಳು (Saline Soil) ಹಾಕಿ ಚೀಲದಲ್ಲಿ ಶೇಖರಿಸುವುದರಿಂದ ಹುಳುವಿನ ಹಾವಳಿಯಿಂದ ಮುಕ್ತವಾಗಿರುವುದು.

ಹಿಂದೆ ಹಗೇವು ಮತ್ತು ಕಣಜಗಳನ್ನು ಕಟ್ಟಿಸಿ ಅಥವಾ ವಾಡೇವು (ಮಣ್ಣಿನಿಂದ ತಯಾರಿಸಿದ ದೊಡ್ಡ ಮಡಿಕೆಗಳು)ಗಳ ಬಳಕೆಯಿಂದ ವರ್ಷಾನುಗಟ್ಟಲೆ ಹೆಚ್ಚು ಧಾನ್ಯ ಕಾಳುಗಳನ್ನು ಸಂಗ್ರಹಿಸುತ್ತಿದ್ದರು. ಈ ರೀತಿಯಲ್ಲಿ ಸಂಗ್ರಹಿಸಿದ ಧಾನ್ಯಗಳು ಕೀಟಗಳ ಹಾವಳಿಗೆ ದೊರಕದೆ, ಶುದ್ಧವಾಗಿ ಇರುತ್ತಿದ್ದವು. ಈ ರೀತಿ ಹಿಂದೆ ಸಂಗ್ರಹಿಸಿದ ಧಾನ್ಯದ ಉದಾಹರಣೆಯೊಂದು ಇಲ್ಲಿದೆ.

ಚಳ್ಳಕೆರೆ ತಾಲ್ಲೂಕಿನ ಹೆಗ್ಗೆರೆಯಲ್ಲಿ ಶಾಲೆ ಕಟ್ಟಿಸಲು 1962ರಲ್ಲಿ ಪಾಯ ಹಾಕುವಾಗ ಅಲ್ಲಿ ಹಗೇವುಗಳು ದೊರಕಿದವಂತೆ! 4-6 ಹಗೇವುಗಳು ಸಾಲಾಗಿ ಇದ್ದವು. ಅವುಗಳಲ್ಲಿ 1 ಹಗೇವಿನಲ್ಲಿ ಸುಮಾರು 20-30 ಚೀಲ ಸಜ್ಜೆ ಸಿಕ್ಕು ಅವು ಸ್ವಚ್ಛವಾಗಿ, ಹಾಳಾಗದೆ ಇದ್ದ ವೆಂದೂ ಈ ಕಾಳನ್ನು ಹಳ್ಳಿಯ ಪ್ರತಿಯೊಂದು ಮನೆಯವರು ಹಂಚಿಕೊಂಡರೆಂದೂ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಬೆಳಗೇರಿ ಕೃಷ್ಣಶಾಸ್ತ್ರಿ ಹೇಳುವರು. ಈ ಹಗೇವಿಗೆ ಗಾರೆ (ಸುಣ್ಣ ಮತ್ತು ಮರಳಿನಿಂದ) ಹಾಕಿದ್ದರೆಂದು ಹೇಳುವರು.

ಸಂಗ್ರಹ : ನಾಗರತ್ನ ಬಿ.ಕೆ.
ಜಿ.ಕೆ.ವಿ.ಕೆ., ಬೆಂಗಳೂರು



ಪರಿಸರ ಪ್ರಜ್ಞೆ ಕಥೆ ವ್ಯಥೆ

ಲೇಖಕರು : ಎಂ. ಮಹೇಶನ್
ಸೃಷ್ಟಿ ಪ್ರಕಾಶನ, ನಂ. 10 ಕಾಳಿದಾಸ ಮಾರ್ಗ, ಗಾಂಧಿನಗರ, ಬೆಂಗಳೂರು - 9.

ಪರಿಸರ ಮಾಲಿನ್ಯವೆಂದೊಡನೆ, ಯಾವುದು, ಯಾವುದರಿಂದ ಎಂಬ ವಿಶ್ಲೇಷಣೆಯಿಂದ ಪುಸ್ತಕ ಆರಂಭವಾಗುತ್ತದೆ. ಪರಿಸರ ಮಾಲಿನ್ಯದ ಮೂಲವನ್ನು ಮಾನವನ ಚಾರಿತ್ರಿಕ ಇತಿಹಾಸದಲ್ಲಿ, ಉತ್ಪಾದನ ವಿಧಾನದ ವಿಕಸನದಲ್ಲಿ ಲೇಖಕರು ಹುಡುಕಿದ್ದಾರೆ. ಪ್ರಕೃತಿ ಮಾನವ ಸಂಬಂಧಗಳು ಮಧುರ ಸಂಬಂಧವಾಗಿ ಉಳಿಯದೆ ಪರಿಸರ ಶೋಷಣೆಯಾಗುತ್ತಿರುವುದು, ಈ ಶೋಷಣೆ ವ್ಯಾಪಕವಾಗುತ್ತಿರುವುದು, ಇಂದಿನ ವಿಷಯವಷ್ಟೇ ಅಲ್ಲ. ಹಿಂದೆ ಮಹಾನಾಗರೀಕತೆಗಳು ಸಾಮ್ರಾಜ್ಯಗಳು ನಾಶಗೊಂಡಿರುವುದಕ್ಕೂ ಇದೇ ತರಹದ ಕಾರಣಗಳಿವೆ ಎಂದು ವಿವರಿಸುವ ಪುಸ್ತಕ ಸಮಸ್ಯೆಗಳ ಚಾರಿತ್ರಿಕ, ಸೈದ್ಧಾಂತಿಕ, ಧಾರ್ಮಿಕ, ಹಾಗೂ ಆರ್ಥಿಕ ನೆಲೆಗಳಲ್ಲಿ ಕಂಡುಬರಬಹುದಾದ ಬೇರುಗಳಿಗೆ ಹುಡುಕಾಟದ ಪ್ರಯತ್ನ ನಡೆಸಿದೆ.

ಕೈಗಾರೀಕರಣದಿಂದ ಉಂಟಾಗುತ್ತಿದ್ದ ಮಾಲಿನ್ಯದ ಜೊತೆಗೆ ಅದರ ವಿರುದ್ಧ ವಿಕಸನಗೊಳ್ಳುತ್ತಾ ಹೋದ ದಾರಿಯನ್ನು 1992ರ ರಿಯೋ ಸಮ್ಮೇಳನ ಹಾಗೂ ಇನ್ನೂ ಮುಂದಿನ ವಿಶ್ವವ್ಯಾಪಾರ ಸಂಸ್ಥೆ ಹಾಗೂ ಗ್ಯಾಟ್ ಒಪ್ಪಂದದವರೆಗೆ ವೀಕ್ಷಿಸಿದ್ದಾರೆ. ಲೇಖಕರು ಇದನ್ನು ಭಾರತದ ಹಿನ್ನೆಲೆಯಲ್ಲಿ ವಸಾಹತುಶಾಯಿಯ ಸಮಯ ಹಾಗೂ ಅದರ ಹಿಂದೆ ಮತ್ತು ಮುಂದಿನ ಅವಧಿಯಲ್ಲಿ ಗುರುತಿಸಿ ವಿಶ್ಲೇಷಿಸಿರುವರು.

ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನದಿಂದಾಗುತ್ತಿರುವ ಅನಾಹುತಗಳನ್ನು ಗಮನದಲ್ಲಿಟ್ಟು ಅದಕ್ಕೆ ಪರ್ಯಾಯವಾಗಿ ರೂಪುಗೊಳ್ಳುತ್ತಿರುವ ಪರಿಸರಾತ್ಮಕ ಕೃಷಿ, ಶಕ್ತಿ, ಮತ್ತು ಕೈಗಾರಿಕೆ ಬಗ್ಗೆ ಲೇಖಕರು ಒದಗಿಸಿರುವ ಮಾಹಿತಿ ಈ ರೀತಿಯ ಪರ್ಯಾಯ ವ್ಯವಸ್ಥೆಯ ಹುಡುಕಾಟ ನಡೆಸುವವರಿಗೆಲ್ಲಾ ಒಂದು ಉತ್ತಮ ಸಂಗ್ರಹವಾಗಲಿದೆ.

ವಿಶ್ವವ್ಯಾಪಾರ, ಪೇಟೆಂಟ್, ಜೈವಿಕ ವೈವಿಧ್ಯತೆಯ ಒಡಂಬಡಿಕೆ ಈ ಎಲ್ಲಾ ವಿಷಯಗಳು ಪ್ರಶ್ನೆಗಳಾಗಿ ಎದ್ದು ನಿಂತಾಗ ನಮ್ಮಾವರಿಗೆ ಅರಿವಾದ ಅಂಶವೆಂದರೆ, "ಜೀವವೈವಿಧ್ಯತೆಯಲ್ಲಿ ನಾವು ಶ್ರೀಮಂತರು" ಎಂಬುದು. ಆದರೆ, ಈ ಶ್ರೀಮಂತಿಕೆಯನ್ನು ಕೊಳ್ಳೆ ಹೊಡೆದು, ರೂಪ ಬದಲಾಯಿಸಿ ಅದನ್ನು ನಮಗೇ ಮಾರುವ ವ್ಯಾಪಾರ ಒಪ್ಪಂದಗಳಿಗೆ ಒಪ್ಪದೆ ಎದ್ದು ನಿಲ್ಲುವುದು ಅಗತ್ಯ ಎಂದು ಲೇಖಕರು ಒತ್ತಿ ಹೇಳಿರುವರು.

ಒಂದೆಡೆ ಪಾಪುವ ನ್ಯೂಗಿನಿಯಾ ದೇಶದ ಹಾಗಹ್ ಬುಡಕಟ್ಟಿನ ಯುವಕನೊಬ್ಬನ ರಕ್ತವನ್ನು ವಾಣಿಜ್ಯ ಉದ್ದೇಶಕ್ಕಾಗಿ ಪೇಟೆಂಟ್ ಮಾಡಿಕೊಂಡ ಅಮೇರಿಕಾ ವಿಜ್ಞಾನಿಗಳ ಉದಾಹರಣೆ ಈ ಪೇಟೆಂಟ್ ಪದ್ಧತಿಯನ್ನು ಉಪಯೋಗಿಸಿರುವ ವಿಧಿ ವಿಧಾನದ ನೀಚತನಕ್ಕೆ ದ್ಯೋತಕವಾಗಿ ಮೂಡಿಬಂದಿದೆ.

ಅದಕ್ಕೆ ಪ್ರತಿಯಾಗಿ, ಉತ್ತರ ಕೇರಳದ ಪಟ್ಟುವಂನ ಜನ ತಮ್ಮ ಗ್ರಾಮದ ಜೈವಿಕ ವೈವಿಧ್ಯತೆಯ ಜೀವಗಣತಿಯ ರಿಜಿಸ್ಟರ್ ತಯಾರಿಸಿ, ಆ ಜೈವಿಕ ವೈವಿಧ್ಯತೆಯ ಮೇಲೆ ಪಂಚಾಯಿತಿ ತನ್ನ ಸಾರ್ವಭೌಮ ಹಕ್ಕನ್ನು ಘೋಷಿಸಿ, ಯಾರೇ ಆಗಲಿ ಪಂಚಾಯಿತಿಯ ಅನುಮತಿ ಇಲ್ಲದೆ, ಬೌದ್ಧಿಕ ಸಾಮ್ಯದ ಹಕ್ಕುಗಳನ್ನು ಕೇಳುವಂತಿಲ್ಲ ಎಂದು ಘೋಷಿಸಿರುವ ಉದಾಹರಣೆಗಳಿವೆ.

ನಮ್ಮಲ್ಲಿನ ಸಸ್ಯಸಂಪತ್ತು, ಜೈವಿಕ ವೈವಿಧ್ಯತೆಗಳ ಜೊತೆಗೆ ಸ್ಥಳೀಯ ಜ್ಞಾನ ಸಂಪತ್ತು ಇವೆಲ್ಲ ನಮ್ಮ ಪೂರ್ವಿಕರು ಶತಶತಮಾನಗಳಿಂದ ಕಾಯ್ದುಕೊಂಡು, ಅಭಿವೃದ್ಧಿ ಮಾಡಿಕೊಂಡು ಬಂದ ಸಂಪತ್ತು. ಈ ಸಂಪತ್ತನ್ನು ಇತರರಿಗೆ ಕೊಳ್ಳೆ ಹೊಡೆಯಲು ಬಿಡದೆ ಮುಂದಿನ ಪೀಳಿಗೆಗೆ ಕಾಯ್ದಿಟ್ಟು ಒಪ್ಪಿಸುವುದು ನಮ್ಮೆಲ್ಲರ ಕರ್ತವ್ಯ. ಈ ನಿಟ್ಟಿನಲ್ಲಿ ಪಟ್ಟುವಂ ನಲ್ಲಿ ನಡೆದ ಕಾರ್ಯ ಗ್ರಾಮ ಗ್ರಾಮಗಳಲ್ಲಿ ಸಮರೋಪಾದಿಯಲ್ಲಿ, ಚಳುವಳಿಯ ರೀತಿ ನಡೆಯುವುದು ಅತ್ಯಗತ್ಯ. ಈ ಎಲ್ಲಾ ಉದಾಹರಣೆಗಳು ಒಂದೇ ಕಡೆ ದೊರೆಯುವುದರಿಂದ ಪುಸ್ತಕ ಉಪಯುಕ್ತವಾಗಿದೆ.

ಪರಿಸರ ಮುಂದೇನು?

ಸಂಪಾದಕರು : ಡಾ. ಪಿ.ಕೃಷ್ಣಪ್ಪ ಶೆಟ್ಟಿ ಮತ್ತು ಡಿ.ಆರ್. ನಟರಾಜ್
ಪರಿಸರ ವಿಜ್ಞಾನ ಪರಿಷತ್ತು ಮತ್ತು ಜವಹರಲಾಲ್ ನೆಹರು ಸೆಂಟರ್ ಫಾರ್ ಅಡ್ವಾನ್ಸ್‌ಡ್ ಸೈಂಟಿಫಿಕ್ ರಿಸರ್ಚ್, ಬೆಂಗಳೂರು - 560 064

ಒಟ್ಟಾರೆ, ಹದಿನಾಲ್ಕು ಲೇಖನಗಳನ್ನೊಳಗೊಂಡ ಈ ಪುಸ್ತಕಕ್ಕೆ ಲೇಖನ ಬರೆದಿರುವವರೆಲ್ಲರೂ ಪರಿಸರ ಸಂರಕ್ಷಣೆಯಲ್ಲಿ ಕಾಳಜಿ ಉಳ್ಳವರು ಹಾಗೂ ತಮ್ಮನ್ನು ಈ ಚಟುವಟಿಕೆಯಲ್ಲಿ ತೊಡಗಿಸಿಕೊಂಡವರು. ಪರಿಸರದ ಮಹತ್ವ, ಅದನ್ನು ಕಲುಷಿತಗೊಳಿಸಬಾರದೆಂಬ ಬಿನ್ನಹ ಇವೆಲ್ಲಾ ನಮಗೆ ಹೊಸದಲ್ಲ ಅದು ವೇದಗಳ ಕಾಲದಿಂದಲೂ ಇದ್ದದ್ದು. ವೇದಗಳಲ್ಲಿ, ಮಂತ್ರಗಳಲ್ಲಿ ಬರುವ ಪರಿಸರದ ಕುರಿತ ಚಿಂತನೆಗಳನ್ನು ಪ್ರೊ. ಸಾ.ಕೃ. ರಾಮಚಂದ್ರರಾವ್ ಅವರು "ವೇದವಾಙ್ಮಯದಲ್ಲಿ ಪರಿಸರ" ಎಂಬ ಲೇಖನದಲ್ಲಿ ವಿವರಿಸಿದ್ದಾರೆ.

ಜೀವ ವೈವಿಧ್ಯತೆಗಳ ಕುರಿತಾದ ಅಂಕಿ ಅಂಶಗಳು, ಇತಿಹಾಸ ಹಾಗೂ ಭವಿಷ್ಯದ ಕುರಿತಾದ ಲೆಕ್ಕಾಚಾರದ ಲೇಖನ ಡಾ. ಎನ್.ವಿ. ಮಧ್ಯಸ್ಥರದ್ದು. ಅದೇ ರೀತಿ "ಗ್ಯಾಟ್ ಒಪ್ಪಂದ ಹಿನ್ನೆಲೆಯಲ್ಲಿ ಜೈವಿಕ ವೈವಿಧ್ಯತೆಯ ರಕ್ಷಣೆಯಲ್ಲಿ ತಾಳಬೇಕಾದ ನಿಲುವುಗಳು" ಎಂಬ ಲೇಖನದಲ್ಲಿ ಭಾರತ ಸರ್ಕಾರದ ಜವಾಬ್ದಾರಿಯ ಕುರಿತಾದ ಎಚ್ಚರಿಕೆ ನೀಡುತ್ತಾರೆ. ಎ.ಎನ್. ಯಲ್ಲಪ್ಪರೆಡ್ಡಿಯವರು.

ಔದ್ಯಮೀಕರಣ ಅಬ್ಬರದಲ್ಲಿ ವಿದೇಶಿ ಬಂಡವಾಳಕ್ಕೆ ಮಣೆ ಹಾಕುವ ಹುನ್ನಾರದಲ್ಲಿ ಜೊತೆಗೆ ತನ್ನತನ, ವ್ಯಕ್ತಿಯ ಸಾಮಾಜಿಕ ಜವಾಬ್ದಾರಿ ಇವೆಲ್ಲ ಅರ್ಥ ಕಳೆದುಕೊಳ್ಳುತ್ತಿರುವ ಸದ್ಯದ ಪರಿಸ್ಥಿತಿಯಲ್ಲಿ ಭಾರತ ಮಾಲಿನ್ಯ ನಿಲ್ದಾಣವಾಗುತ್ತಿರುವ ವಿಷಯವನ್ನು ವಿಶದವಾಗಿ ನಿರೂಪಿಸಿದ್ದಾರೆ ನಾಗೇಶ ಹೆಗಡೆಯವರು.

ಪರಿಸರದ ಸಂರಕ್ಷಣೆಗೆಂದು ಹರಿದು ಬರುವ ವಿದೇಶಿ ಹಣ ಹಾಗೂ ಅದರ ನಿಜವಾದ ಮೌಲ್ಯದ ಕುರಿತು ಮಾರ್ಮಿಕವಾಗಿ ಬರೆದಿದ್ದಾರೆ ಪಾಂಡುರಂಗ ಹೆಗಡೆಯವರು.

ಶಕ್ತಿ ಮತ್ತು ಪರಿಸರದ ನಡುವಿನ ಸಂಬಂಧದ ಅಧ್ಯಯನದಿಂದ ಮೂಡಿಬಂದಿರುವ ಲೇಖನದಲ್ಲಿ ಶಕ್ತಿ ಮೂಲಗಳ ಅಗಾಧ ಬಳಕೆ ಪರಿಸರದ ವೈರಿಯೆಂದು ವಾದಿಸಿದ್ದಾರೆ. ಎ.ಓ ಆವಲಮೂರ್ತಿ. ಅದೇ ರೀತಿ ಡಾ. ಪಿ.ಕೃಷ್ಣಪ್ಪ ಶೆಟ್ಟಿಯವರು ರಾಸಾಯನಿಕ ಕೃಷಿ ಅಳವಡಿಸಿಕೊಂಡಿರುವ ಹಿನ್ನೆಲೆಯಲ್ಲಿ ಪರಿಸರದ ಮೇಲೆ ಉಂಟಾಗಿರುವ ತೀವ್ರ ಪ್ರತಿಕೂಲ ಪರಿಣಾಮದ ಕುರಿತು ಚರ್ಚಿಸಿದ್ದಾರೆ.

ಅಭಿವೃದ್ಧಿಯೆನ್ನುವುದು ಕ್ಷಣಿಕವಲ್ಲ. ಅದು ನಿರಂತರ ನಡೆಯುವ ಪ್ರಕ್ರಿಯೆಯೆಂದು

ಕೂಚು ಭಟ್ಟ

ಉದಾಹರಣೆಗಳೊಂದಿಗೆ ಮೂಡಿಬಂದಿರುವ ಲೇಖನ ಮಹೇಶ್‌ಲೋಭೋರವರ 'ಅಭಿವೃದ್ಧಿಯ ಅರ್ಥ'

'ಗ್ರಾಹಕ ಬಕಾಸುರ' ಮನೋಪ್ರವೃತ್ತಿಯೇ ಮಾಲಿನ್ಯದ ಮೂಲ; ಭೋಗ ಸಾಮಾಗ್ರಿ ಬಳಕೆಗೆ ಅಂಟಿಕೊಂಡ ಮೇಲೆ ಆ ಸಾಮಾಗ್ರಿಯ ಬಳಕೆಯನ್ನು ಹಿಂತೆಗೆದುಕೊಳ್ಳುವುದು ಕಷ್ಟ ಎನ್ನುತ್ತಾ ಎಮ್.ಆರ್. ನಾಗರಾಜುರವರು ಪರಿಸರ ಮಾಲಿನ್ಯದ ಮೂಲಕಾರಣವನ್ನು ಮನೋಭಾವದ ಮಾಲಿನ್ಯಕ್ಕೆ ಜೊತೆ ಮಾಡಿದ್ದಾರೆ.

ಟಿ.ಎನ್. ಪ್ರಕಾಶ ಕಮ್ಮರಡಿಯವರ 'ಸುಸ್ಥಿರ ಕೃಷಿ-ಒಂದು ಅವಲೋಕನ' ಉತ್ಪಾದಕತೆ, ಸಮಾನತೆ ಜೊತೆಗೆ ಅಂತರ್ ತಲೆಮಾರುಗಳ ದೃಷ್ಟಿಕೋನದಿಂದ ವಿಶ್ಲೇಷಿಸಿರುವ ಲೇಖನ. ಇದು ಓದುಗರನ್ನು ಗಂಭೀರ ಚಿಂತನೆಗೆ ಒಳಪಡಿಸುವಂತಹದ್ದು. ತಂತ್ರಜ್ಞಾನವೆಂದರೆ ಅಧಿಕ ಬಂಡವಾಳ ಇರುವವರ ಆಸ್ತಿ ಎನ್ನುವ ಸಾಮಾನ್ಯ ಅನಿಸಿಕೆಗೆ ವಿರುದ್ಧವಾಗಿ ದೇಶೀಯ ತಂತ್ರಜ್ಞಾನ, ಸಂಸ್ಥೆಗಳು ಜೊತೆಗೆ ಸಹಕಾರಿ ತತ್ವಕ್ಕೆ ಲೇಖನ ಹೆಚ್ಚಿನ ಒತ್ತುಕೊಟ್ಟಿದೆ.

ಪರಿಸರ ಮಾಲಿನ್ಯದ ಕುರಿತಾದ ಅಂಕಿ ಅಂಶಗಳು, ಜೊತೆಗೆ ಇದಕ್ಕೆ ಪರಿಹಾರದ ಕುರಿತಾದ ಪ್ರಶ್ನೋತ್ತರಗಳ ಲೇಖನ 'ಪರಿಸರ ಮಾಲಿನ್ಯ-ಮುಂದೇನು ?' ಎನ್ನುವುದು ಅಜ್ಜಂಪುರ ಕೃಷ್ಣಸ್ವಾಮಿಯವರದು.

ಇದಲ್ಲದೆ, ಡಾ. ಶೈಲಜಾ ರವೀಂದ್ರನಾಥ, ಡಾ.ಬಿ.ಶಿವಲಿಂಗಯ್ಯ ಮತ್ತು ನಂದಕುಮಾರ್ ಹಾಗೂ ಸುರೇಶ್ ಹೆಬ್ಳೀಕರ್‌ರವರ ಲೇಖನಗಳೂ ಇವೆ.

ಸಂಕ್ಷಿಪ್ತವಾಗಿ ಹೇಳುವುದಾದರೆ ಪರಿಸರ ಪ್ರಿಯರು, ಚಿಂತಕರು ಓದಬೇಕಾದ ಪುಸ್ತಕ 'ಪರಿಸರ ಮುಂದೇನು ?' ಪರಿಸರದ ಹಲವು ಆಯಾಮಗಳನ್ನು ವಿವರವಾಗಿ ಅಷ್ಟೇ ಗಹನವಾಗಿ ವಿವರಿಸುತ್ತದೆ ಈ ಪುಸ್ತಕ.

ದೇಶೀಯ ಸಂಸ್ಥೆಗಳು

ಅಪರೂಪವಾಗುತ್ತಿರುವ ಮದ್ದಿನ ಮಡಕೆ

- ಮಲ್ಲಿಕಾರ್ಜುನ, Green Foundation, ತಳಿ

ಬೇಸಿಗೆ ಕಾಲದಲ್ಲಿ ಅಶ್ವಥ್ಥ ಕಟ್ಟೆಯ ಮೇಲೋ, ರಸ್ತೆ ಬದಿಯ ಮರದ ಕೆಳಗೋ ಮಣ್ಣಿನ ಹರವಿಯಲ್ಲಿ ನೀರಿಟ್ಟು ಜನರ ದಾಹ ತೀರಿಸುವ 'ಅರವಟ್ಟಿಗೆ'ಗಳ ಬಗ್ಗೆ ಕೇಳಿದ್ದೇವೆ. ಆದರೆ, ದನಗಳಿಗೆ ಬರುವ ರೋಗಗಳ ನಿವಾರಣೆಗೆ, ಅರವಟ್ಟಿಗೆಗಳ ಮಾದರಿಯಲ್ಲೇ ಇಟ್ಟ ಸಮುದಾಯದ ಮದ್ದಿನ ಮಡಕೆಗಳ ಬಗ್ಗೆ ಕೇಳಿದವರು ಕಮ್ಮಿ.

ತಮಿಳುನಾಡು-ಕರ್ನಾಟಕ ಗಡಿಯ ಡೆಂಕಣಿಕೋಟ ತಾಲ್ಲೂಕಿನ ತಗ್ಗಟ್ಟಿ ಗ್ರಾಮದಲ್ಲಿ ಇಂಥ ಅಪರೂಪದ ಹಳ್ಳಿಗರೇ ನೋಡಿಕೊಳ್ಳುವ ಮದ್ದಿನ ಮಡಕೆಯ ವ್ಯವಸ್ಥೆ ಇದೆ. 'ಕಳ್ಳರೋಗದ ಮದ್ದು' ಎಂದು ಕರೆಯಲ್ಪಡುವ, ಮದ್ದಿನ ಮಡಕೆಯನ್ನು ಧರ್ಮಾರ್ತವಾಗಿ ಹಳ್ಳಿಯ ಮನೆಯೊಂದರಲ್ಲಿ ಇಟ್ಟಿರುತ್ತಾರೆ. ದನಗಳ ಮೈಯಲ್ಲಿ ಕಣ್ಣಿಗೆ ಕಾಣದಂತೆ ಇರುವ ಎಲ್ಲ ತೆರನಾದ ರೋಗಗಳಿಗೂ ಇದು ಔಷಧಿಯಾಗುವುದರಿಂದ ಇದನ್ನು 'ಕಳ್ಳರೋಗದ ಮದ್ದು' ಎಂಬ ಹೆಸರಿನಿಂದ ಕರೆಯುತ್ತಾರೆ. ದನಗಳಿಗೆ ಸಾಮಾನ್ಯವಾಗಿ ಬರುವ ಕೆಮ್ಮು, ಉಬ್ಬಸ, ಮೇವು ತಿನ್ನದಿರುವುದು, ಕೃಶವಾಗುವುದು, ದಗ ಪಂಜರಿ, ಮೂಗು ಪಂಜರಿ, ಅಜೀರ್ಣ ಮೊದಲಾದ ಕಾಯಿಲೆಗಳ ನಿವಾರಣೆಗೆ ಮದ್ದಿನ ಮಡಕೆಯ ಔಷಧಿ ಬಳಕೆಯಾಗುತ್ತದೆ.

11 ಜಾತಿಯ ಮರ ಗಿಡಗಳ ತೊಗಟೆಯನ್ನು, ಕೊಗ್ಗಿಗಿಡದ *(Indigofera aspalathoides)* ಬೇರು, ಜಾಗಡಿ ಗಿಡದ ಬೇರು, ಬೆರಿಕೆ ಗಿಡದ ಬೇರು ಮತ್ತು ನಾಲೆಗೆಡ್ಡೆ ಜೊತೆ ಸೇರಿಸಿ, ಚೆನ್ನಾಗಿ ಕುಟ್ಟಿ ಒಂದು ದೊಡ್ಡ ಮಣ್ಣಿನ ಮಡಕೆಯಲ್ಲಿ ಹಾಕಿ, ಅದರ ಪ್ರಮಾಣದ ಎರಡರಷ್ಟು ನೀರು ಬೆರೆಸಿ ನೆನೆಹಾಕುತ್ತಾರೆ. ಭಾನುವಾರದಂದು ಅಮಾವಸ್ಯೆ ಬರುವ ದಿನ ನೋಡಿಕೊಂಡು ಅವತ್ತು ಮೂಲಿಕೆಗಳನ್ನು ಸಂಗ್ರಹಿಸಿ ಮದ್ದಿನ ಮಡಕೆಗೆ ಹಾಕುತ್ತಾರೆ. ನೆನೆಹಾಕಿದ ಮರುದಿನದಿಂದಲೇ ಔಷಧಿ ಬಳಕೆಗೆ ಸಿದ್ಧವಾಗುತ್ತದೆ.

ಮೊದಲೆಲ್ಲಾ 101 ಜಾತಿಯ ಗಿಡಮೂಲಿಕೆಗಳನ್ನು, ಮದ್ದಿನ ಮಡಕೆಗೆ ಹಾಕುತ್ತಿದ್ದರು. ಆಗ ಒಂದು ವರ್ಷದವರೆಗೂ ಔಷಧಿ ತನ್ನ ಸಾಮರ್ಥ್ಯ ಉಳಿಸಿಕೊಳ್ಳುತ್ತಿತ್ತು. ಈಗ ಮೂಲಿಕೆಗಳು ಸಿಗುವುದೇ ದುರ್ಲಭವಾಗಿರುವುದರಿಂದ, 14-15 ಮೂಲಿಕೆಗಳ ಬಳಕೆಗಷ್ಟೇ ಸೀಮಿತಗೊಂಡಿದೆ. 2-3 ತಿಂಗಳವರೆಗೆ ಔಷಧಿ ತನ್ನ ಶಕ್ತಿ ಉಳಿಸಿಕೊಂಡಿರುತ್ತದೆ.

ಹಳ್ಳಿಯ ಮನೆಯೊಂದರಲ್ಲಿ ಜನರಿಗೆ ಉಪಯೋಗವಾಗುವ ಉದ್ದೇಶದಿಂದ ಇಟ್ಟ ಮದ್ದಿನ ಮಡಕೆಯ ಔಷಧಿಯನ್ನು ಉಪಯೋಗಿಸಲು ಯಾರಿಗೂ, ಯಾವ ರೀತಿಯ ನಿರ್ಬಂಧವೂ ಇಲ್ಲ. ಆದರೆ ಈ ಮದ್ದಿನ ನೀರು ಬೇಕಾದವರು, ತಾವು ತೆಗೆದುಕೊಳ್ಳುವ ಪ್ರಮಾಣದ ಔಷಧಿಯಷ್ಟು ನೀರನ್ನು (ಸಾಮಾನ್ಯವಾಗಿ ಒಂದು ಚಂಬು) ಈ ಮಡಕೆಗೆ ಹಾಕಬೇಕು. ಉಳಿದವರಿಗೂ ಕೂಡ ಔಷಧಿಯ ಲಾಭ ಸಿಗಲಿ ಎಂಬುದು ನೀರು ಹಾಕುವುದರ ಹಿಂದಿನ ಉದ್ದೇಶ. ಅಕ್ಕಪಕ್ಕದ ಊರಿನವರೂ ಸಹ ಮದ್ದಿಗಾಗಿ ಇಲ್ಲಿ ಬರುತ್ತಾರೆ. ದನಗಳ ಸಾಮಾನ್ಯ ಕಾಯಿಲೆಗಳಿಗೆ ಈ ಮದ್ದು ಸಂಜೀವಿನಿ ಎಂಬುದು ಹಳ್ಳಿಗರ ಅನುಭವದ ಮಾತು.

ಮೊದಲೆಲ್ಲಾ ಎರಡು-ಮೂರು ಮನೆಯವರು ಇಂಥ ಮದ್ದಿನ ಮಡಕೆ ಇಡುತ್ತಿದ್ದರು. ಸುತ್ತಮುತ್ತಲಿನ ಗ್ರಾಮಗಳಲ್ಲಿ ಸಾಮಾನ್ಯವಾಗಿದ್ದ ಮದ್ದಿನ ಮಡಿಕೆ, ಇವತ್ತು ತಗ್ಗಟ್ಟಿ ಗ್ರಾಮದ ಆನಂದಪ್ಪನವರ ಮನೆಗಷ್ಟೇ ಸೀಮಿತವಾಗಿದೆ.

ಇಡೀ ಸಮುದಾಯವೇ ಸೇರಿ ನೀರು, ನೆಲ ಮತ್ತು ಕಾಡು ನಿರ್ವಹಿಸುತ್ತಾರೆಂದು ಕೇಳಿ ತಿಳಿದಿದ್ದೆವು. ಆದರೆ, ಆರೋಗ್ಯದ ವಿಷಯದಲ್ಲೂ ಇದನ್ನು ಯಶಸ್ವಿಯಾಗಿ ನಿರ್ವಹಿಸಬಹುದು ಎಂಬುದನ್ನು ತಗ್ಗಟ್ಟಿ ಗ್ರಾಮದ 'ಮದ್ದಿನ ಮಡಕೆ' ತೋರಿಸಿದೆ. ಇಂಥದೊಂದು ಕೆಲಸ ಮತ್ತು ಅದರ ಕಲ್ಪನೆಯೇ ಎಂಥ ಅದ್ಭುತವಲ್ಲವೇ?

ಮಾಹಿತಿ: ಆನಂದಪ್ಪ ಮತ್ತು ತಗ್ಗಟ್ಟಿ ರೈತರು

ಮದ್ದಿನ ಮಡಕೆಯಲ್ಲಿ ಬಳಕೆಯಾಗುವ 11 ಜಾತಿಯ ಔಷಧಿ ಸಸ್ಯಗಳು

ಹೊನ್ನೆ (Pterocerpus marsupium), ನೇರಳೆ (Syzigium operculatum)

ಬಿಳಿಸೂಲಿ (Breynia rhamnoides), ಸಂಪಿಗೆ (Michalia champaka)

ಪುವ್ವರಸಿ (Thespesia populnea), ಬೇವು (Azadirachta indica)

ಸೊಂಡ್ಲಿ (Zingiber oenoplia), ಯಗಚಿ, ಮದ್ದಿ, ಸೀಪುಲಿ

ದೊಡ್ಡಮರ (Ailanthus excelsa)

ಬಯಲು ಸೀಮೆಯ ಮೂರು ವಿಶಿಷ್ಟ ಕೃಷಿ ಆಚರಣೆಗಳು

ಸಂಗ್ರಹ : ಕೃಷ್ಣಪ್ರಸಾದ್ ಜಿ. ; ಚಿತ್ರಗಳು : ನರಸಿಂಹಯ್ಯ, ಮಾರುಪಲ್ಲಿ, ಗ್ರೀನ್ ಫೌಂಡೇಶನ್, ತಳ್ಳಿ

ಕೃಷಿ ಆಚರಣೆಗಳು ರೈತರ ಬದುಕಿನೊಟ್ಟಿಗೆ ಮಿಳಿತವಾಗಿದೆ. ಪ್ರಕೃತಿ ಮತ್ತು ಮಣ್ಣಿನ ಮಕ್ಕಳ ಸಂಬಂಧದ ಪ್ರತೀಕವಾದ ಈ ಆಚರಣೆಗಳು ದಿನದಿಂದ ದಿನಕ್ಕೆ ಕಮ್ಮಿಯಾಗುತ್ತಾ ಸಾಗಿವೆ. ಈ ಆಚರಣೆಗಳ ಹಿಂದಣ ವೈಜ್ಞಾನಿಕ ನಿಲುವು, ನಮ್ಮ ಅರಿವಿಗೆ ಬರುವ ಮುನ್ನವೇ ನಮ್ಮ ಕೈ ಬಿಟ್ಟು ಸಾಗುತ್ತಿವೆ. ಬಯಲು ಸೀಮೆಯ ಪ್ರದೇಶಗಳಲ್ಲಿ ಬಳಕೆಯಲ್ಲಿರುವ ಜ ರೋಗ ಮತ್ತು ಕೀಟ ನಿಯಂತ್ರಣ ಆಚರಣೆಗಳ ಮೇಲೆ ಬೆಳಕು ಚೆಲ್ಲುವ ಪ್ರಯತ್ನ ಇಲ್ಲಿದೆ.

1. ಕರಿಭಂಟ

ಆಗಸ್ಟ್ ತಿಂಗಳ ಕೊನೆಯ ಹೊತ್ತಿಗೆ, ಪೈರುಗಳು ಹಸಿರಾಗಿ ಬೆಳವಣಿಗೆ ಹಂತದಲ್ಲಿರುತ್ತದೆ. ಈ ಕಾಲದಲ್ಲೇ ಕೀಟ ಮತ್ತು ರೋಗಭಾದೆ ಜಾಸ್ತಿ. ದಕ್ಷಿಣ ಕರ್ನಾಟಕದ ಬಯಲು ಸೀಮೆಯ ಆಹಾರ ಬೆಳೆಯಾದ 'ರಾಗಿ' ಗೆ ಬೆಳವಣಿಗೆ ಹಂತದಿಂದ ಕೀಟ ಮತ್ತು ರೋಗಭಾಧೆ ಆರಂಭವಾಗುತ್ತದೆ. ರೋಗ ನಿಯಂತ್ರಣ ಆಚರಣೆಗಳು ಶುರುವಾಗುವುದು ಇಲ್ಲಿಂದ.

'ಹುಬ್ಬೇ ಮಳೆ ರೋಗದ ಮಳೆ' ಎಂಬುದು ರೈತರ ನಂಬಿಕೆಯಾಗಿರುವುದರಿಂದ, ಬೆಂಗಳೂರು, ಮಂಡ್ಯ ಜಿಲ್ಲೆಗಳಲ್ಲಿ ಇದರ ನಿವಾರಣೆಗಾಗಿ 'ಕರಿಭಂಟ' ಹಬ್ಬದ ಆಚರಣೆ ಇದೆ. ಹಳ್ಳಿಗರ ಜನಪದ ಕತೆಗಳಲ್ಲಿ ಧೀರನಾಗಿ ಚಿತ್ರಿತವಾಗಿರುವ ಕರಿಭಂಟರಾಯ, ಹೊಲಗಳನ್ನು ಕೀಟ ಮತ್ತು ರೋಗಭಾಧೆಗಳಿಂದ ಕಾಪಾಡಿ, ಒಕ್ಕಲಿಗರನ್ನು ರಕ್ಷಿಸುತ್ತಾನೆ ಎಂಬುದು ಹಳ್ಳಿಗರ ನಂಬಿಕೆ. ಹುಬ್ಬೇ ಮಳೆ ಹುಟ್ಟಿದ ಕೂಡಲೇ ಅಥವಾ ಆ ಮಳೆ ಮುಗಿಯುವ ಮುನ್ನ 'ಕರಿಭಂಟ'ನ ಆಚರಣೆಯನ್ನು ಇಡೀ ಊರವರು ಸೇರಿ ಮಾಡುತ್ತಾರೆ.

ಪಚ್ಚಾಡಿ (*Dalbergia paniculata*) ಮರದ ಕೊಂಬೆಗಳಿಂದ, ಹೊಲದ ಮಧ್ಯೆದಲ್ಲಿ ಚಪ್ಪರ ಹಾಕುತ್ತಾರೆ. ಚಪ್ಪರದ ಕೆಳಗೆ ಅಗಸನ ಲುಟ್ಟೀಬೂದಿ, ಕಮ್ಮಾರನ ಕುಲುಮೆ ಬೂದಿ ಮತ್ತು ಕುಂಬಾರನ ಮನೆಯ ಅಡಿಗೆ ಬೂದಿಗಳನ್ನು ಸಂಗ್ರಹಿಸಿ, ಮಿಶ್ರಿಸಿದ ಬೂದಿಯಿಂದ ರಾಕ್ಷಸಿಯ ಚಿತ್ರ ಬರೆಯುತ್ತಾರೆ. ರಾಕ್ಷಸಿಯ ಹೊಟ್ಟೆಯ ಮೇಲೆ ಗಡಾರಿಯಿಂದ ರಂಧ್ರಮಾಡಿ, ಪಚ್ಚಾಡಿ ಕೊಂಬೆ (ಕಡ್ಡಿ) ನೆಡುತ್ತಾರೆ. ಮೂಡಣ ದಿಕ್ಕಿಗೆ ಮುಖಮಾಡಿ ನಿಂತ ಚಪ್ಪರದ ಪಚ್ಚಾಡಿ ಕಡ್ಡಿಯ ನಾಲ್ಕು ಕಾಲುಗಳಿಗೂ ನವಧಾನ್ಯಗಳನ್ನು, ಅರಿಷಿಣ ಬಟ್ಟೆಗಂಟೊಂದರಲ್ಲಿ ಸೇರಿಸಿ ಕಟ್ಟುತ್ತಾರೆ. ರಾಗಿ ಪೈರಿನ ಎಳೆಯ ಹುಲ್ಲು (ಎಲೆ) ಕೊಯ್ದು ತಂದು, ಚಿಕ್ಕದಾಗಿ ಕತ್ತರಿಸಿ ರಾಶಿ ಹಾಕುತ್ತಾರೆ. ತಂಗಳು ಮುದ್ದೆ ಅಥವಾ ಅನ್ನವನ್ನು ಕತ್ತರಿಸಿದ ಹುಲ್ಲಿಗೆ ಬೆರೆಸುತ್ತಾರೆ. ಕುರಿ ಅಥವಾ ಕೋಳಿ ಕೊಯ್ದು ರಕ್ತವನ್ನು ಹುಲ್ಲಿಗೆ ಬೆರೆಸುತ್ತಾರೆ. ಚಪ್ಪರದ ನಡುವೆ ಇಟ್ಟ ಕಾಡುಕಲ್ಲಿಗೆ ಪೂಜೆ ಮಾಡಲಾಗುತ್ತದೆ. ಪೂಜೆಯ ನಂತರ, 3 ಜನ ಊರ ಹೊಲಗಳ ಕಡೆ ನಡೆಯುತ್ತಾರೆ. ಒಬ್ಬರು ಪಚ್ಚಾಡಿ ಕೊಂಬೆಗಳನ್ನು, ಒಬ್ಬರು ರಕ್ತಮಿಶ್ರಿತ ಹುಲ್ಲು ಮತ್ತು ಮಗದೊಬ್ಬರು ಬೂದಿ ಎತ್ತಿಕೊಂಡು ಹೋಗುತ್ತಾರೆ. ರಕ್ತಮಿಶ್ರಿತ ಹುಲ್ಲು ಹಿಡಿದವನು "ಬಲಿಯೋ ಬಲಿ" ಎಂದು ಕೂಗುತ್ತಾ, ರಕ್ತ ಮಿಶ್ರಿತ ಹುಲ್ಲನ್ನು ಹೊಲಗಳಿಗೆ ಎರಚುತ್ತಾನೆ. ಪಚ್ಚಾಡಿ ಕೊಂಬೆಗಳನ್ನು ಹೊಲದ ಮಧ್ಯೆ ನೆಡಲಾಗುತ್ತದೆ. ಮೂರುದಾರಿ ಸೇರುವಲ್ಲಿ, ಬೂದಿಯಿಂದ ರಾಕ್ಷಸಿ ಚಿತ್ರ ಬರೆಯುತ್ತಾರೆ. ಓಡಾಡುವ ಜನ, ರಾಕ್ಷಸಿಯನ್ನು ತುಳಿದು ನಾಶಮಾಡಲಿ ಎಂಬುದೇ ಚಿತ್ರಬರೆವ ಉದ್ದೇಶ. ಇಲ್ಲಿ ರೋಗದ ಪ್ರತಿನಿಧಿಯೆ ರಾಕ್ಷಸಿ. ರಾಗಿಗೆ ಸಾಮಾನ್ಯವಾಗಿ ಕಾಡುವ ಇಣುಕುರೋಗ (Neck blast) ಎಲೆಗಳು ಕೆಂಪಾಗುವುದು ತಡೆಯಲು ಮತ್ತು ಪೈರುಗಳು ಧೃಡವಾಗಿ ಬೆಳೆಯಲು ಕರಿಭಂಟನ ಆಚರಣೆ ಮಾಡುತ್ತೇವೆ ಎಂಬುದು ರೈತರ ಮಾತು.


2. ಬೆರ್ಚಪ್ಪನ ಪೂಜೆ

ಕರಿಭಂಟನ ಆಚರಣೆಯನ್ನೇ ಹೋಲುವ 'ಬೆರ್ಚಪ್ಪನ ಪೂಜೆ' ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳ ಕೆಲಭಾಗಗಳಲ್ಲಿ ಪ್ರಚಲಿತವಿರುವ ಆಚರಣೆ. ಬೆರ್ಚಪ್ಪನ ಪೂಜೆ ಮಾಡುವ ಮುಖ್ಯ ಉದ್ದೇಶ ಹೊಲಕ್ಕೆ ಶಾಂತಿ ಮಾಡಲು ಮತ್ತು ದೃಷ್ಟಿದೋಷದಿಂದ ಪಾರು ಮಾಡುವುದು. ಕರಿಭಂಟ ಆಚರಣೆಯಂತೆ ನೇರ ರೋಗ ಮತ್ತು ಕೀಟ ನಿವಾರಣೆಗೆ ಸಂಬಂಧಪಟ್ಟ ಆಚರಣೆ ಇದಲ್ಲ, ಜನರ ಕೆಟ್ಟ ದೃಷ್ಟಿ ಮತ್ತು ಪ್ರಕೃತಿಯ ದುಷ್ಟಶಕ್ತಿಗಳಿಂದ ಹೊಲಕ್ಕೆ ಹಾನಿಯಾಗದಂತೆ ಶಾಂತಿ ಮಾಡುವ ಪದ್ಧತಿ ಇದು.

ಈ ಆಚರಣೆಯಲ್ಲಿ ಕೂಡ ಪಚ್ಚಾಡಿ ಮರದ (ಸ್ಥಳೀಯರು ಬೆರ್ಚಪ್ಪಿನ ಕಡ್ಡಿಯೆಂದು ಕರೆಯುತ್ತಾರೆ) ಕೊಂಬೆ, ಸೊಪ್ಪಿನಿಂದ ಚಪ್ಪರ ಕಟ್ಟಿ, ಚಪ್ಪರದ ಮಧ್ಯಭಾಗದಲ್ಲಿ ಕಾಡುಕಲ್ಲುಗಳಿಗೆ ಪೂಜೆ ನಡೆಸುತ್ತಾರೆ. ತಂಗಳು ಅನ್ನದ ಜೊತೆ ಮೊಸರು ಕಲಸಿ, ಹೊಲಕ್ಕೆ ಎರಚುತ್ತಾರೆ. ಪ್ರಾಣಿಬಲಿ ಇಲ್ಲಿ ಕಡ್ಡಾಯವಲ್ಲ. ಕರಿಭಂಟನ ಆಚರಣೆ ಇಡೀ ಊರಿನ ಆಚರಣೆಯಾದರೆ, ಬೆರ್ಚಪ್ಪನ ಪೂಜೆ ವೈಯಕ್ತಿಕವಾಗಿ ತಮ್ಮ ತಮ್ಮ ಹೊಲಗಳಲ್ಲಿ ಮಾಡುವ ಪೂಜೆ.

3. ಹಸಿರು ಬಲಿ


ತಮಿಳುನಾಡಿನ ಡೆಂಕಣಿಕೋಟ ತಾಲ್ಲೂಕಿನಲ್ಲಿ (ಕನಕಪುರದ ನೆರೆಯ ತಾಲ್ಲೂಕು) 'ಹಸಿರು ಬಲಿ' ಅಥವಾ 'ಅತ್ತೇಮಳೆ ನಂಗಲು' ಎಂಬ ಆಚರಣೆ ಇದೆ. ಅತ್ತೆ ಮಳೆ ಆರಂಭವಾದಂತೆ, ಊರ ಪ್ರಮುಖರು ಸೇರಿ ದಿನವೊಂದನ್ನು ಗೊತ್ತು ಮಾಡುತ್ತಾರೆ. ಅವತ್ತು ಊರ ತೋಟಿ ಜ ಬಗೆಯ ಬೂದಿ, ಚಿಕ್ಕದಾಗಿ ಕತ್ತರಿಸಿದ ರಾಗಿ ಪೈರಿನ ಹುಲ್ಲು ತಂದು ಊರ ಮಧ್ಯ ಭಾಗದಲ್ಲಿ ರಾಶಿ ಹಾಕುತ್ತಾನೆ. ಜನರೆಲ್ಲಾ ಸೇರಿ ಊರಿನ ದಾರಿಗಳಲ್ಲಿ ಬೂದಿಯಿಂದ ಚಿತ್ರಬರೆಯುತ್ತಾರೆ. ಸೂರ್ಯ, ಚಂದ್ರ, ನಕ್ಷತ್ರ, ದೇವತೆ, ಪ್ರಾಣಿಪಕ್ಷಿ, ಮನುಷ್ಯರು, ಕೃಷಿ ಉಪಕರಣಗಳನ್ನು ನೆಲದ ಮೇಲೆ ಬಿಡಿಸಿ ಶೃಂಗರಿಸುತ್ತಾರೆ. ಪೂಜೆ ನಡೆಸಿ, ಕುರಿ ಅಥವಾ ಹಂದಿ ಬಲಿಕೊಟ್ಟು, ಅದರ ರಕ್ತವನ್ನು ಬೂದಿಮಿಶ್ರಿತ ರಾಗಿ ಹುಲ್ಲಿಗೆ ಮಿಶ್ರಿಸುತ್ತಾರೆ. 'ಬಲಿಯೋ ಬಲಿ' ಎಂದು ಅರಚುತ್ತಾ



ಹೊಲಗಳಿಗೆ ಬಲಿ ಎರಚುತ್ತಾರೆ. ಬೂದಿ ತೆಗೆದುಕೊಂಡು ತಮ್ಮ ಹೊಲಗಳ ದಾರಿಗಳಲ್ಲೂ ಚಿತ್ರ ಬಿಡಿಸುತ್ತಾರೆ. ಪಚ್ಚಾಡಿಕೊಂಬೆ ಕಡಿದು ತಮ್ಮ ಬೆಳೆಯ ಮಧ್ಯೆ ನೆಡುತ್ತಾರೆ.

ಮೂರು ಆಚರಣೆಗಳಲ್ಲೂ, ಸಾಮಾನ್ಯವಾಗಿ ಕಂಡುಬರುವ ಸಾಮಾನ್ಯ ಅಂಶವೆಂದರೆ ಪಚ್ಚಾಡಿ ಗಿಡದ ಬಳಕೆ. ಬೂದು ಬಣ್ಣದ ಎಲೆಗಳ, ಚಪ್ಪಟೆ ಕಾಯಿಯ, ಬಯಲು ಸೀಮೆಯಲ್ಲೆಲ್ಲಾ ಕಂಡುಬರುವ ಪಚ್ಚಾಡಿ ಮರ ಸಾಮಾನ್ಯ ಎತ್ತರಕ್ಕೆ ಬೆಳೆಯುತ್ತದೆ. ಹಸಿರುಗಣ್ಣೀ, ಬೆರ್ಚನ ಕಡ್ಡಿ ಎಂಬೆಲ್ಲಾ ಹೆಸರುಗಳಿವೆ. ಈ ಮರದ ವಿಶೇಷತೆಯೆಂದರೆ, ಇದರ ಕೊಂಬೆ ಕಡಿದು ಹೊಲದಲ್ಲಿ ನೆಟ್ಟರೆ, ಸಂಜೆ ವೇಳೆಗೆ ಎಲೆಗಳು ಕಪ್ಪು ಬಣ್ಣಕ್ಕೆ ತಿರುಗಿ ಇಡೀ ಕೊಂಬೆಯೆ ಕರಿಯ ಬೊಡ್ಡೆತರ ಕಾಣುತ್ತದೆ. ಕೀಟ ಮತ್ತು ರೋಗ ನಿಯಂತ್ರಣದಲ್ಲಿ ಇದರ ಪಾಲು ಎಷ್ಟು ಎಂಬುದನ್ನು ಅಧ್ಯಯನಗಳು ತಿಳಿಸಬೇಕಿದೆ.

ಬೂದಿ ಮತ್ತು ರಕ್ತದಲ್ಲಿ ಆಮ್ಲದ ಪ್ರಮಾಣವಿರುವುದರಿಂದ, ಇದು ಕೀಟಗಳನ್ನು ನಿಯಂತ್ರಿಸುತ್ತದೆ ಎಂದು ತರ್ಕಿಸಬಹುದಾದರೂ, ಹಳ್ಳಿಗರು ಕಾಲಾನುಕ್ರಮದಿಂದ ನಡೆಸಿಕೊಂಡುಬಂದ ಈ ಪದ್ಧತಿಯ ಬಗ್ಗೆ ಬಹಳಷ್ಟು ಅಧ್ಯಯನ ನಡೆಸಬೇಕು. ಇದಕ್ಕಿಂತ ಮುಖ್ಯವಾಗಿ ಈ ಎಲ್ಲ ಆಚರಣೆಗಳು ಪ್ರಸ್ತುತದಲ್ಲಿ ಅರ್ಥ ಕಳೆದುಕೊಳ್ಳುತ್ತಿವೆ. ಇಡೀ ಊರಿನ ಹಬ್ಬವಾಗಿದ್ದ ಈ ಆಚರಣೆಗಳು ಇವತ್ತು ಕಾಣೆಯಾಗುತ್ತಿವೆ. ಇಂಥ ಅಪರೂಪದ ಆಚರಣೆಗಳ ಸಂರಕ್ಷಣೆ ದಾಖಲಾತಿ ಮತ್ತು ಅಧ್ಯಯನ ಇವತ್ತಿನ ತುರ್ತು ಕೆಲಸವಾಗಬೇಕಿದೆ.



ಮಕ್ಕಳು ಹೊತ್ತುತಂದ ಮಾಯಾಲೋಕ

ಜನಪದ ಸಂಸ್ಕೃತಿ ಹಳ್ಳಿಗಳ ಜೀವಾಳ. ತಲೆ ತಲಾಂತರದಿಂದ ಬಾಯಿಂದ ಬಾಯಿಗೆ ಹರಿದುಬಂದ ಜನಪದ ಸೊಗಡು. ಹಳ್ಳಿಗರ ಸಂಸ್ಕೃತಿಯನ್ನು ಜೀವಂತವಾಗಿಟ್ಟಿದೆ. ಇಡೀ ವಿಶ್ವ, ಜಾಗತೀಕರಣದ ಹೊಸಗಾಳಿಗೆ ಮೈಯೊಡ್ಡುತ್ತಿರುವ ಇಂದಿನ ದಿನಗಳಲ್ಲಿ ಹಳ್ಳಿ ಮತ್ತು ಅದರ ಸಂಸ್ಕೃತಿ ಗತಕಾಲಕ್ಕೆ ಜಾರುತ್ತಿದೆ. ಸಿನಿಮಾ, ಟಿ.ವಿ.ಗಳ ಬಣ್ಣದ ಲೋಕ ಜನಪದ ಕಲೆ, ಹಾಡು, ಕತೆ, ಆಟಗಳನ್ನು ಬದಿಗೊತ್ತಿ ಹಳ್ಳಿಯ ಸಂಸ್ಕೃತಿಯನ್ನು ಮೂಲೆ ಗುಂಪು ಮಾಡುತ್ತಿದೆ.

ಪರಂಪರಾಗತ ಜ್ಞಾನ ಮತ್ತು ಜೀವ ವೈವಿಧ್ಯವನ್ನು ಸಂರಕ್ಷಿಸಿ, ಉಳಿಸಿ ಬೆಳೆಸಲು ಶ್ರಮಿಸುತ್ತಿರುವ ಬೆಂಗಳೂರು ಮೂಲದ (ಗ್ರೀನ್ ಪ್ರತಿಷ್ಠಾನ) ಬುಡಮಟ್ಟದ ಜನರ ಜ್ಞಾನವನ್ನು ಜೀವಂತವಿಡಲು ಹಲವು ಬಗೆಯ ಕಾರ್ಯಕ್ರಮಗಳನ್ನು ರೂಪಿಸಿದೆ. ಶಾಲಾಮಕ್ಕಳಲ್ಲಿ ಜನಪದ ಸಂಸ್ಕೃತಿ ಮತ್ತು ಜೀವವೈವಿಧ್ಯತೆಯ ಬಗೆಗೆ ಕುತೂಹಲ, ಅರಿವು ಮತ್ತು ಜಾಗೃತಿ ಮೂಡಿಸಲು ಶಾಲಾಸ್ಪರ್ಧೆಗಳನ್ನು ಏರ್ಪಡಿಸುವುದು, ಇವುಗಳಲ್ಲೊಂದು. ಈ ನಿಟ್ಟಿನಲ್ಲಿ ಕನಕಪುರ ತಾಲ್ಲೂಕು ಕೊಳಗೊಂಡನಹಳ್ಳಿಯ ಪೌಢಶಾಲೆಯಲ್ಲಿ 'ಜನಪದ ಸಂಸ್ಕೃತಿ ಸಂರಕ್ಷಣಾ ಸ್ಪರ್ಧೆ' ಏರ್ಪಡಿಸಲಾಗಿತ್ತು. 56 ಶಾಲ ಮಕ್ಕಳು ಉತ್ಸಾಹದಿಂದ ಪಾಲ್ಗೊಂಡು, ಹತ್ತೆಂಟು ಬಗೆಯ ಜನಪದ ಪ್ರಕಾರಗಳ ಮಾಹಿತಿ ಸುಳಿವು ನೀಡಿದರು. ಹಿರಿಯರನ್ನು ಕಾಡಿಬೇಡಿ, ಬರೆದುತಂದ ಮಕ್ಕಳ ಜನಪದ ಭಂಡಾರದಿಂದ ಆಯ್ದ ಕೆಲವು ಆಸಕ್ತಿದಾಯಕ ಕತೆಗಳು ಇಲ್ಲಿದೆ.

ಭೂಮಿಗೆ ರಾಗಿ ಬಂದ ಕತೆ

ಒಂದು ಚಿಕ್ಕ ಹಳ್ಳಿ. ಅದರಲ್ಲಿ ಹತ್ತಾರು ಮನೆಗಳಿದ್ದವು. ಆ ಹಳ್ಳಿಯಲ್ಲಿ ಒಬ್ಬ ಬ್ರಾಹ್ಮಣ ವಾಸವಾಗಿದ್ದನು. ಅವನು ಜನರನ್ನು ಹೆದರಿಸಿ, ಹಣ ಪಡೆದು ಜೀವನ ಸಾಗಿಸುತ್ತಿದ್ದ. ಹೀಗಿರುವಾಗ, ಆ ಬ್ರಾಹ್ಮಣನಿಗೆ ಸಾವು ಸನ್ನಿಹಿತವಾಯಿತು. ಅವನು ತನ್ನ ಮಗನನ್ನು ಹತ್ತಿರ ಕರೆದು "ನಾನು ಸತ್ತ ಮೇಲೆ, ನನ್ನ ತಲೆಗೆ ಕಬ್ಬಿಣದ ಮೊಳೆಗಳನ್ನು ಹೊಡೆದು, ಬಂದ ನೆಂಟರ ಮುಂದೆ 'ನನ್ನ ಅಪ್ಪನನ್ನು ಊರವರು ಸೇರಿ ಕೊಂದು, ಮೊಳೆಹೊಡೆದರು' ಎಂದು ಹೇಳು. ಆಗ ಅವರು ಹಣ ಸಂಗ್ರಹಿಸಿ, ಉತ್ತರ ಕ್ರಿಯೆ ಮುಗಿಸುತ್ತಾರೆ" ಎಂದು ಹೇಳಿ ಸತ್ತು ಹೋದನು. ಬ್ರಾಹ್ಮಣನ ಮಗ ತಂದೆ ಹೇಳಿಕೊಟ್ಟಂತೆ, ತಲೆಗೆ ಮೊಳೆ ಹೊಡೆದು, ಬಂದ ನೆಂಟರಿಗೆ ಊರವರ ಮೇಲೆ ದೂರು ಹೇಳಿದನು. ನೆಂಟರೆಲ್ಲಾ ಸೇರಿ ಆ ರಾಜ್ಯದ ರಾಜನಿಗೆ ದೂರು ಕೊಟ್ಟರು. ರಾಜಭಟರು ಬಂದು ಹಳ್ಳಿಯ ರೈತರನ್ನೆಲ್ಲಾ ಸೆರೆ ಹಿಡಿದು, ಸೆರೆಮನೆಗೆ ಹಾಕಿದರು. ರೈತರ ಹೆಂಡತಿ ಮಕ್ಕಳು ಅತ್ತು ಗೋಳಾಡಿದರೂ ರಾಜನ ಮನಸ್ಸು ಕರಗಲಿಲ್ಲ.

ಮೂರು ವರ್ಷಗಳು ಕಳೆದವು. ರೈತರ ಮನೆಯ ದವಸಧಾನ್ಯವೆಲ್ಲಾ ಮುಗಿದು, ಹೆಂಡತಿ ಮಕ್ಕಳು ಉಪವಾಸ ಬಿದ್ದರು. ರೈತರ ಮನೆಗಳ ಬಳಿ ವಾಸವಾಗಿದ್ದ, ಕಾಳು ಕಡ್ಡಿ ತಿನ್ನುತ್ತಿದ್ದ ಗುಬ್ಬಚ್ಚಿಗಳು, ರಾಜನ ಬಳಿ ಹೋಗಿ "ನಮ್ಮನ್ನು ಸೆರೆಮನೆಗೆ ಹಾಕಿ, ರೈತರನ್ನು ಬಿಟ್ಟುಬಿಡಿ" ಎಂದು ಕೇಳಿಕೊಂಡವು. ರಾಜನು ಗುಬ್ಬಚ್ಚಿಗಳ ಕಾಲಿಗೆ ಬೇಡಿ ಹಾಕಿಸಿ, ಸೆರಮನೆಗೆ ಹಾಕಿ, ರೈತರನ್ನು ಬಂಧನದಿಂದ ಮುಕ್ತಗೊಳಿಸಿದನು. ಸೆರೆಮನೆ ಸೇರಿದ ಗುಬ್ಬಚ್ಚಿಗಳು, ಕುಪ್ಪಳಿಸುತ್ತಾ, ಕುಪ್ಪಳಿಸುತ್ತಾ ಸೆರಮನೆಯ ಕಂಬಿಗಳ ನಡುವೆ ನುಸುಳಿ ತಪ್ಪಿಸಿಕೊಂಡು ಕಾಡು ಸೇರಿದವು. ಈಗಲೂ ಸಹ ಗುಬ್ಬಚ್ಚಿಗಳು ಕುಪ್ಪಳಿಸುವುದನ್ನು ಕಾಣಬಹುದು.

ಇತ್ತ ಬಿಡುಗಡೆಯಾದ ರೈತರು ಮನೆಗೆ ಬಂದು ನೋಡಿದರೆ, ಬಿತ್ತನೆಗೂ ಸಹ ಒಂದು ಕಾಳಿಲ್ಲ. ರೈತರೆಲ್ಲಾ ಸೇರಿ ದೇವರನ್ನು ಪ್ರಾರ್ಥಿಸಿದರು. ದೇವರು ಪ್ರತ್ಯಕ್ಷವಾಗಿ "ಇರುವೆಗಳ ಗುಳಿಯಲ್ಲಿ ರಾಗಿ ಇದೆ. ಅದನ್ನು ಬೇಡಿ, ರಾಗಿ ಪಡೆದು, ಬಿತ್ತಿ ಒಕ್ಕಲಿಗರಾಗಿ ಬಾಳಿ" ಎಂದು ಹೇಳಿ ಮಾಯವಾದನು. ರೈತರು, ದೇವರು ಹೇಳಿದಂತೆ ಇರುವೆ ಗುಳಿಯ ಬಳಿಯ ಹೋಗಿ ಬೇಡಿಕೊಂಡಾಗ, ಇರುವೆಗಳು ರೈತರಿಗೆ ರಾಗಿ ಕೊಟ್ಟವು. ಅವತ್ತಿನಿಂದ ರೈತರು ರಾಗಿಯನ್ನು ಬೆಳೆಯಲು ಶುರು ಮಾಡಿದರು.

ಸಂಗ್ರಹ: ಎ.ಎಮ್. ಶಿವರಂಜನ್
೮ನೇ ತರಗತಿ, ಆಲಗಡುಕಲು

ಮೇಕೆ ಮತ್ತು ಆನೆ ಕತೆ

ಒಂದಾನೊಂದು ಕಾಲದಲ್ಲಿ, ಆನೆಗೂ ಮೇಕೆಗೂ ಬಹಳ ಜಗಳವಾಯಿತು. ಆನೆಯು ಮೇಕೆಯನ್ನು ಬಹಳ ತಾತ್ಸಾರ ಮಾಡಿತು. ಮೇಕೆ ಆನೆಯನ್ನು ಪಂಥಕ್ಕೆ ಆಹ್ವಾನಿಸಿತು. ಪಂಥ ಏನೆಂದರೆ "ಯಾರು ಬೆಟ್ಟದ ಸುತ್ತಲೂ

ಹಿಕ್ಕೆ ಹಾಕುತ್ತಾರೆ ಎಂಬುದು" ನಾನು ಇಷ್ಟುದಪ್ಪ ಇದ್ದೇನೆ, ನಾನೇ ಗೆಲ್ಲುತ್ತೇನೆ ಎಂದು ಯೋಚಿಸಿದ ಆನೆ ಇದಕ್ಕೆ ಒಪ್ಪಿಕೊಂಡಿತು. ಮೇಕೆ ಬೆಟ್ಟದ ಸುತ್ತಲೂ ಒಂದೊಂದೇ ಪಿಚಿಕೆ ಹಾಕುತ್ತಾ ಬಂದಿತು. ಆನೆ ಹೀಗೆ ಮಾಡಲಾಗದೆ, ಒಂದೇ ಕಡೆ ದಪ್ಪಗೆ ಲದ್ದಿ ಹಾಕಿತು. ಅವತ್ತಿನಿಂದ ಆನೆ, ಮೇಕೆಯ ಸುದ್ದಿಗೆ ಹೋಗಲಿಲ್ಲ. ಇವತ್ತಿಗೂ ಕಾಡಲ್ಲಿ ಆನೆ, ಮೇಕೆ ಇರುವ ಕಡೆ ಹೋಗುವುದಿಲ್ಲ.


ಸಂಗ್ರಹ : ಜಿ.ಎಂ. ಪುಟ್ಟಮಾದು
10ನೇ ತರಗತಿ, ಗಟ್ಟಿಗುಂದ

ಕೋಳಿ ಮತ್ತು ಹದ್ದಿನ ಕತೆ

ಹದ್ದು ಮತ್ತು ಕೋಳಿ ಸ್ನೇಹಿತರಾಗಿದ್ದರು. ಒಂದು ದಿನ ಹದ್ದು, ಕೋಳಿಯ ಕೈಗೆ ಸೂಜಿಕೊಟ್ಟು "ನಾನು ಕೇಳಿದಾಗ ಕೊಡು" ಎಂದಿತು. ಕೋಳಿ ಇದಕ್ಕೆ ಒಪ್ಪಿತು. ಹದ್ದು ಆಹಾರಕ್ಕಾಗಿ ಹೊರಟುಹೋಯಿತು. ಸಾಯಂಕಾಲ ವಾಪಸ್ ಬಂದ ಹದ್ದು, ಕೋಳಿಗೆ "ನನ್ನ ಸೂಜಿ ಕೊಡು" ಎಂದು ಕೇಳಿತು. ಕೋಳಿ ಸೂಜಿಯನ್ನು ಕಳೆದು ಬಿಟ್ಟಿತ್ತು. "ಸೂಜಿ ಎಲ್ಲೋ ಬಿದ್ದುಹೋಯಿತು. ನನ್ನ ಬಳಿ ಇಲ್ಲ" ಎಂದಿತು. ಹದ್ದಿಗೆ ಕೋಪ ಬಂದು "ಸೂಜಿಯನ್ನು ನೀನು ಹುಡುಕಿಕೊಡುವ ತನಕ, ನಾನು ನಿನ್ನ ಮರಿಗಳನ್ನು ಎತ್ತಿಕೊಂಡು ಹೋಗಿ ತಿನ್ನುವೆ" ಎಂದು ಗುಡುಗಿತು. ಭಯ ಬಿದ್ದ ಕೋಳಿ ತಾನು ಓಡಾಡಿದ ಜಾಗದಲ್ಲೆಲ್ಲಾ ಕೆದಕಿ, ಕೆದಕಿ ಸೂಜಿಯನ್ನು ಹುಡುಕತೊಡಗಿತು.

ಇವತ್ತಿಗೂ ಕೋಳಿ ಮಣ್ಣು, ಕಸ ಕೆದಕಿ ಸೂಜಿ ಹುಡುಕುತ್ತಲೇ ಇದೆ. ಹದ್ದು ಅದರ ಮರಿಗಳ ಮೇಲೆ ಎರಗಿ, ಅವುಗಳನ್ನು ಎತ್ತಿಕೊಂಡು ಹೋಗಿ ತಿನ್ನುತ್ತಲೇ ಇದೆ.

ಸಂಗ್ರಹ: ಎಂ. ಅರವಿಂದ
10ನೆ ತರಗತಿ, ಕೊಳಗೊಂಡನಹಳ್ಳಿ




ದ್ರವರೂಪದ ಗೊಬ್ಬರ - ಉತ್ತಮ ಇಳುವರಿಗೆ ಆಧಾರ

ಡಿ.ಪಿ. ಸವ್ಯಸಾಚಿ, ಬಿ.ಎಸ್ಸಿ. (ಅಗ್ರಿ), *ಕೃಷಿಕ - ಹೊಸಹಳ್ಳಿ, ಶಿವಮೊಗ್ಗ*

ದ್ರವರೂಪದ ಸಾವಯವ ಸಂಯುಕ್ತಗಳನ್ನು ಸಸ್ಯಗಳು ಘನರೂಪಕ್ಕಿಂತ ಶೀಘ್ರವಾಗಿ ಜೀರ್ಣಿಸಿಕೊಂಡು ಸೂಕ್ಷ್ಮಾಣುಗಳು ಅಭಿವೃದ್ಧಿಯಾಗಿ ಭೂ ಅಭಿವೃದ್ಧಿಯಾಗಿ ಭೂ ಅಭಿವೃದ್ಧಿ, ಸಸ್ಯಗಳ ಉತ್ತಮ ಬೆಳವಣಿಗೆ ಮತ್ತು ಇಳುವರಿಗೆ ಅವಶ್ಯಕವಾದ ಸಾರಜನಕ, ಇತರ ಪೋಷಕಾಂಶಗಳು ಸುಲಭವಾಗಿ ದೊರಕುವುದೆಂಬುದು ಎಲ್ಲಾ ಬೇಸಾಯಗಾರರಿಗೆ ಅವಶ್ಯಕವಾದ ಮಾಹಿತಿ. ಹಾಗೂ ಎಲ್ಲ ಕೃಷಿ ತಜ್ಞರೂ ಒಮ್ಮತದಿಂದ ಒಪ್ಪಿರುವ ಪ್ರಮುಖ ಅಂಶ. ಈ ಪರಿಣಾಮಕಾರಿಯಾದ ಕ್ರಮವನ್ನು ಕೃಷಿಯಲ್ಲಿನ ತ್ಯಾಜ್ಯ ವಸ್ತುಗಳ ಪುನರ್ ಬಳಕೆಯಿಂದ ಮಾಡಿಕೊಳ್ಳಲು ಸಾಧ್ಯವೇ ಎಂಬ ಚಿಂತನೆ ಪ್ರಾರಂಭವಾದಾಗ ಮೊದಲು ನನ್ನ ಅರಿವಿಗೆ ಬಂದದ್ದು ಗೋಬರ್ ಗ್ಯಾಸ್ ಸ್ಥಾವರದಿಂದ ಬಳಸಿಬಂದ ಸ್ಲರಿಯ ಪುನರ್ ಬಳಕೆ. ಈ ಮೊದಲು ಸ್ಲರಿಯನ್ನು ನಮ್ಮ ತಂದೆ ಟ್ಯಾಂಕರ್‌ಗಳಲ್ಲಿ ತುಂಬಿ ನೀರಿನ ಕಾಲುವೆಯ ಬಳಿ ಕಟ್ಟಿಸಿದ ಸಿಮೆಂಟ್ ತೊಟ್ಟಿಗಳಿಗೆ ಸುರಿದು ಅದನ್ನು ಹರಿಯುವ ನೀರಿನೊಂದಿಗೆ ಬೆರೆಸಿ ತೋಟಗದ್ದೆಗಳಿಗೆ ಹಾಯಿಸುತ್ತಿದ್ದರು.

ಸ್ಪಿಂಕ್ಲರ್ ನೀರಾವರಿಯ ಮೂಲಕ ದ್ರವರೂಪದ ಗೊಬ್ಬರವನ್ನು ಸಸ್ಯಗಳಿಗೆ ಕೊಡಲು ನಾನು 'ಸ್ಲರಿಬ್ಲೀಡಿಂಗ್' ಎಂಬ ಸುಲಭ ವಿಧಾನವನ್ನು ಅಳವಡಿಸಿಕೊಳ್ಳುವುದರಲ್ಲಿ ಯಶಸ್ವಿಯಾಗಿರುವೆ. ಗೊಬರ್ ಗ್ಯಾಸ್‌ನಿಂದ ಬಳಸಿ ಬಂದ ಸ್ಲರಿ ಒಂದು ಸಂಗ್ರಾಹಕದಲ್ಲಿ ಶೇಖರವಾಗುತ್ತದೆ. ಇದಕ್ಕೆ ಎರಡು ಫಿಲ್ಟರ್‌ಗಳನ್ನು ಅಳವಡಿಸಲಾಗಿದೆ. ಈ ಸೋಸುವ ಸಾಧನಗಳು ದ್ರವದಲ್ಲಿರುವ ದೊಡ್ಡ ಕಣಗಳನ್ನು ಬೇರ್ಪಡಿಸಿ ಒಂದೇ ರೂಪದ ದ್ರವಗೊಬ್ಬರವನ್ನು ಸಕ್ಷನ್ ಪಂಪಿಗೆ ಹಾಯಿಸುತ್ತದೆ. ಇಲ್ಲಿ ನಾವು ದ್ರವರೂಪದ ಗೊಬ್ಬರದ ಹರಿವಿನ ಪ್ರಮಾಣವನ್ನು ವಾಲ್ವ್‌ಗಳ ಮೂಲಕ ನಿಯಂತ್ರಿಸಬಹುದು ಮತ್ತು ಹರಿಯುವ ನೀರಿನೊಂದಿಗೆ ಬೆರೆಯುವಂತೆ ಮಾಡಿ ದ್ರವರೂಪದ ಗೊಬ್ಬರ ಮತ್ತು ನೀರು ಎರಡೂ ಮಿಶ್ರಣವಾಗಿ ಸ್ಪಿಂಕ್ಲರ್ ಅಥವಾ ಹನಿ ನೀರಾವರಿಯ ಕೊಳವೆಗಳ ಮೂಲಕ ಹಾದು ಜೆಟ್ (ಚಿಮ್ಮು ನಾಳ) ಗಳ ಮೂಲಕ ಎಲ್ಲಾ ಪ್ರದೇಶಗಳಿಗೂ ಸುಲಭವಾಗಿ ತ್ವರಿತವಾಗಿ ಚಿಮ್ಮಿಸಲ್ಪಡುವುದು. ಈ ಮಾದರಿಯ ಒಂದು ರೇಖಾಚಿತ್ರವನ್ನು ಕೊಡಲಾಗಿದೆ.



1989ರಿಂದ ನಾನು ಈ ವಿಧಾನವನ್ನು ಮೊದಲು ನಮ್ಮ ಗದ್ದೆ-ತೋಟಗಳಲ್ಲಿ ಅಳವಡಿಸಿಕೊಂಡಿದ್ದೇನೆ. ಇದರಿಂದ ಒಂದು ಗಂಟೆಗೆ ಸುಮಾರು 13500 ಲೀಟರ್ ದ್ರವರೂಪದ ಗೊಬ್ಬರವನ್ನು ತೋಟಗದ್ದೆಗಳ ಎಲ್ಲ ವಿಭಾಗಕ್ಕೂ ಸಮನಾಗಿ ವಿತರಿಸಲು ಸಹಾಯಕವಾಗಿದೆ. ಕೇವಲ 1 ಗಂಟೆಯಲ್ಲಿ 18 ಎಕರೆ ಪ್ರದೇಶಕ್ಕೆ ಅತಿ ಕಡಿಮೆ ಖರ್ಚು, ಶ್ರಮ ಮತ್ತು ಸಮಯದ ಉಳಿತಾಯ ಮಾಡುವುದರ ಜೊತೆಗೆ ರಸಾಯನಿಕ ಗೊಬ್ಬರದ ಅವಶ್ಯಕತೆ ಮತ್ತು ಬಳಕೆಯನ್ನು ಗಣನೀಯವಾಗಿ ಕಡಿಮೆ ಮಾಡಲು ಸಹಾಯಕವಾಗಿದೆ. ಜೊತೆಗೆ ಬೆಳೆಗಳ ಅಭಿವೃದ್ಧಿ ತೀವ್ರಗತಿಯಲ್ಲಿ ಕಂಡಿದ್ದು, ಸಸ್ಯಗಳ ಆಹಾರ ಉತ್ಪಾದನೆಯ ದ್ಯುತಿಸಂಶ್ಲೇಷಣ ಕ್ರಿಯೆ, ಪಕ್ವತೆ ಮತ್ತು ಇಳುವರಿ ಉತ್ತಮವಾಗಿ ನಡೆಯುತ್ತಿರುವುದನ್ನು ನಾನು ಕಂಡುಕೊಂಡಿದ್ದೇನೆ.

ಗುಜರಾತಿನ ಕಿಮ್‌ಜಿಭ್ಯಾ ಸರಳ ಶೋಧನೆಗಳು

ಕಿಮ್‌ಜಿಭ್ಯಾ ಕನಾಡಿಯಾ, ಗುಜರಾತಿನ ಸಬರಕಾಂತ ಜಿಲ್ಲೆಯ ನಿವೃತ್ತ ಶಿಕ್ಷಕ. ಅರವತ್ತರ ಹರೆಯದಲ್ಲೂ ಹೊಸತನ ಹುಡುಕುವ ಪ್ರವೃತ್ತಿಯುಳ್ಳವರು. ಕೃಷಿ ವೃತ್ತಿಯೊಂದಿಗೆ ಹೊಸ ಹೊಸ ಅವಿಷ್ಕಾರಗಳನ್ನು ಮಾಡಿ, ಇತರರಿಗೆ ಸಹಾಯ ಮಾಡಬೇಕೆಂಬ ಧ್ಯೇಯ ಇವರದು. ಸಣ್ಣಪುಟ್ಟ ಸಲಕರಣೆಗಳನ್ನು ಆವಿಷ್ಕರಿಸಿರುವ ಇವರ ಸರಳ ಜೀವನ ಇತರರಿಗೆ ಮಾದರಿ. ಇವರೇ ರೂಪಿಸಿರುವ ಇಂತಹ ಕೆಲವು ಉಪಕರಣಗಳಲ್ಲಿ ಸಸಿಪಾತಿಯಲ್ಲಿ ಪಾಲಿಬ್ಯಾಗಿಗೆ ಮಣ್ಣನ್ನು ತುಂಬುವ ಸಾಧನ 'ಕಿಟ್ಟನಾಲ್', ಐದು ಲೀಟರ್ ಸಾಮರ್ಥ್ಯದ ಕುರಾಲ್ ಸ್ಪ್ರೇಯರ್, ಗೋಧಿ ಬಿತ್ತನೆ ಯಂತ್ರ, ಒಲೆ, ಕುಕ್ಕರ್ ಪ್ರಮುಖವಾದವು.

'ಕಿಟ್ಟನಾಲ್'

ಎರಡು ವರ್ಷಗಳ ಹಿಂದೆ ಅರಣ್ಯ ಇಲಾಖೆಯಿಂದ ಹತ್ತು ಸಾವಿರ ಸಸಿ ಬೆಳೆಸಿ ಕೊಡುವ ಕಾರ್ಯ ಇವರ ಪಾಲಿಗೆ ಪಾಲಿಬ್ಯಾಗಿಗೆ ಮಣ್ಣನ್ನು ತುಂಬಲು ಶುರು. ಆದರೆ ಮಣ್ಣನ್ನು ತುಂಬಲು ಕೂಲಿಯಾಳುಗಳು ಪಡುತ್ತಿದ್ದ ಕಷ್ಟ ಹೇಳತೀರದು. ಏಕೆಂದರೆ ಪಾಲಿಬ್ಯಾಗಿನ ಮೂತಿ ಸರಿಯಾಗಿ ತೆರೆದುಕೊಳ್ಳುತ್ತಿರಲಿಲ್ಲ. ಹಾಗಾಗಿ ಮಣ್ಣು ಆಚೆಯೇ ಚೆಲ್ಲುತ್ತಿತ್ತು. ಕಿಮ್‌ಜಿಭ್ಯಾಯವರಿಗೆ ಇದು ಸರಿಕಾಣಲಿಲ್ಲ.

ಕೆಲಸ ಚುರುಕುಗೊಳಿಸಲು ಕಂಡುಹಿಡಿದ ಸಲಕರಣೆಯೇ 'ಕಿಟ್ಟನಾಲ್'. 'ಕಿಟ್ಟನಾಲ್' ಎಂದರೆ ಮೂರಿಂಚು ಗಾತ್ರದ ಸಣ್ಣ ಪಿವಿಸಿ ಕೊಳವೆ. ಒಂದು ತುದಿ ಅಗಲವಾಗಿದ್ದು ಮತ್ತೊಂದು ತುದಿಯನ್ನು ನಿರ್ದಿಷ್ಟ ಕೋನಕ್ಕೆ ಕತ್ತರಿಸಿರುತ್ತಾರೆ. ಕತ್ತರಿಸಿದ ತುದಿಯನ್ನು ಪಾಲಿಬ್ಯಾಗಿನೊಳಕ್ಕೆ ತೂರಿಸಿ, ಅಗಲವಾದ ತುದಿಯನ್ನು ಮಣ್ಣಿನೊಳಕ್ಕೆ ಹಾಕಿದರಾಯಿತು. ಒಂದೇ ಬಾರಿಗೆ ಪಾಲಿಬ್ಯಾಗು ಮಣ್ಣಿನಿಂದ ಪೂರ್ಣ. ಈ ಸಲಕರಣೆಯನ್ನು ಕಿಮ್‌ಜಿಭ್ಯಾ ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿಯೆದುರಿಗೆ



ಪ್ರದರ್ಶಿಸಿ ಮೆಚ್ಚುಗೆ ಪಡೆದರು. ಕೂಡಲೇ ಅವರಿಂದ 200 'ಕಿಟ್ಟನಾಲ್' ಬೇಕೆಂಬ ಬೇಡಿಕೆ. ಬಳ್ಳಾಪುರ ಪೇಪರ್ ಕಾರ್ಖಾನೆಯ ಅಜಯ್ ನಿಯೋಡಿಂಗ್ ಅವರಿಂದ ಕಿಟ್ಟನಾಲ್ ಬಗ್ಗೆ ಮೆಚ್ಚುಗೆಯ ಮಾತು. ಜೊತೆಗೆ ನೂರು ಕಿಟ್ಟನಾಲ್ ತಯಾರಿಸಿಕೊಡಬೇಕೆಂಬ ಇಂಗಿತ. ಸೇವಾ (SEWA - Self Employed Women's Association) ಸಂಸ್ಥೆಯವರಿಂದ ಕೂಡಾ ಕಿಟ್ಟನಾಲ್ ಬಗ್ಗೆ ಮೆಚ್ಚುಗೆ ಮಾತು. ಏಕೆಂದರೆ ಹೆಣ್ಣಾಳುಗಳು ಅರಣ್ಯ ಇಲಾಖೆಯ ನರ್ಸರಿಗಳಲ್ಲಿ ಕೆಲಸ ಮಾಡುವಾಗ ಕಿಟ್ಟನಾಲ್ ಬಳಸಿದರೆ ಕಾರ್ಯಕ್ಷಮತೆ ಹೆಚ್ಚಬಹುದು. ಜೊತೆಗೆ ಸಂಬಳವೂ ಹೆಚ್ಚು ಸಿಗುತ್ತದೆ ಎಂಬ ಆಶಯ.

ಇತರ ಅನುಶೋಧನೆಗಳು


1965ರಲ್ಲೇ ಕಿಮ್‌ಜಿಭ್ಯಾ ರೂಪಿಸಿದ "ಕುಶಾಲ್ ಸ್ಪ್ರೇಯರ್" ಗೆ ವಡಾಲಿ ಹಳ್ಳಿಯಲ್ಲಿ ನಡೆದ ವಿಜ್ಞಾನಮೇಳದಲ್ಲಿ ಬಹುಮಾನ ಲಭಿಸಿದೆ. ಒಬ್ಬನೇ ಸಿಂಪಡಿಸಬಹುದಾದ ಸರಳ, ಹಗುರವಾದ ಕುಶಾಲ್‌ಸ್ಪ್ರೇಯರ್‌ನ ಬಳಕೆಯನ್ನು ಅನಿಲ್‌ಗುಪ್ತಾರ ಶೋಧಯಾತ್ರೆಯಲ್ಲಿ ಪ್ರಾತ್ಯಕ್ಷಿಕೆಗೊಳಪಡಿಸಲಾಗಿ, ಸೃಷ್ಟಿ ಸಂಸ್ಥೆಯವರಿಂದ 5 ಕುಶಾಲ್‌ಸ್ಪ್ರೇಯರ್ ಬೇಕೆಂಬ ಬೇಡಿಕೆ ಕಿಮ್‌ಜಿಭ್ಯಾಗೆ.

'ಜೋಲಿ ಬರಾನೊ' ಗೋಧಿ ಬಿತ್ತುವ ಸರಳ ಉಪಕರಣ. ಒಂದು ಚೀಲ. ಚೀಲಕ್ಕೆ ಪಿವಿಸಿ ಜೋಡಣೆ. ಬಿತ್ತುವವನು ಈ ಚೀಲದಲ್ಲಿ ಗೋಧಿ ಬೀಜ ತುಂಬಿಸಿ ಹೆಗಲಿಗೇರಿಸಿದರಾಯಿತು. ಜಮೀನಿನಲ್ಲಿ ಪಿವಿಸಿ ಪೈಪಿನ ಮೂಲಕ ಬೀಜ ಎಲ್ಲಿ ಬೇಕಾದರೆಂದರಲ್ಲಿ ಚೆಲ್ಲಬಹುದು.

ಚಳಿಗಾಲದಲ್ಲಿ ಜನರು ಬೆಂಕಿ ಕಾಯಿಸಲು ಹಾಕುವ ಬೆಂಕಿಗೆ ಬಳಸುವ ಕಟ್ಟಿಗೆ ಸುಮ್ಮನೆ ಹಾಳು. ಇದನ್ನು ಹೇಗಾದರೂ ಸದುಪಯೋಗ ಪಡಿಸಿಕೊಳ್ಳುವ ಬಗ್ಗೆ ವಿಚಾರ. ಆಗ ಹೊಳೆದದ್ದು ಹೀಗೆ - ಕಬ್ಬಿಣದ ಎರಡು ಪಾತ್ರೆ (ಚಿತ್ರದಲ್ಲಿತೋರಿಸಿರುವಂತೆ) ಎರಡಕ್ಕೂ ಕೊಳವೆಯ ಜೋಡಣೆ. ಎರಡರೊಳಗೆನೀರು ತುಂಬಿ ಎರಡು ಪಾತ್ರೆಯ ಮಧ್ಯೆ ಬೆಂಕಿ ಹಾಕಿ ಬೆಂಕಿಯ ಸುತ್ತ ಕುಳಿತರಾಯಿತು. ಚಳಿಯನ್ನು ಓಡಿಸುವುದರ ಜೊತೆಗೆ ಉಪಯೋಗಕ್ಕೆ ಬಿಸಿನೀರು ಲಭ್ಯ.

ಕಾರ್ಯಕ್ಷಮತೆಯ ಹುಡುಕಾಟದಲ್ಲಿ.....

"ನಾನು ಸಂಶೋಧನಾ ಪ್ರಿಯ. ನನಗೆ ಕಾರ್ಖಾನೆ ಇಟ್ಟು ಅಲ್ಲಿ ನನ್ನ ಅನುಶೋಧನೆಗಳನ್ನು ಬಳಸಿ ಮಾರಾಟಕ್ಕೆ ತಯಾರಿಸಿ ನಡೆಸುವ ಇಚ್ಛೆ ಇಲ್ಲ. ನನ್ನ ಅನುಶೋಧನೆಗಳನ್ನು ನಾನು ಕೈಗಾರಿಕೋದ್ಯಮಿಗಳಿಗೆ ಕೊಡಲು ಸಿದ್ಧ. ಅವರ ಬಂಡವಾಳದಲ್ಲಿ ನನ್ನ ಅನುಶೋಧನೆಗಳು ಬೆಳಕಿಗೆ ತಲುಪಿದರೆ ಅದೇ ನೆಮ್ಮದಿ" ಎನ್ನುತ್ತಾರೆ ಕಿಮ್‌ಜಿಭ್ಯಾ.



ಸಾವಯವ ಅಡಿಕೆ ಕೃಷಿ ಬಗ್ಗೆ ನಾರಾಯಣ ರೆಡ್ಡಿಯವರ ಅನಿಸಿಕೆಗಳು

ಸಾಗರ ತಾಲ್ಲೂಕಿನಲ್ಲಿ ವ್ಯಾಪಕವಾಗಿ ಗೋಬರ್ ಗ್ಯಾಸ್ ಸ್ಥಾವರಗಳು ನಿರ್ಮಾಣವಾದದ್ದು 1980ರ ದಶಕದಲ್ಲಿ. ಗೋಬರ್ ಗ್ಯಾಸ್ ಸ್ಥಾವರದಿಂದ ಬರುವ ಸಗಣಿನೀರಿನಿಂದ ತಯಾರಾಗುವ ಗೊಬ್ಬರ ಅಷ್ಟೊಂದು ಸಾರ ಉಳ್ಳದ್ದಲ್ಲ ಎಂದು ಕೆಲವರು ಹೇಳುತ್ತಲೇ ಇದ್ದಾರೆ. ಗೊಬ್ಬರಕ್ಕೆ ಅನುಪಯುಕ್ತವಾದ ಮೀಥೇನ್ ಅನಿಲವಾಗಿ ಬಳಕೆ ಆಗುವುದರಿಂದ ಏನೂ ತೊಂದರೆ ಇಲ್ಲ. ಗುಂಡಿಗೆ ನೆರಳಿನ ಅವಶ್ಯಕತೆ ಇದೆ. ಬಿಸಿಲಿನ ಶಾಖಕ್ಕೆ ಈ ಸಗಣಿ ನೀರು ಬೇಗ ಹುಡಿಯಾಗುತ್ತೆ. ಹಾಗಾಗದಂತೆ ನೋಡಿಕೊಳ್ಳಬೇಕು ಎಂದು ಕೆಲವರು ಹೇಳುತ್ತಾರೆ. ಈ ಗೊಂದಲದ ನಡುವೆ ಕೆಲವು ಕೃಷಿ ತಜ್ಞರು ಗೊಬ್ಬರ ಗುಂಡಿಗೆ ಗಂಜಲು (ಜಾನುವಾರುಗಳ ಮೂತ್ರ) ಬಳಸಬಾರದು ಎನ್ನುತ್ತಾರೆ. ಈ ಬಗ್ಗೆ ನಾರಾಯಣರೆಡ್ಡಿಯವರು ಹೇಳುವುದು.

ಸುಮಾರು 20-25 ವರ್ಷದಿಂದ ಗ್ಯಾಸ್ ಬಳಸಿದ ಸಗಣಿ ಗೊಬ್ಬರ ಬಳಸಿದವರಿದ್ದಾರೆ. ಈ ಗೊಬ್ಬರದಿಂದ ಕೃಷಿಗೆ ಹಾನಿಯೇನೂ ಇಲ್ಲ. ಮಲಕ್ಕಿಂತ ಮೂತ್ರದಲ್ಲೇ ಅಮೋನಿಯಾ ಹೆಚ್ಚು. ಒಂದೇ ಕಡೆ ಎರಡು ದಿನ ಮೂತ್ರ ಮಾಡಿ, ಇಲ್ಲವೇ ಟಾಯ್ಲೆಟ್‌ಗೆ ಸರಿಯಾಗಿ ನೀರು ಹಾಕದೇ ಇದ್ದರೆ ಉಸಿರು ಕಟ್ಟೋ ಹಾಗಾಗುತ್ತೆ. ಕಾರಣ ಅಮೋನಿಯಾ ಹೆಚ್ಚು ರಿಲೀಸ್ ಆಗೋದರಿಂದ ನಮ್ಮ ಮನೇಲಿ ಗ್ಯಾಸ್ ಕಮ್ಮಿ ಆದಾಗ ಮಾತ್ರ ಗಂಜಲು ಸೇರಿಸಿ ಸಗಣಿ ಕರಡ್ತೀವಿ. ಗೋಬರ್‌ಗ್ಯಾಸ್‌ಗೆ ಗಂಜಲು ಬಳಸೋದರಿಂದ ಹೆಚ್ಚು ಗ್ಯಾಸ್ ಪಡೇಬಹುದು.

ಅಡಿಕೆ ತೋಟದಲ್ಲಿ ಬೇವಿನ ಹಿಂಡಿ ಬಳಸಬಹುದೇ?

ಬೇವಿನ ಹಿಂಡಿ ಸಾವಯವ ಕೃಷಿಗೆ ಸೂಕ್ತವಾದದ್ದು. ಆದರೆ ಗೊಬ್ಬರವಾಗಿ ಅಲ್ಲ. ಕೆ.ಜಿ.ಗೆ ನಾಲ್ಕು ರೂ. ಕೊಟ್ಟರೆ ಅದರಲ್ಲಿರೋದು ಶೇ. 3 ಮಾತ್ರ.

ಗೊಬ್ಬರವಾಗಿ ಬಳಸಲು ದುಬಾರಿ. ಗೊಬ್ಬರವಾಗಿ ಉಪಯೋಗಿಸಬೇಡಿ. ವಿಶಿಷ್ಟವಾದ ಗುಣ 11 ಜಾತಿ ಬೇರು ಹುಳುಗಳನ್ನು ನಿಯಂತ್ರಿಸೋ ಶಕ್ತಿ ಇದೆ. 4 ಜಾತಿ ರೋಗಗಳನ್ನು ಉಲ್ಬಣವಾಗದಂತೆ ತಡೆಯುತ್ತೆ. ಕೀಟ ನಿಯಂತ್ರಣ ಮಾಡುತ್ತೆ. ಒಳ್ಳೆ ತೆಂಗಿನ ಗಿಡಕ್ಕೆ 2 ಕೆ.ಜಿ. ಕಾಂಪ್ಲೆಕ್ಸ್, 2 ಕೆ.ಜಿ. ಪೊಟ್ಯಾಷ್ ಕೊಡಬೇಕು ಅಂತ ಇಲಾಖೆಯವರು ಹೇಳ್ತಾರೆ. ಆ ಪ್ರಮಾಣದಲ್ಲಿ ಬೇವಿನ ಹಿಂಡೀನೇ ಕೊಡೋದಾದರೆ ಸುಮಾರು 40 ಕೆ.ಜಿ. ಬೇಕು. ಇದಕ್ಕಿಂತ ಕೋಳಿಗೊಬ್ಬರ ಅಗ್ಗ. 2 ಕೆ.ಜಿ.ಗೆ ಅಂದಾಜು 40 ಪೈಸೆ. ಅಡಿಕೆ ಮರಕ್ಕೆ ಔಷಧಿಯಾಗಿ ಬೇವಿನ ಹಿಂಡೀನ ಅರ್ಧ, ಕಾಲು ಕೆ.ಜಿ. ಬಳಸಬಹುದು.

ಅಡಿಕೆ ಮರಗಳಿಗೆ 3 ಮತ್ತು 2 ವರ್ಷಗಳಿಗೊಮ್ಮೆ ಗೊಬ್ಬರ ಕೊಡ್ತಿದ್ದಾರೆ. ಒಂದು ಅಥವಾ ಎರಡು ಹೆಡಿಗೆ ಅಂದರೆ ಒಂದು ಹೆಡಿಗೆ 25 ಕೆ.ಜಿ. ಆಗಬಹುದು. ಈ ಕ್ರಮ ಸರಿಯೇ?

2 ವರ್ಷಕ್ಕೆ ಒಂದ್ಸರಿ ಗೊಬ್ಬರ ಕೊಟ್ಟರೆ ಸಾಕು. ಪ್ರತಿ ವರ್ಷ ಕೂಲಿ ಖರ್ಚು ಹೆಚ್ಚು ಮತ್ತು ಗೊಬ್ಬರಾನೂ ಅಷ್ಟೊಂದು ಸಿಗದ ಕಾರಣ ಹೀಗೆ ಮಾಡ್ತೀರಿ ಅಂತ ಕಾಣುತ್ತೆ.

ಭೂಮಿ ಶ್ರೀಮಂತವಾಗ್ತಾ ಇರುತ್ತೆ. ರಸಗೊಬ್ಬರ ಹಾಕೋದು ಬಿಟ್ಟು ಹಟ್ಟಿಗೊಬ್ಬರ, ಅಡಿಕೆ ಹಾಳೆ, ಸೋಗೆ ಎಲ್ಲಾ ತೋಟದಲ್ಲೇ ಬಿಡ್ತಾ ಇದ್ದರೆ ಒಂದು ಕಾಲಕ್ಕೆ ೪ ವರ್ಷಕ್ಕೊಂದ್ಸರಿ ಗೊಬ್ಬರ ಕೊಟ್ಟರೂ ಯಾವ ಕೊರತೆನೂ ಬರಲ್ಲ.

ಅಡಿಕೆ ತೋಟದಲ್ಲಿ ಕಾಫಿ ಬೆಳೀಬಹುದೆ?

ಕಾಫಿಗಿಂತ ಗಿಡದ ಎಲೆ ತೋಟಕ್ಕೆ ಬೀಳುತ್ತಲ್ಲಾ, ಆದರಿಂದ ನಿಮಗೆ ತುಂಬಾ ಲಾಭ. ಮುಖ್ಯ ಬೆಳೆಗೆ ಸೂರ್ಯನ ಬೆಳಕಿನ ತೊಂದರೆ ಆಗದ ಹಾಗೆ ನೀವು ಎಷ್ಟು ಬೆಳೆ ಬೆಳೆದರೂ ಒಳ್ಳೆಯದೇ. ಇಡೀ ಶ್ರೀಲಂಕಾದಲ್ಲಿ ಎಲ್ಲೂ ಒಂದು ಬೆಳೆ ಇಲ್ಲ. ಮೂರು ಹಂತದಲ್ಲಿ ಅವರ ಬೆಳೆ ಇದೆ. ತೆಂಗಿದ್ದರೆ ಬಾಳೆ, ಬಾಳೆ ಕೆಳಗೆ ಕಾಫಿ ಅಥವಾ ಟೀ.

ನಮಗೆ ಸಸಿ ತೋಟಕ್ಕೆ ಸ್ಪ್ರಿಂಕ್ಲರ್ ಉತ್ತಮವೇ, ಡ್ರಿಪ್ಪೇ?

ಸ್ಪ್ರಿಂಕ್ಲರ್‌ನಲ್ಲಿ ಎರಡು ತೊಂದರೆ ಇದೆ. ನೀರಿನ ದುರ್ಬಳಕೆ ಜಾಸ್ತಿ. ಚಿಮ್ಮುವಾಗ ಜೋರುಗಾಳಿ ಇದ್ದರೆ ಒಂದೇ ಕಡೆ ಬೀಳುತ್ತೆ. ಎರಡನೇದು ನೀರು ಆವಿ ಆಗೋ ಸಂಭವ ಜಾಸ್ತಿ. ವಿಶಾಲವಾದ ಜಾಗದಲ್ಲಿ ಎರಚೋದರಿಂದ ಎಲೆಗಳ ಮೇಲೆ ನಿರಂತರವಾದ ತೇವ ಹಾಕ್ತಾ ಇದ್ರೆ ರೋಗ ಉಲ್ಬಣ ಆಗ್ಲಿಕ್ಕೆ ಕಾರಣವಾಗುತ್ತೆ. ನಿಮಗೆ ಸಿಕ್ಕ ನೀರು ಉಪ್ಪಾಗಿದ್ರೆ ಗಿಡ ಸುಡುವ ಸಂಭವವೂ ಉಂಟು. ಡ್ರಿಪ್‌ನಲ್ಲಿ ನೀರು ಕೊಟ್ಟಾಗ ಈ ಯಾವ ಸಮಸ್ಯೆ ಇರಲ್ಲ. ಸ್ನಾಪ್ ಜೆಟ್ ಇದೆ. ಸಣ್ಣ ಸಣ್ಣದು. 45 ಅಡಿ ಅಂತರದಲ್ಲಿ ಬೀಳುತ್ತೆ. ಎಲೆಗಳ ಮೇಲೆ ಬೀಳಲ್ಲ. ನೀರಿನ ದುರ್ಬಳಕೆ ಆಗಲ್ಲ.

ಭೂಮಿಯ ಪೊರಾಸಿಟಿ ಅಂದರೆ ನೀರು ಇಂಗೋ ಶಕ್ತಿ ಗಮನಿಸಿ ಡ್ರಿಪ್ ಇಡಬೇಕು. ಜಿಗಟುಮಣ್ಣು ಇರೋ ಕಡೆ ಡ್ರಿಪ್ ಇಟ್ಟರೆ ಅಷ್ಟೇ ಕಡೆ ನೀರು ನಿಲ್ಲುತ್ತೆ. ನಾನು 10 ವರ್ಷದಿಂದ ಡ್ರಿಪ್ ಉಪಯೋಗಿಸ್ತಿದ್ದೀನಿ. ಸ್ನಾಪ್ ಜೆಟ್, ಮೈಕ್ರೋ ಸ್ಪ್ರಿಂಕ್ಲರ್‌ಗಳು, ಸಣ್ಣ ಫ್ಲಾಷರ್‌ಗಳು ಒಳ್ಳೇದು. ಅಡಿಕೆ ತೋಟದಲ್ಲಿ ಡ್ರಿಪ್ ಅಳವಡಿಸಬಹುದು.

ಸಂಗ್ರಹ : ಬಂದಗದ್ದೆ ರಾಧಾಕೃಷ್ಣ
ಕೆಳದಿ, ಶಿವಮೊಗ್ಗ

ಗಮನಿಸಿ

ಬಾವಲಿಗಳಲ್ಲಿಯ 600 ಪ್ರಬೇಧಗಳು ಕೀಟಾಹಾರಿಗಳು. ಹಿಂಡು ಹಿಂಡಾಗಿ ಬರುವ ಮೆಕ್ಸಿಕನ್ ಬಾವಲಿಗಳು ಕೇವಲ ಒಂದು ಬೇಸಿಗೆಯಲ್ಲಿ 6000 ಟನ್‌ನಷ್ಟು ಕೀಟಗಳನ್ನು ಹಿಡಿದು ತಿನ್ನುತ್ತವೆ. ನಮ್ಮಲ್ಲಿರುವ ಒಂದೊಂದು ಬಾವಲಿಯು ದಿನವೊಂದಕ್ಕೆ 3000 ಕೀಟಗಳನ್ನು ಭಕ್ಷಿಸುತ್ತದೆ. ನೈಸರ್ಗಿಕ ಕೀಟ ಹತೋಟಿಯ ಇನ್ನೊಂದು ದೊಡ್ಡ ಮುಖ ಇದು. ಹಾನಿಕಾರಕ ಕೀಟನಾಶಕ ಬಳಸಿ ಕೀಟಗಳ ಜೊತೆಗೆ ಬಾವಲಿಗಳನ್ನು ಸಾಯಿಸಬೇಡಿ.

ಕೃಪೆ ಮತ್ತು ಮೂಲ : ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು
ಹಾಸನ ಘಟಕ

ಮೊಗವೀರರು ಸಮುದ್ರದಲ್ಲಿ ಮೀನು ಇರುವುದನ್ನು ಹೇಗೆ ಕಂಡು ಹಿಡಿಯುತ್ತಾರೆ ?

✪ ನೈರುತ್ಯ ದಿಕ್ಕಿನಿಂದ ಗಾಳಿ ಬೀಸುತ್ತಿದ್ದರೆ, ಮೀನುಗಳು ದಡದ ಕಡೆಗೆ ಬರುತ್ತವೆ ಎಂದು ಎಣಿಸುತ್ತಾರೆ.

✪ ಸಮುದ್ರದ ನೀರಿನ ಪ್ರವಾಹ ದಡದ ಕಡೆಗೆ ಇದ್ದಾಗ ಮೀನನ್ನು ಪತ್ತೆ ಹಚ್ಚುತ್ತಾರೆ.

✪ ಮೀನಿನ ತೆಪ್ಪ ದಟ್ಟಾಗಿ ಇದ್ದಾಗ ನೀರಿನ ಬಣ್ಣ ಸ್ವಲ್ಪ ಕಪ್ಪು ಬಣ್ಣಕ್ಕೆ ತಿರುಗುವುದನ್ನು ಗುರುತಿಸುತ್ತಾರೆ.

ಸಂಗ್ರಹ : ಪ್ರೊ. ರಾಮಚಂದ್ರ ಭಟ್, ಮೀನುಗಾರಿಕೆ ಕಾಲೇಜು, ಮಂಗಳೂರು

ನಾಟೀ ಬೇಸಾಯ ಕ್ರಮಗಳು

ಸೋರೆಕಾಯಿ, ಚೀನಿಕಾಯಿಯ ಬಳ್ಳಿಗಳಲ್ಲಿ ಹೂ ಉದುರುವುದು ರೈತರಿಗೆ ಸಾಮಾನ್ಯವಾಗಿ ಕಂಡು ಬರುವ ತೊಂದರೆ, ಆಂಧ್ರಪ್ರದೇಶದ ಜನ ಇದಕ್ಕೆ ತಮ್ಮದೇ ಆದ ಉಪಾಯ ಕಂಡು ಹುಡುಕಿದ್ದಾರೆ. ಬೇಯಿಸಿದ ಅನ್ನವನ್ನು ರಾತ್ರಿ ಹುಳಿಬರಿಸಲು ಬಿಡುತ್ತಾರೆ. ಮಾರನೇ ದಿನ ಬೆಳಗ್ಗೆಯೇ ಹೋಗಿ ಈ ಹುಳಿಬಂದ ತಂಗಳನ್ನವನ್ನು ಹೂಮೊಗ್ಗಿನ ಬಳಿಯಲ್ಲಿ ಗೆಲ್ಲಿಗೆ ಕಟ್ಟುತ್ತಾರೆ. ಹೀಗೆ ಮಾಡುವುದರಿಂದ ಹೂ ಉದುರುವುದನ್ನು ನಿಯಂತ್ರಣದಲ್ಲಿಡ ಬಹುದಂತೆ.

ಇದೇ ರೀತಿ ತೆಂಗಿನಮರದಲ್ಲಿ ಹೂ ಉದುರುವುದನ್ನು ತಡೆಯಲು ಗಿಡದ ಬುಡಕ್ಕೆ ಉಪ್ಪು ಹಾಕುವುದಷ್ಟೇ ಅಲ್ಲದೆ, ಮೊಗ್ಗಿನ ತುದಿಗೂ ಉಪ್ಪು ಹಾಕುವುದು ಹೂ ಉದುರುವುದನ್ನು ಕಡಿಮೆ ಮಾಡುವು ದೆಂಬುದು ಆಂಧ್ರಪ್ರದೇಶದ ರೈತರ ಅನುಭವ.

ಉಪ್ಪನ್ನು ಕೊಟ್ಟಿಗೆ ಗೊಬ್ಬರದೊಂದಿಗೆ ಬೆರೆಸಿ ಹೊಲ ಗದ್ದೆಗೆ ಹಾಕುವುದರಿಂದ ಗಿಡಗಳ ಕೀಟ ನಿರೋಧಕ ಶಕ್ತಿ ಹೆಚ್ಚುವುದೆಂಬುದು ಗುಜರಾತಿನ ಅಂಬ್ರಾಮಬಾಯಿಯವರ ಅನುಭವ. ಅವರು ಪ್ರತೀ ಒಂದು ಗಾಡಿ ಗೊಬ್ಬರಕ್ಕೆ ಸುಮಾರು 2-2.5 ಕಿ.ಜಿ.ಯಷ್ಟು ಉಪ್ಪನ್ನು ಬೆರೆಸಿ ಗೊಬ್ಬರ ಬಳಸುತ್ತಾರೆ.

ಮೂಲ : ಹನಿ ಬೀ 9(1) : 1998

ಮೀನುಗಳಿಗೆ ಮತ್ತು !

ಕತ್ತಾಳೆ (Cactus) ಪಟ್ಟೆ ಮತ್ತು ನೇರಳೆ ತೊಗಟೆ ಎರಡೂ ಜಜ್ಜಿ ಮಿಶ್ರಣ ಮಾಡಿ ಮೀನಿರುವ ನೀರಿಗೆ ಹಾಕಿದರೆ ಅವಕ್ಕೆ ಮತ್ತೇರಿ ತೇಲುತ್ತವೆ. ಆಗ ಸುಲಭವಾಗಿ ಆರಿಸಬಹುದು. ಇದು ಕೋಲಾರ, ಆಂಧ್ರಪ್ರದೇಶದ ಪೂಜಾರಿ ಬುಡಕಟ್ಟಿನ ಜನರ ಸಾಮಾನ್ಯ ಪದ್ಧತಿ.

ಹ. ಸೋಮಶೇಖರ್, ಕೃಷಿ ವಿ.ವಿ. ನಿಲಯ, ಬೆಂಗಳೂರು

(ಇದೇ ರೀತಿ ಮುಕ್ಕಡಕ ಸಸ್ಯದ ಎಲೆಯನ್ನೂ ಜಜ್ಜಿ ರಸಬರುವಂತೆ ಮಾಡಿ, ಆ ಎಲೆಯನ್ನು ನೀರಿನ ಹೊಂಡದಲ್ಲಿ ಹಾಕಿ ಅಲ್ಲಿರುವ ಮೀನಿಗೆ ಎಚ್ಚರ ತಪ್ಪುವಂತೆ ಮಾಡಿ ಹಿಡಿಯುವುದನ್ನು ಮಲೆನಾಡಿನ ಜನರು ಬಹು ಹಿಂದಿನಿಂದಲೂ ಬಲ್ಲರು. - *ಸಂ*)

ಸವಳು ಮಣ್ಣಿಗೆ ಬಾಳೆ ಗಿಡಗಳು!

ಉತ್ತರ ಪ್ರದೇಶದ ರಾಯ್ ಬರೇಲಿ ಜಿಲ್ಲೆಯ ರೈತರು ಸವಳು ಜಮೀನಿನಲ್ಲಿ ಮಾವಿನ ಗಿಡಗಳನ್ನು ನೆಡುವಾಗ ಜೊತೆಯಲ್ಲೇ ಬಾಳೆಗಿಡಗಳನ್ನೂ ನೆಡುತ್ತಾರೆ. ಜೇಡಿಮಣ್ಣಿನಲ್ಲಿರುವ ಕ್ಯಾಲ್ಸಿಯಂ ಕಾರ್ಬೋನೇಟ್ ಅಂಶವನ್ನು ಬಾಳೆಗಿಡಗಳು ಹೀರಿಕೊಂಡು ಸವಳಿನ ಅಂಶವನ್ನು ಗಣನೀಯವಾಗಿ ಕಡಿಮೆ ಮಾಡಿ ಮಾವಿನ ಗಿಡಗಳು ಚೆನ್ನಾಗಿ ಬೆಳೆಯುವ ಅನುಭವ ಹೊಂದಿದ್ದಾರೆ ಅನೇಕ ರೈತರು.

ಮೂಲ : ತೆಹಸಿಲ್‌ಸದಾರ್, ರಾಯ್ ಬರೇಲಿ ಜಿಲ್ಲೆ, ಉತ್ತರ ಪ್ರದೇಶ 'ಸೂಜಬೂಜ್ ಹಿಂದಿಯಿಂದ

ನಾಟಿ ಸಂಗ್ರಹಣಾ ಪದ್ಧತಿಗಳು

✪ ಗುಡ್ಡಗಾಡು ಪ್ರದೇಶದ ರತನ್‌ಬ್ಯಾ ವಿಷಮಧಾರಿ *(Clerodendrum phlomides)* ಗಿಡವನ್ನು ಧಾನ್ಯ ಸಂರಕ್ಷಣೆಗೆ ಬಳಕೆ ಮಾಡುತ್ತಾರೆ. ವಿಷಮಧಾರಿ ಗಿಡದ ಎಲೆಯನ್ನು ಚೆನ್ನಾಗಿ ಅರೆಯಬೇಕು. ಇದು ರುಚಿಯಲ್ಲಿ ತುಂಬಾ ಕಹಿ. 500 ಮಿ.ಲೀ. ಎಲೆ ದ್ರಾವಣವನ್ನು 40 ಕೆ.ಜಿ. ಕಾಳುಗಳೊಂದಿಗೆ ಚೆನ್ನಾಗಿ ಬೆರೆಸಬೇಕು. ನಂತರ ಕಾಳುಗಳನ್ನು ಒಣಗಿಸಿ, ಮಣ್ಣಿನ ಮಡಿಕೆಗಳಲ್ಲಿ ತುಂಬಿಸಿಡುತ್ತಾರೆ.

ಮೂಲ: 'ಲೋಕಸರವಾನಿ', ಗುಜರಾತಿ

✪ ಕರ್ಪೂರವನ್ನು ಬಹಳ ಸಮಯ ಇಟ್ಟಲ್ಲಿ ಆವಿಯಾಗುತ್ತದೆ. ಇದನ್ನು ತಡೆಯಲು ಕರ್ಪೂರದ ಜೊತೆಯಲ್ಲಿ ಕಾಳುಮೆಣಸನ್ನು ಬೆರೆಸಿ ಇಟ್ಟರೆ ದೀರ್ಘಕಾಲದವರೆಗೆ ಕರ್ಪೂರವನ್ನು ಕಾಪಾಡಬಹುದು.

✪ ಒಂದು ಮುಷ್ಟಿ ಕಲ್ಲು ಉಪ್ಪನ್ನು ಬೇಳೆಕಾಳುಗಳು ತುಂಬಿರುವ ಪಾತ್ರೆಯಡಿಯಲ್ಲಿ ಹಾಕಿದರೆ ಯಾವುದೇ ಕೀಟ/ರೋಗಬಾರದು.

✪ ಅಕ್ಕಿ ಶೇಖರಿಸಿಟ್ಟಾಗ ಯಾವುದೇ ಹುಳ ಬರದಂತೆ ತಡೆಯಲು 10-15 ಒಣ ಮೆಣಸಿನ ಕಾಯಿಯನ್ನು ಅಕ್ಕಿ ಮೂಟೆಯಲ್ಲಿ ತುಂಬಿಸಿಡಬೇಕು.

✪ ಹಾಗಲ, ಕುಂಬಳ, ಸೋರೆ, ಹೀರೇಕಾಯಿ ಬೀಜಗಳನ್ನು ಬೂದಿಯೊಂದಿಗೆ ಬೆರೆಸಿ ಒಣಗಿಸಿ ಶೇಖರಿಸಿದರೆ ಗಿಡಗಳು ಚೆನ್ನಾಗಿ ಬೆಳೆಯುವುದು. ಬೂದಿಯಲ್ಲಿನ ಪೊಟ್ಯಾಷ್ ಅಂಶ ಮುಂದೆ ಗಿಡಗಳಿಗೆ ಬಲಿಷ್ಠತೆಯನ್ನು ಕೊಡಲು ಸಹಕರಿಸುತ್ತದೆ.

ಮಾಹಿತಿ: ಶ್ರೀಮತಿ ಪಾರಿಜಾತಮ್ಮ ಮೂಲ : 'ತೆನಟಗ ' ತೆಲುಗು

ಸಿಹಿ ಮಾವು ಬೇಕೇ ?

ಅನೇಕ ರೈತರಲ್ಲಿ ಇಂದಿಗೂ ಕೂಡಾ ಪಕ್ಷ, ನಕ್ಷತ್ರಗಳಿಗನುಸಾರವಾಗಿ ಗಿಡಮರ ನೆಡುವ ಪರಿಪಾಠ ಇದೆ. ಕಾಕೋರಿಯ ಅಹ್ಮದ್ ಶೇರ್ ಖಾನ್‌ರ ಪ್ರಕಾರ ಹುಣ್ಣಿಮೆಯ ದಿನಗಳಲ್ಲಿ (ಶುಕ್ಲಪಕ್ಷ) ಮಾವಿನ ಗಿಡಗಳನ್ನು ನೆಟ್ಟರೆ ಅವು ಯಾವುದೇ ಕೀಟರೋಗಕ್ಕೆ ತುತ್ತಾಗದೆ ಸಿಹಿಯಾದ ಫಲ ಬಿಡುವುದಂತೆ. ಅನೇಕ ದಿನಗಳವರೆಗೆ ಹಣ್ಣು ಹಾಳಾಗದೆ ಉಳಿಯುವುದಂತೆ.

ಮೂಲ : 'ಸೂಜಬೂಜ್ ಹಿಂದಿ

ಅನುವಾದ : ಅನಿಲ್ ಕೌಶಿಕ್ ಬಿ. ಎ.

ಬಸಳೆ ಮತ್ತು ಬಾಳೆದಿಂಡಿನಿಂದ ರಸರುಚಿ

ಸಂಗ್ರಹ: ವಿದ್ಯಾನಾಯಕ್

❁ *ಬಸಳೆ ಪರೋಟ*

ಬೇಕಾಗುವ ಸಾಮಾಗ್ರಿ : ಬಸಳೆ ಸೊಪ್ಪು 10-20, ಹಸಿಮೆಣಸು 2-3, ಕೊತ್ತಂಬರಿ 1 ಚಮಚ, ಜೀರಿಗೆ 1 ಚಮಚ, ಬಟಾಟೆ, ಗೋಧಿಹಿಟ್ಟು, ಉಪ್ಪು, ಎಣ್ಣೆ.

ವಿಧಾನ : ಉಪ್ಪು ನೀರು, ಗೋಧಿಹಿಟ್ಟು, ಹಾಕಿ, ಚಪಾತಿ ಹಿಟ್ಟನ್ನು ಕಲಸಿಡಿ. ಬಟಾಟೆಯನ್ನು ಬೇಯಿಸಿ ಸಿಪ್ಪೆ ತೆಗೆದಿಡಿ. ಬಸಳೆಯನ್ನು ಸಪೂರ ಹೆಚ್ಚಿಡಿ. ಕೊತ್ತಂಬರಿ, ಜೀರಿಗೆ, ಮೆಣಸನ್ನ ಗುದ್ದಿ ಪುಡಿ ಮಾಡಿ ಬಟಾಟೆಯೊಂದಿಗೆ ಬೆರೆಸಿ ಅದಕ್ಕೆ ಬಸಳೆಯನ್ನು ಸೇರಿಸಿ ಉರುಟು ಉಂಡೆ ಮಾಡಿಟ್ಟುಕೊಳ್ಳಿ. ಸಣ್ಣ ಚಪಾತಿ ಲಟ್ಟಿಸಿಕೊಳ್ಳಿ. ಅದರಲ್ಲಿ ಈ ಉಂಡೆಯಿಟ್ಟು ಪುನಃ ಮಡಚಿ ಹಟ್ಟಿಸಿ ಕಾವಲಿಯಲ್ಲಿ ಸಣ್ಣ ಉರಿಯಲ್ಲಿ ಎಣ್ಣೆ ಹಾಕಿ ಚಪಾತಿಯನ್ನು ಸುಡಬೇಕು.

❁ *ಬಸಳೆ ಸಮೋಸ*

ಮೇಲಿನ ರೀತಿಯಲ್ಲಿ ಹಿಟ್ಟನ್ನು ತಯಾರಿಸಿ, ಸಣ್ಣ ಸಣ್ಣ ಚಪಾತಿಯಲ್ಲಿ ಬಸಳೆ ಮತ್ತು ಬಟಾಟೆಯಿಂದ ತಯಾರಿಸಿದ ಉಂಡೆಯಿಟ್ಟು ಸುತ್ತಲು ಮಡಚಿ ಎಣ್ಣೆಯಲ್ಲಿ ಕರಿಯಬೇಕು. ಗೋಧಿ ಹಿಟ್ಟಿನ ಬದಲು ಮೈದಾ ಉಪಯೋಗಿಸಿದ್ದಲ್ಲಿ ಹೆಚ್ಚು ಗರಿಗರಿ ಆಗಿರುತ್ತದೆ.

❁ *ಬಸಳೆ ಬೋಂಡ*

ಬೇಕಾಗುವ ಸಾಮಾಗ್ರಿ : ಕಡ್ಲೆಹಿಟ್ಟು, ಮೆಣಸಿನ ಪುಡಿ, ಜೀರಿಗೆ, ಉಪ್ಪು, ಬಸಳೆ ಸೊಪ್ಪು.

ವಿಧಾನ : ಕಡ್ಲೆಹಿಟ್ಟಿಗೆ ಮೆಣಸಿನ ಪುಡಿ, ಜೀರಿಗೆ, ಉಪ್ಪು, ನೀರು ಸೇರಿಸಿ ಹದ ದಪ್ಪ ಹಿಟ್ಟು ತಯಾರಿಸಿ. ಇದರಲ್ಲಿ ಬಸಳೆ ಸೊಪ್ಪು ಅದ್ದಿ ಎಣ್ಣೆಯಲ್ಲಿ ಕರೆಯಿರಿ. ಬೇಕಾದಲ್ಲಿ ಈರುಳ್ಳಿ ಸಣ್ಣ ಹಚ್ಚಿ ಹಿಟ್ಟಿಗೆ ಸೇರಿಸಬಹುದು. ಬೋಂಡಾವನ್ನು ಬಿಸಿಯಾಗಿರುವಾಗಲೇ ತಿನ್ನಬೇಕು.

❁ *ಬಸಳೆ ಪಲ್ಯ*

ಬೇಕಾಗುವ ಸಾಮಾಗ್ರಿ : ಬೆಳ್ಳುಳ್ಳಿ, ಎಣ್ಣೆ, ಮೆಣಸು, ಬಸಳೆ, ಹಲಸಿನ ಬೀಜ.

ವಿಧಾನ : ಬಸಳೆಯನ್ನು ಹೆಚ್ಚಬೇಕು. ಹಲಸಿನ ಬೀಜ ಗುದ್ದಿ ಬೇಳೆ ಮಾಡಬೇಕು. ಇದನ್ನು ಉಪ್ಪು ಹಾಕಿ ಬೇಯಿಸಬೇಕು. ಬಳಿಕ ಎಣ್ಣೆಯಲ್ಲಿ ಬೆಳ್ಳುಳ್ಳಿ ಗುದ್ದಿ ಹಾಕಿ. ಮೆಣಸು ಚೂರು ಹಾಕಿ ಒಗ್ಗರಣೆ ಮಾಡಿ ಅದರಲ್ಲಿ ಬೇಯಿಸಿದ ಬಸಳೆ ಹಾಕಿ ಕುದಿಸಬೇಕು. ವಿ.ಸೂ. ಬಸಳೆಯಿಂದ ಪದಾರ್ಥ, ದಾಲ್ ಮಾಡಲು ಆಗುತ್ತದೆ. ಬಸಳೆಯಲ್ಲಿ ವಿಟಮಿನ್ ಎ, ಕಬ್ಬಿಣಾಂಶ ಅಧಿಕವಾಗಿದೆ. ಮಲಬದ್ಧತೆ, ಕಿಪ್ಪಟ್ಟೆ (mumps)ಗೆ ಉತ್ತಮ ಆಹಾರ.

✣ *ಬಾಳೆದಿಂಡಿನ ಇಡ್ಲಿ*

ಬೇಕಾಗುವ ಸಾಮಗ್ರಿ : ಉದ್ದಿನಬೇಳೆ ಅರ್ಧ ಪಾವು, ಹಚ್ಚಿದ ಬಾಳೆದಿಂಡು 1 ಪಾವು, ಬೆಳ್ತಿಗೆ ಅಕ್ಕಿ ಅಥವಾ ಅಕ್ಕಿರವೆ 2 ಪಾವು, ಉಪ್ಪು.

ವಿಧಾನ : ಉದ್ದಿನ ಬೇಳೆಯನ್ನು ಅರ್ಧತಾಸು ನೀರಲ್ಲಿ ನೆನೆಸಬೇಕು. ಬಾಳೆದಿಂಡನ್ನು ಹಚ್ಚಿ ನೂಲು ತೆಗೆಯಬೇಕು. ಬಳಿಕ ಉದ್ದಿನಬೇಳೆ ಮತ್ತು ಬಾಳೆದಿಂಡನ್ನು ರುಬ್ಬಬೇಕು. ಅಕ್ಕಿ ರವೆ ಸೇರಿಸಬೇಕು. ಮರುದಿನ ಇಡ್ಲಿ ಬೇಯಿಸಬೇಕು.

✣ *ಬಾಳೆದಿಂಡಿನ ಚಟ್ನಿ*

ಬೇಕಾಗುವ ಸಾಮಗ್ರಿ: ಹಚ್ಚಿದ ಬಾಳೆದಿಂಡು ಒಂದೂವರೆ ಲೋಟ, ಒಂದು ಹೋಳು ತೆಂಗಿನಕಾಯಿ, ಅರ್ಧ ಇಂಚು ಶುಂಠಿ, ಒಂದು ಸಣ್ಣ ಈರುಳ್ಳಿ, 3-4 ಹುರಿದ ಮೆಣಸು, 1 ಹಸಿಮೆಣಸು, ಉಪ್ಪು.

ವಿಧಾನ: ಬಾಳೆದಿಂಡು, ಮೆಣಸು, ತೆಂಗಿನಕಾಯಿ ಹಾಕಿ ಚಟ್ನಿ ರುಬ್ಬಬೇಕು. ಬಳಿಕ ಶುಂಠಿ, ಈರುಳ್ಳಿ, ಹಸಿಮೆಣಸು ಸಣ್ಣಗೆ ಹಚ್ಚಿ ಬೆರೆಸಬೇಕು.

✣ *ಬಾಳೆದಿಂಡಿನ ಪಲ್ಯ*

ಬೇಕಾಗುವ ಸಾಮಗ್ರಿ: ಹಚ್ಚಿದ ಬಾಳೆದಿಂಡು, 2-4 ಒಣಮೆಣಸು, ಸಾಸಿವೆ 1 ಚಮಚ, ತೆಂಗಿನ ಎಣ್ಣೆ 2-3 ಚಮಚ, ಉಪ್ಪು, ಸಣ್ಣ ತುಂಡು ಬೆಲ್ಲ.

ವಿಧಾನ : ಮೆಣಸು, ಸಾಸಿವೆ, ತೆಂಗಿನ ಎಣ್ಣೆ ಹಾಕಿ ಒಗ್ಗರಣೆ ಇಡಿ. ಬಳಿಕ ಹಚ್ಚಿದ ಬಾಳೆದಿಂಡು, ಉಪ್ಪು, ಬೆಲ್ಲ ಸೇರಿಸಿ ಸಣ್ಣ ಉರಿಯಲ್ಲಿ ಬೇಯಿಸಿ. ಸ್ವಲ್ಪ ತೆಂಗಿನ ತುರಿ ಉದುರಿಸಿ.

ವಿ.ಸೂ. ಬಾಳೆದಿಂಡನ್ನು ಧಾನ್ಯಗಳೊಂದಿಗೆ ಬೆರೆಸಿ ಪದಾರ್ಥ ಮಾಡಬಹುದು. ಬಾಳೆ ದಿಂಡಿನ ಜ್ಯೂಸ್ ತೆಗೆದು ಬೆಲ್ಲ ಅಥವಾ ಜೇನು ತುಪ್ಪ ಸೇರಿಸಿ ಕುಡಿದರೆ ಕೊಬ್ಬು ಕರಗುವುದು. ಒಳ್ಳೆಯ ಕಬ್ಬಿಣಾಂಶವಿರುವ ಆಹಾರ. ಮೂತ್ರಕೋಶದಲ್ಲಿ ಕಲ್ಲು ಇದ್ದಲ್ಲಿ ಕರಗುವುದು. ಬೆನ್ನು ನೋವಿಗೂ ಉತ್ತಮ. ರಕ್ತದೊತ್ತಡವಿರುವವರಿಗೂ, ಸಿಹಿ ಮೂತ್ರದ ಕಾಯಿಲೆಯವರಿಗೂ ಉತ್ತಮ.

✣ *ಬಾಳೆದಿಂಡಿನ ಸಲಾಡ್*

ಬೇಕಾಗುವ ಸಾಮಾಗ್ರಿ : ಹಚ್ಚಿದ ಬಾಳೆದಿಂಡು, ಮೊಸರು 1 ಕಪ್, ಈರುಳ್ಳಿ 1 ಗಡ್ಡೆ, ಹಸಿಮೆಣಸು 2, ಸಾಸಿವೆ, ಉದ್ದಿನಬೇಳೆ ಒಗ್ಗರಣೆಗೆ ಎಣ್ಣೆ.

ವಿಧಾನ : ಮೊಸರಿಗೆ ಬಾಳೆದಿಂಡು, ಈರುಳ್ಳಿ, ಹಸಿಮೆಣಸು, ಸಪೂರ ಹಚ್ಚಿ ಹಾಕಬೇಕು. ಬಳಿಕ ಸಾಸಿವೆ, ಉದ್ದಿನಬೇಳೆ, ಕರಿಬೇವು ಹಾಕಿ ಒಗ್ಗರಣೆ ಹಾಕಬೇಕು.

ಮೂಲ : ನಿಸರ್ಗದತ್ತ ಆಹಾರ,
ಜನಜಾಗೃತಿ ಮಾಲಿಕೆ 10,
ನಾಗರೀಕ ಸೇವಾ ಟ್ರಸ್ಟ್, ಗುರುವಾಯನಕೆರೆ.

ನೆನಪಿಡಿ

ಒಂದು ಕಿ. ಗ್ರಾಂ. ಸಾವಯವ ಉತ್ಪನ್ನವನ್ನು ನೀವು ಸೇವಿಸುವುದರ ಪರಿಣಾಮ ಎಂದರೆ ೨೯ ಎರೆಹುಳುಗಳು, ೨ ಹಾವುಗಳು, ೧೬ ಚಿಟ್ಟೆಗಳು, ೨೦೦ ಜೇನುನೊಣಗಳು, ೫ ಪಕ್ಷಿಗಳು, ೩೩ ಜೇಡಗಳು, ೨ ದನಕರುಗಳು, ೩ ಇಣಚಿಗಳು, ೩೮ ಲೇಸ್‌ವಿಂಗ್ ನೊಣಗಳು, ೧೦೮ ಇರುವೆಗಳು, ೯೬ ಮೀನು, ೮ ಕಪ್ಪೆ, ೫ ಬಾವಲಿ, ೩ ಹಲ್ಲಿ, ೧ ಕಾಡುಬೆಕ್ಕು, ಕೋಟಿ ಕೋಟಿ ಸೂಕ್ಷ್ಮ ಜೀವಿಗಳನ್ನು ಉಳಿಸಿದಂತೆ.

ಕೃಪೆ ಮತ್ತು ಮೂಲ : ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಹಾಸನ ಘಟಕ

ಜೈವಿಕ ತಂತ್ರಜ್ಞಾನದ ಅವಾಂತರಗಳು

ತೇಜಸ್ವಿನಿ ಮತ್ತು ಪ್ರಕಾಶ್ ಟಿ.ಎನ್

'ಟರ್ಮಿನೇಟರ್ ಜೀನ್' ಇರುವ ಗಿಡ ಬಂದಿದೆಯಂತೆ. ನಮ್ಮ ತಳಿಗಳೆಲ್ಲಾ ನಾಶವಾಗುವುದಂತೆ; ಗಿಡ ಕೀಳಿ ಧ್ವಂಸ ಮಾಡಿ ಎನ್ನುವ ಚಳುವಳಿ ಒಂದೆಡೆ. ಇನ್ನೊಂದೆಡೆ ; ಅಲ್ಲಾ ಅದು 'ಟರ್ಮಿನೇಟರ್' ಅಲ್ಲವೇ ಅಲ್ಲ ಅದು 'ಬಿಟಿ' ಗಿಡ. 'ಬಿಟಿ' ಜೀನ್ ಇರುವ ಹತ್ತಿ ಗಿಡ ಅದಕ್ಕೆ ಕಾಯಿಕೊರಕದ ಭಾದೆಯೇ ಇಲ್ಲ ಎನ್ನುವ ಹೇಳಿಕೆಗಳು, ಆಶಾವದಗಳು ಇನ್ನೊಂದೆಡೆ. ಯಾರನ್ನು ನಂಬುವುದು ಯಾರನ್ನು ಬಿಡುವುದು ಎನ್ನುವ ಪ್ರಶ್ನೆ ರೈತನದ್ದು.

ಬೋಲ್ ಗಾರ್ಡ್ / ಬಿಟಿ ಜೀನ್ ಹತ್ತಿ : ಹತ್ತಿ ನೆಟ್ಟ ರೈತನಿಗೆ ಕಾಯಿಕೊರಕದ ಕಾಟ ತಪ್ಪಿದ್ದಲ್ಲ. ಅದನ್ನು ತಡೆಯಲು ಕ್ರಿಮಿನಾಶಕಗಳಿಗೆ ಹಣ ಸುರಿಯುವುದು, ಕೀಟನಾಶಕಕ್ಕೆ ಕೀಟ ಬಗ್ಗದೆ ಬೆಳೆದು ನಿಂತ ಫಸಲು ಹಾಳಾಗುವಾಗ, ಸಾಲಗಾರರ ಕಾಟ ತಾಳಲಾಗದೇ ಕೀಟನಾಶಕವನ್ನೇ ಕುಡಿದು ಆತ್ಮಹತ್ಯೆ ಮಾಡಿಕೊಂಡ ಕಠೋರಚಿತ್ರಣ ಯಾರಿಗೂ ಮನಕರಗಿಸುವಂತಹದ್ದು.

ಈ ಕೀಟನಾಶಕವನ್ನು ಗಿಡವೇ ಉತ್ಪಾದಿಸಿದರೆ ಹೇಗೆ? ಈ ಕನಸಿನ ಫಲವೇ 'ಬೋಲ್ ಗಾರ್ಡ್ ಹತ್ತಿ'. ಬ್ಯಾಸಿಲಿಸ್ ತುರಿಂಜೆನ್‌ಸಿಸ್ *(Bacillus thuringensis)* ಎಂಬ ಸೂಕ್ಷ್ಮಾಣು ಜೀವಿ ಉತ್ಪಾದಿಸುವ ಒಂದು ಪ್ರೋಟೀನ್ ಈ ಕಾಯಿಕೊರಕ ಹಾಗೂ ಇನ್ನಿತರ ಕೆಲವು ಗಿಡಗಳಿಗೆ ವಿಷ.. ಹಾಗಾಗಿ ಈ ಸೂಕ್ಷ್ಮಾಣುಜೀವಿಯನ್ನು ಕೂಡಾ ಕೀಟ ನಾಶಕವಾಗಿ ಬಳಸಲಾಗುತ್ತದೆ. ಈ ಸೂಕ್ಷ್ಮಾಣುಜೀವಿಯಲ್ಲಿರುವ ವಿಷದ 'ಪ್ರೋಟೀನ್' ಉತ್ಪಾದಿಸುವ ಜೀನ್ (Gene) ತೆಗೆದು ಜೈವಿಕ ತಂತ್ರಜ್ಞಾನದಿಂದ (Genetic Engineering) ಹತ್ತಿಗಿಡಕ್ಕೆ ಸೇರಿಸಲಾಯಿತು. ಹೀಗೆ ಹೊಸ ಸೃಷ್ಟಿಯಾದ ಗಿಡ - ಕಾಯಿಕೊರಕದ ಕಾಟ ತಡೆಯುತ್ತದೆ ಎಂಬ ಸಿದ್ಧಾಂತ ಗಿಡ ಉತ್ಪಾದಿಸಿದವರದ್ದು.

ಆದರೆ, ಕಾಯಿಕೊರಕ ನಿಯಂತ್ರಣಕ್ಕಾಗಿ ಮೂಡಿಬಂದ ಈ ಉತ್ತರ ಅಷ್ಟು ಸರಳವಲ್ಲ; ಈ ಪ್ರೋಟೀನ್ ಬರಿ ಕಾಯಿಕೊರಕಕ್ಕೆ ಮಾತ್ರ ಹಾನಿಕಾರಕವೆ ಅದನ್ನು ತಿಂದ ಬೇರೆ ಕೀಟಗಳ ಪರಿಸ್ಥಿತಿ ಏನು ? ಅಂತಹ ಹತ್ತಿ ಗಿಡ, ಹತ್ತಿ ಬೀಜದ ಹಿಂಡಿ ತಿಂದ ಪಶುಗಳ ಸ್ಥಿತಿ ಏನು ? ಏನೂ ತೊಂದರೆ ಇಲ್ಲ ಎನ್ನುವುದು ಈ ಹತ್ತಿಗಿಡ ಕೊಟ್ಟವರ ಸರಳವಾದ ಸಮಜಾಯಿಷಿ.

ಅಮೇರಿಕಾದಲ್ಲಿ ಸಾಕಷ್ಟು ವಾದ ಪ್ರತಿವಾದಗಳ ನಂತರ 1995 ರಲ್ಲಿ ಇದು ರೈತರ ಹೊಲಗಳಿಗೆ ಪ್ರವೇಶ ಮಾಡಿತು. ಕ್ರಿಮಿನಾಶಕಕ್ಕೆ ಸುರಿಯುವ ಹಣ ನಿಮಗೆ ಕಡಿಮೆಯಾಗುತ್ತದೆಂದು ಹೇಳಿ ಹೆಚ್ಚಿನ ಬೆಲೆಗೆ ಮೊನ್ಸಾಂಟೊ ಎಂಬ ಬಹುದೇಶೀಯ ಸಂಸ್ಥೆ ರೈತರಿಗೆ ಈ ಬೀಜಗಳನ್ನು ಮಾರಾಟ ಮಾಡಿತು. ಆದರೆ ಕಂಪೆನಿ ಹೇಳಿದ ಮಾತನ್ನು ಪ್ರಕೃತಿ ಕೇಳಬೇಕಲ್ಲ? 1996 ರಲ್ಲಿ ಕಾಯಿಕೊರಕದ ಕಾಟ ತೀವ್ರವಾಗಿ ರೈತರು ಕೊನೆಗೂ ಕೀಟನಾಶಕಕ್ಕೆ ಮೊರೆ ಹೋಗಲೇ ಬೇಕಾಯಿತು. ಬೀಜಕ್ಕೆ ಕೊಟ್ಟ ದುಡ್ಡು ಜಾಸ್ತಿ ಜೊತೆಗೆ ಕೀಟನಾಶಕಕ್ಕೂ ಕೊಟ್ಟ ದುಡ್ಡು ರೈತರೇನು ಮಾಡಬೇಕು ? ತಪ್ಪೆಲ್ಲಾ ಪ್ರಕೃತಿಯದ್ದು ನಮ್ಮ ತಳಿಯದ್ದಲ್ಲ ಎಂದರು ಬೀಜದ ಕಂಪನಿಯವರು. ಅಮೇರಿಕಾದ ರೈತರು ಸಾಮಾನ್ಯದವರೇ ? ನ್ಯಾಯಾಲಯದ ಮೆಟ್ಟಿಲು ಹತ್ತಿದರು. ನ್ಯಾಯಾಲಯದ ತೀರ್ಪು ಹೊರಬಿದ್ದಾಗ ಮೊನ್ಸಾಂಟೊ ಕಂಪೆನಿ ರೈತರಿಗೆ ಹಣ ತೆರಲೇ ಬೇಕಾಯಿತು.

ಇರುವ ಕಷ್ಟಕೋಟಲೆಗಳೊಂದಿಗೆ ನಮ್ಮ ಬಡರೈತರು ನ್ಯಾಯಾಲಯಕ್ಕೂ ಎಡತಾಕ ಬೇಕಾದೀತೆ ? ಇಷ್ಟೇ ಅಲ್ಲ, ಪ್ರಕೃತಿಯಲ್ಲಿ ಜರುಗುವ ಪ್ರಕ್ರಿಯೆಗಳು ಬಹಳ ಸಂಕೀರ್ಣವಾದವು. ಕೀಟಗಳು ಬಹುಬೇಗ ಹೊಸರೀತಿಯಾಗಿ ಮಾರ್ಪಾಡು ಗೊಳ್ಳಬಲ್ಲವು. ಅರ್ಥಾತ್ ; ಗಿಡ, ಕೀಟ ಕೊಲ್ಲುವ ಪ್ರೋಟೀನ್ ಉತ್ಪಾದಿಸಿದರೆ, ಅದಕ್ಕೆ ಪ್ರತಿಯಾಗಿ ಕೀಟ ಆ ಪ್ರೋಟೀನ್ ನಾಶಪಡಿಸುವ ಶಕ್ತಿ ಬೆಳೆಸಿಕೊಳ್ಳಬಲ್ಲವು. ಹೀಗೆ ಹಿಂದೆ 'ಬಿಟಿ' ಕೀಟನಾಶಕವಾಗಿ ಬಳಸಿದಾಗ ಅದಕ್ಕೆ ಪ್ರತಿಯಾಗಿ ಕೀಟಗಳು ಪ್ರತಿರೋಧ ಶಕ್ತಿ ಬೆಳೆಸಿಕೊಂಡ ಬಗ್ಗೆ ಸಾಕಷ್ಟು ಸಾಕ್ಷ್ಯಾಧಾರಗಳಿವೆ. ಹಾಗಾಗಿ, ನಿಮ್ಮ 'ಬಿಟಿ' ಗಿಡ ಇಂತಹ ಸಮಸ್ಯೆ ತರುತ್ತದೆಂದು ಅಮೇರಿಕಾದ ಸರಕಾರಿ ಸಂಸ್ಥೆಗಳು ತಡೆಯೊಡ್ಡಿದಾಗ, ಮೊನ್ಸಾಂಟೊ ಕಂಪನಿ ಒಂದು ಒಪ್ಪಂದಕ್ಕೆ ಬಂದಿತು. ಇಂತಹ 'ಪರಿವರ್ತಿತ ತಳಿ' ಬಿತ್ತನೆ ಮಾಡಿದಾಗ ಅದರ ಬಳಿ ಶೇಕಡಾ 25 ಭಾಗದಲ್ಲಿ ಸಾಧಾರಣ ತಳಿ ಬಳಸಬೇಕು ಮಾತ್ರವಲ್ಲ; ಅದರಲ್ಲಿ ಕನಿಷ್ಟ ಪ್ರಮಾಣದಲ್ಲಿ ಕೀಟನಾಶಕ ಬಳಸಬೇಕು ಅಥವಾ ಶೇಕಡಾ 4 ಭಾಗದಲ್ಲಿ ಬೇರೆ ತಳಿ ಬಳಸಿ ಅದಕ್ಕೆ ಯಾವುದೇ ರೀತಿಯ ಕೀಟನಾಶಕ ಬಳಸಲೇಕೂಡದು. ಹಾಗಾದಲ್ಲಿ ಕೀಟಕ್ಕೂ ಸಾಕಷ್ಟು ಊಟ ಸಿಕ್ಕಿ ಅದು ಮಾರ್ಪಾಡು ಹೊಂದುವ ಪ್ರಯತ್ನಕ್ಕಿಳಿಯುವುದಿಲ್ಲ. ಇದೊಂದು ರೀತಿಯಲ್ಲಿ ರಾಜಿಯ ಮಾತಾದರೂ ಒಪ್ಪುವ ವಿಚಾರವೇ ಸರಿ.

ಆದರೆ, ನೂರಾರು ಎಕರೆ ಜಮೀನಿರುವ ಅಮೇರಿಕಾದ ರೈತನೇನೋ ಶೇಕಡಾ 25 ಭಾಗ ಬೇರೆ ಬೆಳೆಯಬಹುದು. ಆದರೆ, ಒಂದೆರಡು ಗುಂಟೆಗಳೋ, ಎಕರೆಯೋ ಇರುವ ನಮ್ಮ ಬಡರೈತರೇನು ಮಾಡಬೇಕು ? ಹಳ್ಳಿಯಲ್ಲೇನು ಎಲ್ಲರಿಗೂ ಜಾಸ್ತಿ ಬೆಲೆಯ ಬೀಜಕೊಳ್ಳುವ ಶಕ್ತಿ ಇರುತ್ತದೆಯೇ? ಒಂದೆರಡು ರೈತರು ಕೊಂಡಾರು, ಉಳಿದ ಜಾಗದಲ್ಲಿ ಹೇಗಾದರೂ ಸಾಧಾರಣ ತಳಿಗಳಿರುತ್ತವಲ್ಲ; ಕೀಟಕ್ಕೆ ಊಟಕ್ಕೆ ಅಂತಹ ಹೊಲಗಳು ಸಾಕಲ್ಲ. ತಂತ್ರಜ್ಞಾನವೇನೊ ಸರಿ. ಆದರೆ ಶ್ರೀಮಂತ ರೈತ ಹೆಚ್ಚು ಬೆಲೆಯ ಈ ಬೀಜ ಬಳಸಿ ಬೆಳೆ ತೆಗೆದು ಸಿರಿವಂತನಾಗಬಹುದು. ಆದರೆ ಬಡ ರೈತನ ಪೈರಿನ ಮೇಲೆ ಕೀಟ ದಾಳಿ ಅಧಿಕವಾದಲ್ಲಿ ಆತನ ಬದುಕುವ ಅಧಿಕಾರ ಕೂಡ ಕಿತ್ತುಕೊಂಡಂತಲ್ಲವೇ.

ಹೀಗೆ ತಂತ್ರಜ್ಞಾನದ ಆವಿಷ್ಕಾರ ಕೇವಲ ಕ್ಷುಲ್ಲಕ ಲಾಭಾಂಶದ ಮೇಲೆ ಒತ್ತು ಕೊಟ್ಟಲ್ಲಿ, ಎಂತೆಂತಹಾ ಪರಿಸರ, ಸಾಮಾಜಿಕ ಸಮಸ್ಯೆಗಳಿಗೆ ಕಾರಣವಾಗುವ ಸಾಧ್ಯತೆಗಳಿವೆ ಎಂದು ಈ ಬಿಟಿ ತಂತ್ರಜ್ಞಾನ ವೆಂಬುದು ಮೇಲ್ನೋಟಕ್ಕಾದರೂ ಸಾಬೀತು ಮಾಡುತ್ತಿದೆ. ಇವೆಲ್ಲಾ ಇದಕ್ಕೂ ಭೀಕರ ವಾದಂತಹ 'ಬಂಜೆ ಬೀಜದ' (Sterile seed) ಸೃಷ್ಠಿಗೆ ಇಂಬು ಕೊಡುವ ಆ ಬೀಜಾಂತಕ (Terminater Gene) ತಂತ್ರಜ್ಞಾನಕ್ಕೆ ಪೀಠಿಕೆಯಂತೆ.

ಬೀಜಾಂತಕ (Terminater) ತಂತ್ರಜ್ಞಾನ

ನಾವು ಅತ್ಯುತ್ತಮ ಬೀಜ ಉತ್ಪಾದಿಸಿ ಕೊಡುತ್ತೇವೆ. ಇದರಿಂದ ನಿಮಗೆ ಉತ್ತಮ ಇಳುವರಿ, ಲಾಭ ಎಲ್ಲಾ ಬರುತ್ತದೆ ಹಾಗಂತ, ಒಮ್ಮೆ ನಮ್ಮಿಂದ ಈ ಬೀಜವನ್ನು ಕೊಂಡು ನೀವು ನಮಗೆ ಬೆನ್ನುಹಾಕಿ ಕೂರುವುದೆ ? ಎಂಬ ಸಂಕುಚಿತ ವ್ಯಾವಹಾರಿಕ ದೃಷ್ಟಿಕೋನ ಪಶ್ಚಿಮದ ಉದ್ದಿಮೆದಾರರಿಗೇನೂ ಹೊಸತಲ್ಲ. ಇದಕ್ಕೆ ಜೈವಿಕ ತಂತ್ರಜ್ಞಾನ ಎಂಬ ಕಳೆದ ದಶಕದ ಅತ್ಯಂತ ಆಧುನಿಕ ತಾಂತ್ರಿಕ ಅವಿಷ್ಕಾರದ ಚೌಕಟ್ಟಿನೊಳಗಿಂದ ಮೂಡಿಬಂದ ಈ ಬೀಜಾಂತಕ ತಂತ್ರಜ್ಞಾನ ಮತ್ತಷ್ಟು ಇಂಬು ನೀಡುವಂತಾಗಿದೆ.

ಇದರ ನಿಯಮ ಅರಿಯಲು ಸರಳವೂ, ಸುಲಭವೂ ಆಗಿದೆ. ಒಂದು ಸಸ್ಯ ಸೃಷ್ಠಿಸುವ ಬೀಜದೊಳಗೆ ಅದರ ಭ್ರೂಣವನ್ನೇ ನಾಶಮಾಡುವ ಗುಣಾಣುಗಳನ್ನು (Genes) ಸೇರಿಸಿದ್ದೇ ಆದಲ್ಲಿ, ಈ ಬೀಜ ನೋಡಲು ಸ್ವಾಭಾವಿಕವಾಗಿದ್ದರೂ, ಮತ್ತೆ ಮೊಳಕೆ ಯೊಡೆಯುವುದು ಅಸಾಧ್ಯ ವಾಗಿರುತ್ತದೆ. ಈ ನಿಟ್ಟಿನಲ್ಲಿ ಕೆಲಸಮಾಡುವ ಮೂರು ಗುಣಾಣುಗಳನ್ನು ಬೇರೆ ಬೇರೆ ಜೀವಿಗಳಿಂದ - ಅದು ಸಸ್ಯ, ಸೂಕ್ಷ್ಮ ಜೀವಿಗಳಿರಬಹುದು ಅಥವಾ ಕ್ರಿಮಿಕೀಟವೂ ಆಗಿರಬಹುದು ; ಕತ್ತರಿಸಿ ತೆಗೆದು, ಜೋಡಿಸಿ, ತಮಗೆ ಬೇಕಾದ ಬೀಜದೊಳಗೆ ಸೇರಿಸುವ ಜೈವಿಕ ತಾಂತ್ರಿಕತೆ ಒಂದು ಪವಾಡವೇ ಸರಿ. ಇದರಲ್ಲಿ ಆ ಪಶ್ಚಿಮದ ವಿಜ್ಞಾನಿಗಳು ಯಶಸ್ವಿಯಾಗಿದ್ದು ಮನುಕುಲಕ್ಕೆ ಒಂದು ವರವೇ ಅಥವಾ ಶಾಪವೇ ಎಂದು ಕಾದು ನೋಡಬೇಕಾಗಿದೆ. ಅದೇನೇ ಇರಲಿ, ಈ ರೀತಿಯ ಬೀಜಕ್ಕೆ ಟೆಟ್ರಾಸೈಕ್ಲಿನ್ ಎಂಬ ರಾಸಾಯನಿಕ ವಸ್ತುವಿನಿಂದ ಉಪಚರಿಸಿದಾಗ ಇದರಲ್ಲಿ ಒಂದು ಗುಣಾಣು ಕೆಲಸ ಮಾಡಲು ಅಸಾಧ್ಯವಾಗುವ ರೀತಿ ಸಂಯೋಜಿಸಲಾಗಿದೆ. ಈ ಒಂದು ಗುಣಾಣು ಕೆಲಸ ನಿಲ್ಲಿಸಿದರೆ, ಅಥವಾ ಇದರ ಹಿಡಿತ ತಪ್ಪಿದರೆ ಬೇರೆಲ್ಲಾ ಒಂದರ ಹಿಂದೆ ಒಂದು ಸರಪಳಿಯಂತೆ ವರ್ತಿಸಿ ಬೀಜದ ಭ್ರೂಣವನ್ನೇ ಕೊಲ್ಲುವಂತಹ ಮರಣಾಂತಕ ಪ್ರಕ್ರಿಯೆ ಇಲ್ಲಿ ಆರಂಭವಾಗಲಿದೆ. ಕಂಪೆನಿಯವರು ಬೀಜ ಮಾರಾಟಕ್ಕೆ ಮೊದಲು ಈ ಬೀಜೊಪಚಾರದ ಕೆಲಸ ಮಾಡಿದರೆ ಸಾಕು. ಈ ಬೀಜ ಮಾತ್ರ ಮೊಳಕೆ ಬರುತ್ತದೆ. ಮುಂದೆ ಅದರಿಂದ ಉತ್ಪನ್ನವಾಗುವ ಬೀಜಗಳು ಮೊಳಕೆ ಬರುವುದಿಲ್ಲ. ಬೀಜೋಪಚಾರಕ್ಕೆ ಟೆಟ್ರಾಸೈಕ್ಲಿನ್ ಬದಲು ಸಕ್ಕರೆ ಬಳಸಿದರೂ ಇದೇ ಫಲಿತಾಂಶ ನಿಶ್ಚಿತವಂತೆ.

ಈ ರೀತಿ ರೈತ ಪ್ರತೀ ಸಲವೂ ಬೀಜ ಕಂಪನಿಗೆ ಬೀಜ ಕೊಳ್ಳಲು ಓಡಿ ಬರಬೇಕೆನ್ನುವ ಕನಸಿಗೆ ಸಾಕಾರವಾಗಿ ಬಂದ ಬಂಜೆ ಬೀಜ ಉತ್ಪಾದಿಸುವ ಈ ತಂತ್ರಜ್ಞಾನಕ್ಕೆ "ಟರ್ಮಿನೇಟರ್ ತಂತ್ರಜ್ಞಾನ" ಎಂದು ಸಾಂಕೇತಿಕವಾಗಿ ನಾಮಕರಣ ಮಾಡಲಾಗಿದೆ.

ಹೈಬ್ರಿಡ್ ಬೀಜವನ್ನು ಮತ್ತೆ ಮತ್ತೆ ಉಪಯೋಗಿಸಬಹುದಾದರೂ ಅದೇ ಪ್ರಮಾಣದ ಇಳುವರಿ ಬೇಕಾದರೆ ರೈತ ಬೀಜ ಹೊಸದಾಗಿ ಕೊಳ್ಳಲೇ ಬೇಕು. ಅದೇ ಅಧಿಕ ಇಳುವರಿಯ ತಳಿಗಳು ಹಾಗಲ್ಲ ; ಒಮ್ಮೆ ಕೊಂಡರೆ ಸದಾ ಉಪಯೋಗಿಸುತ್ತಿರಬಹುದು. ಸ್ವಕೀಯ ಪರಾಗಸ್ಪರ್ಶ (Self pollination) ಇರುವ ಭತ್ತ, ರಾಗಿಗಳಂತಹ ಆಹಾರ ಧಾನ್ಯಗಳಲ್ಲಿ ಒಮ್ಮೆ ರೈತ ಅಧಿಕ ಇಳುವರಿ ತಳಿಗಳ ಬೀಜ ಕೊಂಡರೆ ಮತ್ತೆ ಬೀಜ ಕೊಳ್ಳುವ ಅಗತ್ಯವಿಲ್ಲ. ಏಕೆಂದರೆ, ಈ ಸಸ್ಯಗಳು ಉತ್ಪಾದಿಸುವ ಬೀಜಗಳು ಆ ಗುಣವನ್ನು ಉಳಿಸಿಕೊಂಡಿರುತ್ತವೆ. ಹೀಗಾಗಿ ಖಾಸಗಿ ಕಂಪೆನಿಗಳಿಗೆ ಅಧಿಕ ಇಳುವರಿಯ ತಳಿಗಳನ್ನು ಉತ್ಪಾದಿಸುವುದರಲ್ಲಿ ಆಸಕ್ತಿಯೇ ಇಲ್ಲ. ಹಾಗಾಗಿಯೇ ಮಾನವಕುಲಕ್ಕೆ ಆಹಾರ ನೀಡುವ ಆಹಾರಧಾನ್ಯಗಳತ್ತ ಈ ದೊಡ್ಡ ಬೀಜ ಕಂಪೆನಿಗಳು ಈವರೆಗೂ ಹೆಚ್ಚು ಉತ್ಸಾಹ ತೋರಿರಲಿಲ್ಲ. ಹೈಬ್ರಿಡ್ ತಳಿಗಳನ್ನು ರೈತರು ಮತ್ತೆ ಮತ್ತೆ ಉಪಯೋಗಿಸುವ ಸಾಧ್ಯತೆಯಿರುವುದರಿಂದ ಅವುಗಳ ಮೇಲೂ ಆಸಕ್ತಿ ಕಡಿಮೆಆಗಿದೆ. ಈಗ, ಈ ಟರ್ಮಿನೇಟರ್ ತಂತ್ರಜ್ಞಾನವನ್ನು ಬಳಸಿ ಸ್ವಕೀಯ ಪರಾಗಸ್ಪರ್ಶ (Self pollination)ದ ಸಸ್ಯಗಳಲ್ಲಿ ಕೂಡಾ ಬೀಜಕಂಪೆನಿಗಳು ಲಾಭ ಮಾಡಬಹುದು ಎಂಬ ಆಸೆ ಚಿಗುರಿದೆ. ಈ ತಂತ್ರಜ್ಞಾನ, ಬೀಜೋತ್ಪಾದನೆಯಲ್ಲಿ ಒಂದು ಆಯುಧ ಇದ್ದಂತೆ. ಆದರೆ ಈ ತಂತ್ರಜ್ಞಾನದಲ್ಲಿ ಇಳುವರಿ ಅಧಿಕವಾಗುವಂತಹ ಯಾವುದೇ ಅಂಶವೂ ಇಲ್ಲ. ಬದಲಿಗೆ ತಮ್ಮ ತಳಿಗಳ ಮೇಲೆ ಅಧಿಕಾರದ ಮುದ್ರೆಯೊತ್ತುವ, ತಂತ್ರಜ್ಞಾನ ಇದು. ಈ ತಂತ್ರಜ್ಞಾನದ ಗುಣಾಣುಗಳನ್ನು ಯಾವುದೇ ತಳಿಗೂ ಸೇರಿಸಿ ತಮ್ಮ ಮುಷ್ಠಿಯಲ್ಲಿಟ್ಟು ಕೊಳ್ಳುವ ಅವಕಾಶವಿದೆ.

ಈ ತಂತ್ರಜ್ಞಾನವನ್ನು ರೂಪಿಸಿದ್ದು ಅಮೇರಿಕಾದ ಕೃಷಿ ಇಲಾಖೆ ಹಾಗೂ "ಡೆಲ್ಟಾ ಮತ್ತು ಪೈನ್ ಲ್ಯಾಂಡ್" ಎನ್ನುವ ಒಂದು ಖಾಸಗಿ ಸಂಸ್ಥೆ. ಮಾರ್ಚ್ 1998ರಲ್ಲಿ ಈ ತಂತ್ರಜ್ಞಾನದ ಮೇಲಿನ ಸಂಪೂರ್ಣ ಹಕ್ಕನ್ನು ಡೆಲ್ಟ ಪೈನ್‌ಲ್ಯಾಂಡ್ ಕಂಪೆನಿಯೇ ಪಡೆದುಕೊಂಡಿದೆ. ಮೇ 1998 ರಲ್ಲಿ ಜಗತ್ತಿನ ಅತಿದೊಡ್ಡ ಬೀಜ ಮಾರಾಟ ಸಂಸ್ಥೆ 1.9 ಬಿಲಿಯನ್ ಅಮೇರಿಕನ್ ಡಾಲರ್‌ಗಳಿಗೆ ತಾನು ಡೆಲ್ಟಾ ಮತ್ತು ಪೈನ್‌ಲ್ಯಾಂಡ್ ಕಂಪನಿಯನ್ನು ಕೊಂಡುಕೊಳ್ಳುವುದಾಗಿ ಹೇಳಿಕೆ ನೀಡಿತು. ಒಟ್ಟಿನಲ್ಲಿ ತಂತ್ರಜ್ಞಾನದ ಸಂಪೂರ್ಣ ಲಾಭ ಪಡೆದುಕೊಳ್ಳಲು ಎಲ್ಲರಿಗೂ ಆಸಕ್ತಿ.

ಇಂತಹ ಬೀಜಗಳು ಬಂದರೆ ಏನಾಗಬಹುದು? ಪರಕೀಯ ಪರಾಗಸ್ಪರ್ಶ ನಡೆಯುವಾಗ, ಸುತ್ತಮುತ್ತಲಿನ ಇತರ ತಳಿಗಳಿಗೂ ಇದು ಪ್ರಸರಣವಾದರೆ? ನಮ್ಮ ಸ್ಥಳೀಯ ತಳಿಗಳೆಲ್ಲಾ ಬಂಜೆಯಾದರೆ ? ಇಡೀ ರೈತಜನಾಂಗವೆಲ್ಲಾ ಖಾಸಗಿ ಬೀಜ ಕಂಪನಿಗಳ ಕಪಿ ಮುಷ್ಟಿಯೊಳಗೆ, ಎನ್ನುವುದು ಪರಿಸರ ವಾದಿಗಳ, ರೈತಸಂಘದ ಮುಂದಾಳುಗಳ ಆತಂಕ. ಪ್ರಕೃತಿಯಲ್ಲಿ ಸಹಜವಾಗಿ ನಡೆಯುವ ಪರಾಗಸ್ಪರ್ಶ ಕ್ರಿಯೆಯಲ್ಲಿ ಈ ರೀತಿ ಬಂಜೆತನ ಸೃಷ್ಟಿಸುವ 3 ಗುಣಾಣುಗಳೂ ಒಟ್ಟಾಗಿ ಸೇರಿ ಹೋಗುವ ಸಾಧ್ಯತೆ, ಹೋದರೂ, ಅಳಿಯದೇ ಉಳಿಯುವ ಸಾಧ್ಯತೆಗಳು ಕಡಿಮೆ. ಆದರೆ, ಇವು ಪ್ರಕೃತಿಯಲ್ಲಿನ ಸಹಜ ಗುಣಾಂಶಗಳಲ್ಲ. ಬೇರೆ ಬೇರೆ ಜೀವಿಗಳಿಂದ ಕತ್ತರಿಸಿ ತೆಗೆದು ಜೋಡಿಸಿದ ಪಾಶವೀ ಶಕ್ತಿಯ ದೈತ್ಯ ಗುಣಾಂಶಗಳು, ಹೇಗೆ ವರ್ತಿಸುವವೋ ಗೊತ್ತಿಲ್ಲ. ಪುರಾಣದ ರಾಕ್ಷಸರಂತೆ ಸೃಷ್ಠಿಸಿದವರ ಅಂಕೆಯನ್ನೂ ಮೀರಿ ಹುಚ್ಚಾಟವೆಬ್ಬಿಸುವವೋ ಎನ್ನುವುದು ಎಲ್ಲರ ಆತಂಕದ ಪ್ರಶ್ನೆ.

"ದೇಸಿ" ಗ್ರಾಮೋದ್ಯೋಗಕ್ಕೊಂದು ಬರವಸೆ :

ದೇಸಿ ಇದೊಂದು ಮಾರಾಟ ಮಳಿಗೆ. ಮಲೆನಾಡಿನ ಭೀಮನಕೋಣೆ ಎಂಬ ಗ್ರಾಮದಲ್ಲಿ ಗ್ರಾಮೀಣ ಬಡ ಮಹಿಳೆಯರು ನಡೆಸುತ್ತಿರುವ ಚರಕ ಗ್ರಾಮೋದ್ಯೋಗ ಘಟಕದೊಂದಿಗೆ ಇದು ಕೆಲಸ ಮಾಡುತ್ತಿದೆ. ಚರಕದಲ್ಲಿ ಕೈಮಗ್ಗದ ಹತ್ತಿಬಟ್ಟೆಯಿಂದ ತಯಾರಿಸಿದ ಜುಬ್ಬ, ಪಾಯಿಜಾಮ ಇತ್ಯಾದಿ ವಸ್ತುಗಳನ್ನು ಇಲ್ಲಿ ಮಾರಾಟ ಮಾಡಲಾಗುತ್ತಿದೆ. ಮಾರಾಟ ಮಳಿಗೆ ನಡೆಸುವುದರೊಟ್ಟಿಗೆ ದೇಸಿಯ ಇತರ ಕಾರ್ಯಚಟುವಟಿಕೆಗಳೆಂದರೆ, ಸ್ವದೇಶಿ ಚಳುವಳಿಯಲ್ಲಿ ಆಸಕ್ತರಾದ ಗುಂಪುಗಳಿಗೆ ಮಾರುಕಟ್ಟೆ ಒದಗಿಸುವುದು, ತರಬೇತಿ ಕಾರ್ಯಾಗಾರ ನಡೆಸುವುದು, ವಿನ್ಯಾಸ, ತಂತ್ರಜ್ಞಾನ ಹಾಗೂ ಪ್ರಚಾರ ಕಾರ್ಯದ ಬಗ್ಗೆ ಮಾಹಿತಿ ನೀಡುವುದು ಇತ್ಯಾದಿ.

ವಿಳಾಸ: *ದೇಸಿ, ನಂ. 94/1, 16ನೇ ಅಡ್ಡ ರಸ್ತೆ, ವೆಸ್ಟ್‌ಪಾರ್ಕ ರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 005.*

ಅರಳೀಕಟ್ಟೆ

ದಿನಾಂಕ 25-10-98 ರಂದು ಚನ್ನರಾಯ ಪಟ್ಟಣ ತಾಲ್ಲೂಕಿನ ಡಿ.ಬಸವರಾಜರವರ ಕಲ್ಪಶ್ರೀ ತೋಟದಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಹಾಸನ ಘಟಕ ಇವರು ಪರಿಸರ ಪ್ರಿಯ ಕೃಷಿಕರ 24ನೇ ಸಭೆಯನ್ನು ಏರ್ಪಡಿಸಿದ್ದರು. ಸಭೆ ನಡೆದ ಕಲ್ಪಶ್ರೀ ತೋಟವೇ ಸಾವಯವ ಕೃಷಿಯ ಜೀವಂತ ನಿದರ್ಶನ. ಸಾವಯವ ರೀತಿಯಲ್ಲಿ ಬೆಳೆದಿರುವ ತೆಂಗು, ಕೃಷಿ ಅರಣ್ಯದ ಅಳವಡಿಕೆ, ಸಸ್ಯ ಬದುಗಳಿಗೆ ಪ್ರಾಮುಖ್ಯತೆ, ಸಾವಯವ ರೀತಿಯಲ್ಲಿ ಗೊಬ್ಬರದ ತಯಾರಿಕೆಯ ಸುಲಭ ವಿಧಾನಗಳು, ಔಷಧಿ ಸಸ್ಯಗಳ ಕೃಷಿ, ತೆಂಗಿನ ನಾರಿನ ಹುಡಿಯ ಸಮರ್ಥ ಬಳಕೆ, ಗ್ಲಿರಿಸೀಡಿಯಾ ಗಿಡಗಳ ವಿಶೇಷ ಸಾಗುವಳಿ, ಎರೆಹುಳು ಸಂತಾನಾಭಿವೃದ್ಧಿಗೆ ಒತ್ತು ಇವೆಲ್ಲಾ ಕಲ್ಪಶ್ರೀ ತೋಟದ ಸಾವಯವ ಕೃಷಿಯ ಅನುಭವಗಳು.

ದಿನಾಂಕ 18, ಅಕ್ಟೋಬರ 1998 ರಂದು ಮೈಸೂರಿನಲ್ಲಿ ನೇಸರ ಸಾವಯವ ಸೇವಾ ಸಂಸ್ಥೆಯ ನೂತನ ಕ್ಷೇತ್ರದ ಉದ್ಘಾಟನೆ ಜೊತೆಗೆ ನೇಸರ ಪತ್ರಿಕೆಯ ಬಿಡುಗಡೆ. ನೇಸರದ ದೃಷ್ಟಿಯಲ್ಲಿರುವ ಕಾರ್ಯಕ್ರಮಗಳು ಹಲವು 1. ಸಾವಯವ ಉತ್ಪನ್ನಗಳ ಸಂಗ್ರಹಣೆ ಮತ್ತು ವಿತರಣೆ. 2. ಗ್ರಾಹಕ ಹಾಗೂ ಕೃಷಿಕ ಜಾಗೃತಿಕ ಸಂಪರ್ಕ ಸಭೆಗಳು. 3. ನಿಯಕತಾಲಿಕ ಪತ್ರಿಕಾ ಪ್ರಕಟಣೆ. 4. ಮಾಹಿತಿ ಕೇಂದ್ರದ ಸ್ಥಾಪನೆ. 5. ಸರಳ ತಂತ್ರಜ್ಞಾನದ ವರ್ಗಾವಣೆ. 6. ಪ್ರಕೃತಿಯನ್ನು ಬಲಪಡಿಸಬಲ್ಲ ಸಸ್ಯವಾಟಿ. *ನೇಸರ ಸಾವಯವ ಸೇವಾ ಸಂಸ್ಥೆ, ನರಸರಾಜ ರಸ್ತೆ, ಚಾಮರಾಜಪುರಂ, ಮೈಸೂರು -570005.*

ದಿನಾಂಕ 29-11-98 ರಂದು ಬೇಲೂರು ತಾಲ್ಲೂಕಿನ ಸಂಪಿಗೆ ಮರದ ಕೊಪ್ಪಲಿನ ಶ್ರೀ ಅಚ್ಚೇಗೌಡರ ಬೂದೇಶ್ವರ ಫಾರಂ ನಲ್ಲಿ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಹಾಸನ ಘಟಕದವರು ಪರಿಸರ ಪ್ರಿಯ ಕೃಷಿಕರ 25ನೇ ಸಭೆಯನ್ನು ಏರ್ಪಡಿಸಿದ್ದರು. ಈ ಬೆಳ್ಳಿಹಬ್ಬದ ಸಭೆಯಲ್ಲಿ ಸುಸ್ಥಿರ ಬದುಕಿಗೆ ಚಿಕ್ಕ ಭೂ ಸಾಗುವಳಿ ಯೋಜನೆಯ ಉದ್ಘಾಟನೆಯೂ ನಡೆಯಿತು.

ದಿನಾಂಕ 14 ರಿಂದ 16 ಅಕ್ಟೋಬರ್ ನವರೆಗೆ ಚಿತ್ರದುರ್ಗದ ಶ್ರೀ ಮುರುಘರಾಜೇಂದ್ರ ಮಠದಲ್ಲಿ ಮೂರನೇ ಕರ್ನಾಟಕ ರಾಜ್ಯ ಮಟ್ಟದ ನಾಟಿ ವೈದ್ಯರ ಸಮ್ಮೇಳನ ನಡೆಯಿತು. ಈ ಸಂದರ್ಭದಲ್ಲಿ ನಾಟಿ ವೈದ್ಯ ರತ್ನ ಪ್ರಶಸ್ತಿಯನ್ನೂ ವಿತರಣೆ ಮಾಡಲಾಯಿತು.

ದಿನಾಂಕ 15-11-98 ರಂದು ಮೈಸೂರಿನ ಜೀವಧಾರಕ ಕೃಷಿ ಕೂಟದ ಎಂಟನೇ ಸಭೆ ನಡೆಯಿತು. ಅ.ನ. ಯಲ್ಲಪ್ಪ ರೆಡ್ಡಿಯವರಿಂದ ಸಾವಯವ ಕೃಷಿ, ನೆಲಜಲ ಸಂರಕ್ಷಣೆ, ಮರಗಳ ಬಗ್ಗೆ ವಿಚಾರ ಮಂಡನೆಯ ಜೊತೆಗೆ, ಭಾರತೀಯ ಪ್ರಾಣಿದಯಾ ಸಂಘ, ಬೆಂಗಳೂರು ಘಟಕದ ವಿ.ಶ್ರೀನಿವಾಸಮೂರ್ತಿಯವರಿಂದ ಪರಿಸರ ರಕ್ಷಣೆ ಸಾವಯವ ಕೃಷಿಯಲ್ಲಿ ಪ್ರಾಣಿಗಳ ಪಾತ್ರ ಹಾಗೂ ಸಸ್ಯಾಹಾರದ ಮಹತ್ವದ ಕುರಿತಾದ ಭಾಷಣದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಹೊನ್ನೇರು - 98

ಹಿತ್ತಲಗಿಡ, ಗ್ರೀನ್ ಪ್ರತಿಷ್ಠಾನ ತಳಿ ಹಾಗೂ ಸ್ವಾಮಿ ವಿವೇಕಾನಂದ ರೈತ ಸಮೂಹ, ಹೇರಿಂದ್ಯಾಪನಹಳ್ಳಿ ಇವರ ಸಂಯುಕ್ತಾಶ್ರಯದಲ್ಲಿ ಡಿಸೆಂಬರ್ ತಿಂಗಳಿನಲ್ಲಿ ಪ್ರೌಢ ಶಾಲಾ ವಿದ್ಯಾರ್ಥಿಗಳಿಗಾಗಿ, ಕನಕಪುರ ತಾಲ್ಲೂಕು ಮಟ್ಟದಲ್ಲಿ ಪರಂಪರಾಗತ ಜ್ಞಾನ ಮತ್ತು ಜೀವ ವೈವಿಧ್ಯ ಸಂರಕ್ಷಣಾ ಸ್ಪರ್ಧೆ ಹೊನ್ನೇರು - 98 ನ್ನು ಏರ್ಪಡಿಸಲಾಯಿತು. ಸ್ಪರ್ಧೆಯಲ್ಲಿ ನಾಟೀ ವೈದ್ಯ, ಜೀವ ವೈವಿಧ್ಯ ಹಾಗೂ ಪರಂಪರಾಗತ ಜ್ಞಾನ ಎಂಬ 3 ವಿಭಾಗಗಳಿದ್ದವು. ಹಳೆಯ ಕಾಲದ ಕೃಷಿ, ಜನಪದ ಸಂಸ್ಕೃತಿ ಮತ್ತು ನಾಟಿ ವೈದ್ಯಕೀಯ ಜ್ಞಾನವನ್ನು ಮಕ್ಕಳಿಂದ ದಾಖಲಿಸುವುದು ಮತ್ತು ಅದರ ಬಗ್ಗೆ ಅರಿವು ಮೂಡಿಸುವುದು ಸ್ಪರ್ಧೆಯ ಉದ್ದೇಶ.

ಪ್ರತಿಕ್ರಿಯೆ

ಹಿತ್ತಲ ಗಿಡ ಪತ್ರಿಕೆ ಕೈಸೇರಿದೆ. ತುಂಬಾ ಸಂತೋಷವಾಗಿರುತ್ತದೆ. ನಾಟಿ ತಳಿ ವೈವಿಧ್ಯಕ್ಕೆ ಮರುಜೀವ ಲೇಖನ ಚೆನ್ನಾಗಿದೆ. ನಾನು ಸೇಲಂ ಸಣ್ಣ ಎಂಬ ಹಳೆ ಬತ್ತದ ಬೆಳೆಯನ್ನು ಯಾವುದೇ ರಾಸಾಯನಿಕ ಕೊಡದೆ 2 ಎಕರೆ ಪ್ರದೇಶದಲ್ಲಿ ಬೆಳೆದಿರುತ್ತೇನೆ. (ಕೆಂಪುಸಣ್ಣ ಬತ್ತ). ಬೆಳೆ ಚೆನ್ನಾಗಿದೆ. ಮಾರುಕಟ್ಟೆ ಹಾಗೂ ಹಿತ್ತಲಗಿಡ ಕಾರ್ಯಕ್ರಮವನ್ನು ನಮ್ಮ ಊರಿನಲ್ಲಿ ಮಾಡಿದರೆ ತಮ್ಮಗಳ ಹೆಚ್ಚಿನ ಮಾರ್ಗದರ್ಶನವನ್ನು ಗ್ರಾಮಾಂತರ ಜನರಿಗೆ ಹಂಚಿದಂತೆ ಆಗುತ್ತದೆ. *(ಧನ್ಯವಾದಗಳು, ಈ ನಿಟ್ಟಿನಲ್ಲಿ ಹಿತ್ತಲಗಿಡ ಪ್ರಯತ್ನಿಸುತ್ತದೆ. ಸಂ.)*

ಎಂ. ಕೆ. ಶಂಕರಗುರು, ಕನ್ನಹಳ್ಳಿ ಅಂಚೆ, ಟಿ. ನರಸೀಪುರ ತಾಲ್ಲೂಕು.

ಡಾ // ಕಮ್ಮರಡಿಯವರೆ,

ನಿಮ್ಮ ಸಾರಥ್ಯದ ಹಿತ್ತಲಗಿಡ ಕೈಸೇರಿದೆ. ಈ ಬಗೆಯ ಪತ್ರಿಕೆಯ ಅಗತ್ಯತೆ ಮತ್ತು ಉಪಯುಕ್ತತೆಯನ್ನು ಒತ್ತಿ ಹೇಳಬೇಕಾದುದು ಅನವಶ್ಯಕ. ನನಗರಿತಂತೆ ಕನ್ನಡದಲ್ಲಿ ಇದೇ ಪ್ರಥಮವೆಂದು ಅನಿಸುತ್ತದೆ. ಇಂತಹ ಸುತ್ತ್ಯಾರ್ಹ ಪ್ರಯತ್ನವನ್ನು ಕೈಗೊಂಡಿರುವ ನಿಮಗೆ ಕರ್ನಾಟಕದ ರೈತ ಬಂಧುಗಳು ಚಿರಋಣಿಗಳಾಗಿರುತ್ತಾರೆ.

ಮಹೇಶನ್ ಐ. ಎ. ಎಸ್. (ರಿ), ಬೆಂಗಳೂರು.

ಪತ್ರಿಕೆ ನೊಂದಣಿ ಸಂಖ್ಯೆ 66842/96

ತೆರದ ಅಂಚೆ

ಚಂದಾ ವಿವರ

	ವಾರ್ಷಿಕ	ಅಜೀವ (ಹತ್ತು ವರ್ಷಗಳ ಕಾಲ)
ವಿದ್ಯಾರ್ಥಿಗಳು / ನಿರುದ್ಯೋಗಿಗಳು	40 ರೂ	400 ರೂ
ರೈತರು	50 ರೂ	500 ರೂ
ಇತರರು	60 ರೂ	600 ರೂ
ಸಂಸ್ಥೆಗಳು	350 ರೂ	2500 ರೂ
ಪೋಷಕರು	ರೂ.5000/- ಮತ್ತು ಅಧಿಕ	

(ವಿ.ಸೂ.: ಹಿತ್ತಲಗಿಡದ ನೀತಿ ತತ್ವಗಳಿಗೆ ಹೊಂದಿಕೆಯಾಗುವ ಸಮಾನ ಮನಸ್ಕ ವ್ಯಕ್ತಿ ಮತ್ತು ಸಂಸ್ಥೆಗಳಿಂದ ಮಾತ್ರ)

ಹಿತ್ತಲಗಿಡ ರೈತ, ವಿಜ್ಞಾನಿ, ವಿದ್ಯಾರ್ಥಿ ಸ್ವಯಂಸೇವಾ ಸಂಸ್ಥೆ ಮತ್ತು ವ್ಯಕ್ತಿಗಳ ಸಾಮೂಹಿಕ ಪ್ರಯತ್ನ

ಚಂದಾ ಹಣವನ್ನು ಅಂಚೆ (M.O.) ಅಥವಾ ಡ್ರಾಫ್ಟ್ / ಚೆಕ್ ಮೂಲಕ *"ಸಂಪಾದಕರು, ಹಿತ್ತಲಗಿಡ, ಬೆಂಗಳೂರು"* ಈ ವಿಳಾಸಕ್ಕೆ ಕಳುಹಿಸಬೇಕು. ತಮ್ಮ ವಿಳಾಸ, ಪಿನ್‌ಕೋಡು ಮತ್ತು ವೃತ್ತಿಯನ್ನು ಸರಿಯಾಗಿ ಬರೆದು ಕಳುಹಿಸಬೇಕು. ಚಂದಾ ಹಣವನ್ನು ನವೀಕರಿಸುವಾಗ ಇದನ್ನು ಸ್ಪಷ್ಟವಾಗಿ ತಿಳಿಸ ತಕ್ಕದ್ದು.

ಗೆ ____________________

____

____

____

ವಿಳಾಸ :
ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ
ಸಹ ಪ್ರಾಧ್ಯಾಪಕ ಮತ್ತು ಗೌರವ ಸಂಪಾದಕ ಹಿತ್ತಲಗಿಡ
ಕೃಷಿ ಅರ್ಥಶಾಸ್ತ್ರ ವಿಭಾಗ,
ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ
ಬೆಂಗಳೂರು - 560 065.
✆ 8560267 (R)

Printed by Sri S. Sridhar, Published by Smt. K. Meenakshi (Owner), printed at Navbharath Enterprises, No. 10, Sirur Park B Street, Seshadripuram, Bangalore - 560 020 and Published at No. 399, 14 - B Cross New Town Yelhanka, Bangalore - 560 064. Edited by Dr. T.N. Prakash